ಆತ್ಮೀಯ ಸಹೋದರ ಮತ್ತು ಸಹೋದರಿಯರೇ,
ತಮ್ಮೆಲ್ಲರಿಗೂ ಹೊಸ ವರ್ಷದ ಶುಭಶಯಗಳು!

ನಮ್ಮಲ್ಲಿ ಪ್ರತಿಯೊಬ್ಬರು ಹೊಸ ವರ್ಷವನ್ನು ಉತ್ತಮ್ಮವಾದ ರೀತಿಯಲ್ಲಿ ಪ್ರಾರಂಭಿಸಲು ಯೋಚಿಸುತ್ತಿದ್ದೇವೆ. ಈ ಪ್ರಯುಕ್ತವಾಗಿ ಸಹೋದರ ಸೈಜುಸ್ ಅವರು ತಮ್ಮ ಬಹಳ ಪರಿಶ್ರಮದಿಂದ ನಮ್ಮೆಲ್ಲರ ಅನುದಿನದ ಆರಾಧನೆಗಾಗಿ "ದೇವರ ಹಸ್ತ" ಎಂಬ ಕಿರು ಪುಸ್ತಕವನ್ನು ಹೊರತಂದಿರುತ್ತಾರೆ,

ನಾವೆಲ್ಲರೂ ಪ್ರತಿದಿನ ಆರಾಧನೆ ಮಾಡುತ್ತಾ, ಪ್ರಚಾರದಲ್ಲಿ ಪಾಲ್ಗೊಳ್ಳುತ್ತಾ, ದೇವರೊಂದಿಗಿನ ಸಂಬಂಧದಲ್ಲಿ ಹತ್ತಿರ ಬೆಳೆಯುತ್ತಾ, ನಮ್ಮ ನಂಬಿಕೆಯನ್ನು ಹಂಚಿಕೊಳ್ಳೋಣ ಎಂದು ಪ್ರಾರ್ಥಿಸುತ್ತೇವೆ.

ನಾವೆಲ್ಲರು ಹೃದಯಪೂರ್ವಕವಾಗಿ ಇದರಲ್ಲಿ ಭಾಗವಹಿಸಿ ಒಬ್ಬರನೊಬ್ಬರು ಉತ್ಸಾಹಪಡಿಸುತ್ತಾ ಉತ್ತಮವಾದದ್ದನ್ನು ಮಾಡಲೆಂದು ಪ್ರಾರ್ಥಿಸುತ್ತೇವೆ.

ನಾವೆಲ್ಲರು ವೈಯುಕ್ತಿಕವಾಗಿ ಮತ್ತು ಆತ್ಮೀಕವಾಗಿ ಉತ್ತಮ್ಮವಾಗಿ ಬೆಳೆದು ಈ ವರ್ಷ ಉತ್ತಮವಾಗಿರಲೆಂದು ಪ್ರಾರ್ಥಿಸೋಣ.

ಇಂತಿ
ದಿನೇಶ ಜಾರ್ಜ್

# ದೇವರ ಕೈ

ಕೀರ್ತನೆ 8:1-4 ನಮ್ಮ ದೇವರಾದ ಯೆಹೋವನೇ, ನಿನ್ನ ಹೆಸರು ಭೂಮಿಯಲ್ಲೆಲ್ಲಾ ಎಷ್ಟೊ ಶ್ರೇಷ್ಠವಾಗಿದೆ. ನಿನ್ನ ಮಹಿಮೆ ಉನ್ನತಾಕಾಶಗಳ ಮೇಲಿರುವುದು.

2. ಶತ್ರುವನ್ನೂ ಮುಯ್ಯಿಗೆ ಮುಯ್ಯಿ **ಕೊಡುವವನನ್ನೂ**, ನಿನ್ನ ವೈರಿಗಳನ್ನೂ ಸುಮ್ಮನಾಗಿರಿಸಲು, ನಾನು ಶಿಶುಗಳ ಮತ್ತು ಎಳೆ ಕೂಸುಗಳ ಬಾಯಿಂದ ಸ್ತೋತ್ರ ಬರುವಂತೆ ಮಾಡಿದ್ದೀರಿ.

3. ನಿನ್ನ ಸೃಷ್ಟಿಯಾದ ಆಕಾಶವನ್ನು ಪರಿಗಣಿಸಿದಾಗ, ನಿನ್ನ ಬೆರಳುಗಳು ಮಾಡಿದ ಕೆಲಸವನ್ನು ನಾನು ನೋಡಿದಾಗ, ಆಕಾಶ, ಚಂದ್ರ ಮತ್ತು ನಕ್ಷತ್ರಗಳನ್ನು ಅವುಗಳ ಸ್ಥಾನದಲ್ಲಿ ಇರಿಸಿದ್ದೀ?.

4. ನೀನು ಮನುಷ್ಯರನ್ನು ನೆನೆಸಲು ಅವನು ಎಷ್ಟರವನು? ಅವನನ್ನು ದರ್ಶಿಸಲು ನರಪುತ್ರನು ಎಷ್ಟರವನು? ದೇವರ ಮಹಿಮೆ ಉನ್ನತಾಕಾಶಗಳ ಮೇಲೆ ಮತ್ತು ಭೂಮಿಯಲ್ಲೆಲ್ಲ ವ್ಯಕ್ತವಾಗಿದೆ.

ಇತ್ತೀಚೆಯ ಪ್ರಯೋಗಗಳ ಊಹೆಯ ಪ್ರಕಾರ ನಮ್ಮ ಪ್ರಪಂಚದಲ್ಲಿ 100 ರಿಂದ 200 ಲಕ್ಷ ಕೋಟಿ ನಕ್ಷೆತ್ರಗಳಿವೆ.

ಜರ್ಮನಿಯಲ್ಲಿರುವ ಉತ್ಕೃಷ್ಟ ಗಣಕಯಂತ್ರಗಳ ಎಣಿಕೆ ಅದನ್ನು 50000 ಕೋಟಿಗೇರಿಸಿದೆ. ಒಂದು ಮಾತಿನಲ್ಲಿ ಹೇಳಬೇಕೆಂದರೆ ಕ್ಷೀರಪಥದಲ್ಲಿರುವ ಒಂದೊಂದು ನಕ್ಷತ್ರಕ್ಕೂ ಒಂದೊಂದು ಕ್ಷೀರಪಥವಿರಲಿಕ್ಕೂ ಸಾದ್ಯ.

ನಾವು ಕ್ಷೀರಪಥದಲ್ಲಿರುವ ಒಂದೊಂದು ನಕ್ಷತ್ರವನ್ನು ಒಂದೊಂದು ಕ್ಷಣದಲ್ಲಿ ಎಣಿಕೆ ಮಾಡುತ್ತಾ ಹೋದರೆ ನಮಗೆ 2500 ವರ್ಷಗಳು ಎಣಿಕೆ ಮಾಡಲು ಬೇಕಾಗುತ್ತವೆ. ಹಾಗಾದರೆ, ಊಹೆಮಾಡಿನೋಡಿ ನಮ್ಮ ಪ್ರಪಂಚ ಎಷ್ಟು ವಿಸ್ತಾರವಾಗಿರಬಹುದು??

ವಚನ-3ರ ಪ್ರಕಾರ, ನಿನ್ನ ಸೃಷ್ಟಿಯಾದ ಆಕಾಶವನ್ನು ಪರಿಗಣಿಸಿದಾಗ, ನಿನ್ನ ಬೆರಳುಗಳು ಮಾಡಿದ ಕೆಲಸವನ್ನು ನೋಡಿದಾಗ ಆಕಾಶ, ಚೆಂದ್ರ, ಮತ್ತು ನಕ್ಷೆತ್ರಗಳನ್ನು ಅವುಗಳ ಸ್ಥಾನದಲ್ಲಿ ಇರಿಸಿದ್ದೀ.

ಇಡೀ ಪ್ರಪಂಚವು ಪರಲೋಕದಲ್ಲಿರುವ ನಮ್ಮ ತಂದೆಯ ಬೆರಳುಗಳು ಮಾಡಿದ ಕೆಲಸವೆಂದು ತಿಳಿಯಲು ಆಶ್ಚರ್ಯವಾಗುತ್ತದೆ. ಹಾಗಾದರೆ, ಆತನ ಕೈ ಎಷ್ಟು ದೊಡ್ಡದಾಗಿದೆ.? ಆತನು ಎಷ್ಟು ಬಲಿಷ್ಠನು?

ಯೆಶಾಯ 41:10 ರಲ್ಲಿ ಕರ್ತನು ಇಸ್ರಾಯೇಲ್ಯರಿಗೆ ಹೀಗೆನ್ನುತ್ತಾನೆ."ನೀನಂತೂ ಹೆದರಬೇಡ ಏಕೆಂದರೆ ನಾನೇ ನಿನ್ನ ದೇವರು, ನಾನೇ ನಿನ್ನನ್ನು ಬಲಪಡಿಸುತ್ತೇನೆ. ನಾನು ನಿನಗೆ ಸಹಾಯಮಾಡುತ್ತೇನೆ. ನನ್ನ ನೀತಿಯ ಬಲಗೈಯಿಂದ ನಿನ್ನನ್ನು ಎತ್ತಿಹಿಡಿಯುತ್ತೇನೆ,"

ಯೋಚಿಸಿ ನೋಡಿ, ನಮ್ಮ ಸರ್ವಶಕ್ತನಾದ ದೇವರ ಬೆರಳುಗಳು ನೂರಾರು ಲಕ್ಷಕೋಟಿ

ನಕ್ಷತ್ರಗಳನ್ನು ಉಂಟು ಮಾಡಿ, ಅವುಗಳನ್ನು ಅದರ ಸ್ಥಾನದಲ್ಲಿ ಇರಿಸಿವೆ, ಅದೇ ಕೈಗಳು ನಿನ್ನನ್ನು ಎತ್ತಿ ಹಿಡಿಯುವುದು ಎಷ್ಟೊಂದು ಅದ್ಭುತವಲ್ಲವೇ?

ನಾವು "ದೇವರ ಕೈ" ಎಂಬ ಶೀರ್ಷಿಕೆಯಡಿ ಕೆಲವು ಪಾಠಗಳನ್ನು ಕಲಿಯಲ್ಲಿದ್ದೇವೆ. ಈ ಪಾಠಗಳು ನಮ್ಮ ನಂಬಿಕೆಯನ್ನು ದೃಢಪಡಿಸಿ, ಪರಲೋಕದಲ್ಲಿರುವ ನಮ್ಮ ತಂದೆಯ ಅದ್ಭುತವಾದ ಸರ್ವಶಕ್ತಿಯಲ್ಲಿ ಪೂರ್ಣಭರವಸೆಯಿಡಲು ಸಾಹಾಯ ಮಾಡುತ್ತವೆ.

ವಿಮೋಚನಕಾಂಡ 6:6 "ಆದ್ದರಿಂದ ಇಸ್ರಾಯೇಲ್ಯರಿಗೆ, ನಾನೇ ಯೇಹೋವನು. ನಾನು ನಿಮ್ಮನ್ನು **ಈಜಿಪ್ಟಿನ** ಬಿಟ್ಟೆ ಕೆಲಸಗಳಿಂದ ಅವರ ದಾಸತ್ವದಿಂದಲೂ ನಿಮ್ಮನ್ನು **ಬಿಡಿಸಿ** ನಾನು ಚಾಚಿದ ಬಾಹುವಿನಿಂದಲೂ, ದೊಡ್ಡ ನ್ಯಾಯ ತೀರ್ಪುಗಳಿಂದಲೂ ನಿಮ್ಮನ್ನು ನನ್ನ ಜನರನ್ನಾಗಿ ತೆಗೆದುಕೊಂಡು ನಿಮಗೆ ದೇವರಾಗುವೆನು"

ಇಸ್ರಾಯೇಲ್ಯರು **ಈಜಿಪ್ಟಿನ** ವರಿಗೆ ನೂರಾರು ವರ್ಷಗಳು ದಾಸರಾಗಿದ್ದರು. ಆ ಬಲಿಷ್ಠ ದೇಶ ಅವರನ್ನು ದಬ್ಬಾಳಿಕೆ ಮಾಡುತ್ತಿತ್ತು. ಅವರ ಸ್ವಂತ ಶಕ್ತಿಯಿಂದ ಬಿಡುಗಡೆ ಹೊಂದಲು ಇಸ್ರಾಯೇಲ್ಯರಿಗೆ ಖಂಡಿತ ಸಾಧ್ಯಾವಿರಲಿಲ್ಲ. ಆದರೆ, ದೇವರು ಅವರಲ್ಲಿ ಕರುಣೆ ತೋರಿಸಿ, ತುಂಬಾ ಅನುಕಂಪದಿಂದ ಅವರನ್ನು ದಾಸತ್ವದಿಂದ ಬಿಡುಗಡೆ ಮಾಡುತ್ತೇನೆಂದು ವಾಗ್ದಾನ ಮಾಡುತ್ತಿದ್ದಾರೆ.

"ಚಾಚಿದ ಬಾಹುವಿನಿಂದಲೂ ದೊಡ್ಡ ನ್ಯಾಯ ತೀರ್ಪುಗಳಿಂದಲೂ" ನಿಮ್ಮನ್ನು ಬಿಡುಗಡೆ ಮಾಡುತ್ತೇನೆಂದು ದೇವರು ಅವರಿಗೆ ವಾಗ್ದಾನ ಮಾಡುತ್ತಾರೆ,

ನಮಗೆ ಗೊತ್ತಿದೆ, ಹೇಗೆ **ಈಜಿಪ್ಟಿನ** ವಿರುದ್ಧ ದೇವರ ಚಾಚಿದ ಬಾಹುಗಳು, 10 ಭಯಂಕರ ಬಾಧೆಗಳಿಂದ ಮತ್ತು ಕೆಂಪು ಸಮುದ್ರವನ್ನು **ವಿಭಾಗಿಸಿ**, ಆಶ್ಚರ್ಯವಾದ ರೀತಿಯಲ್ಲಿ ಅವರನ್ನು ಬಿಡುಗಡೆ ಮಾಡಿ, ಇಸ್ರಾಯೇಲ್ಯರನ್ನು ಒಂದು ಜನಾಂಗವ**ನ್ನಾ**ಗಿ ಮಾಡಿ ವಾಗ್ದಾನ ಮಾಡಿದ ದೇಶದಲ್ಲಿ ಇರಿಸಿದರು.

ಆನಂತರ ದೇವರು ಇಸ್ರಾಯೇಲ್ಯರೊಡನೆ ಸಮಾಲೋಚನೆ ಮಾಡಿ, ನನಗಿಂತಲೂ ಬೇರೆ ದೇವರಿಲ್ಲ ಎಂದು ಜ್ಞಾ ಸುತ್ತಿದ್ದಾರೆ.

ಧರ್ಮೋಪದೇಶ ಕಾಂಡ:4:34 "ನಿಮ್ಮ ದೇವರಾದ ಯೇಹೋವನು ಈಜಿಪ್ಟಿನಲ್ಲಿ ನಿಮ್ಮ ಕಣ್ಣುಗಳ ಮುಂದೆ ನಿಮಗೆ ಮಾಡಿದ್ದೆಲ್ಲಾದರ ಹಾಗೆ ಯಾವ ದೇವರು ಒಂದು ಜನಾಂಗವನ್ನು ಮತ್ತೊಂದು ಜನಾಂಗದ ಮಧ್ಯದಿಂದ ಶೋಧನೆಗಳು, ಗುರುತುಗಳು, ಅದ್ಭುತಗಳು ಇವುಗಳ ಮೂಲಕವಾಗಿಯೂ ಯುದ್ಧದಿಂದಲೂ ಭುಜಬಲದಿಂದಲೂ ಚಾಚಿದ ತೋಳಿನಿಂದಲೂ ದೊಡ್ಡ ಭಯಗಳಿಂದಲೂ ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡಿದನೋ?"

ಧರ್ಮೋಪದೇಶ ಕಾಂಡ 5:15 "ನೀನು ಈಜಿಪ್ಟ್ ದೇಶದಲ್ಲಿ ದಾಸನಾಗಿದ್ದಿ ಎಂದೂ ನಿನ್ನ ದೇವರಾದ ಯೇಹೋವನು ನಿನ್ನನ್ನು ಅಲ್ಲಿಂದ ಬಲವಾದ ಕೈಯಿಂದಲೂ ಚಾಚಿದ ತೋಳಿನಿಂದಲೂ ಹೊರಗೆ ಬರಮಾಡಿದನೆಂದೂ ಜ್ಞಾಪಕ ಮಾಡಿಕೊಳ್ಳಬೇಕು.



ಸಾವಿರಾರು ವರ್ಷಗಳ ನಂತರ ಅದೇ ಗೃಹದಲ್ಲಿ ವಾಸವಾಗಿರುವ ನಮ್ಮೆಲ್ಲರಿಗೆ ಈ ವಿಷಯಗಳ ಬಗ್ಗೆ ಏನನಿಸುತ್ತಿದೆ?

ಧರ್ಮೋಪದೇಶ ಕಾಂಡ 7"19 "ನಿಮ್ಮ ಕಣ್ಣುಗಳು ನೋಡಿದ ದೊಡ್ಡ ಉಪದ್ರವಗಳನ್ನೂ ನಿಮ್ಮ ದೇವರಾದ ಯೆಹೋವನು ನಿಮ್ಮನ್ನು ಹೊರಗೆ ಬರಮಾಡಿದಾಗ ಉಂಟಾದ ಗುರುತುಗಳನ್ನೂ, ಅದ್ಭುತಗಳನ್ನೂ ಬಲವಾದ ಕೈಯನ್ನೂ ಚಾಚಿದ ತೋಳನ್ನೂ ನೀವು ಚೆನ್ನಾಗಿ ಜ್ಞಾಪಕ ಮಾಡಬೇಕು. ನೀವು ಯಾವ ಜನಗಳಿಗೆ ಭಯ ಪಡುತ್ತೀಯೋ ಆ ಜನಗಳಿಗೆಲ್ಲಾ ನಿಮ್ಮ ಯೆಹೋವನಾದ ದೇವರು ಹಾಗೆಯೇ ಮಾಡುವನು

ದೇವರು ನಮಗಾಗಿ ಏನು ಮಾಡುವನು? ನಾವು ಯಾವ ಜನಗಳಿಗೆ ಹೆದರುತ್ತೇವೋ, ಆ ಜನಗಳಿಗೆಲ್ಲಾ ನಮ್ಮ ಯೆಹೋವನಾದ ದೇವರು ಹಾಗೆಯೇ ಮಾಡುವನು.

ದೇವರ ಕೈ ನಿನ್ನ ಮೇಲಿದೆ ಎಂದು ನೀನು ನಂಬುತ್ತೀಯೋ? ನಮ್ಮ ದೇವರು ಅವರೇ, ನಮ್ಮ ಮೇಲಿರುವ ್ರೀತಿಯು ಒಂದೇ ತರವಾಗಿದೆ, ಏನೂ ವ್ಯತ್ಯಾಸವಿಲ್ಲ. ನಮ್ಮ ಜೀವನದಲ್ಲಿಯೂ ಅವರು ಖಂಡಿತ ನಂಬಲಾಸ್ಯಧ್ಯವಾದ ಕಾರ್ಯಗಳನ್ನು ಮಾಡುತ್ತಾರೆ, ಆದರೆ, ನಾವು ಅವರಿಗೆ ಭಯಪಡಬೇಕು (ಅವರನ್ನು ್ರೀತಿಸಿ ಭಯ ಭಕ್ತಿಗಳಿಂದ ಕಾಣಬೇಕು)

ಮುಂದಿನ ಕೆಲವು ಪಾಠಗಳಲ್ಲಿ, ವಿಮೋಚನಾಕಾಂಡದ ಬಳಿಕ ಜೀವಿಸಿದ ಕೆಲವು ಜನರ ಜೀವನದಲ್ಲಿ ದೇವರು ಮಾಡಿದ ವಾಗ್ದಾನ ಹೇಗೆ ನೆರವೇರಿತು ಎಂಬುದನ್ನು ನೋಡೋಣ.

ದೇವರ ಕೈ

## ದಿನ -1

## ದೇವರ ಕೈ ನಮ್ಮ ಅವಶ್ಯಕತೆಗಳನ್ನೆಲ್ಲ ಪೂರೈಸುತ್ತದೆ.

ಧರ್ಮೋಪದೇಶಕಾಂಡ 11:1-4 "ಹೀಗಿರುವುದರಿಂದ ನಿಮ್ಮ ದೇವರಾದ ಯೆಹೋವನನ್ನು ್ರೀತಿಮಾಡಿ ಆತನ ಅಪ್ಪಣೆ ನಿಯಮ, ನ್ಯಾಯ, ಅಜ್ಞೆಗಳನ್ನು ಯಾವಾಗಲೂ ಕೈಕೊಳ್ಳಬೇಕು.

2. ನಿಮಗೆ ಈ ಹೊತ್ತು ತಿಳಿಯಬೇಕಾದದ್ದೇನೆಂದರೆ, ನಿಮ್ಮ ದೇವರಾದ ಯೆಹೋವನು ಮಾಡಿದ **ಶಿ**ಕ್ಷೆಯನ್ನೂ ಆತನ ಮಹತ್ವವನ್ನೂ ಆತನ ಬಲವಾದ ಕೈಯನ್ನೂ ಆತನೂ ಚಾಚಿದ ತೋಳನ್ನೂ

3. ಆತನೂ ಈಜಿಪ್ಟ್ ಮಧ್ಯದಲ್ಲಿ ಈಜಿಪ್ಟ್ ಅರಸನಾದ ಫರೋಹನಿಗೆ ಮತ್ತು ಅವನ ಎಲ್ಲಾ ದೇಶಕ್ಕೆ ಮಾಡಿದ ಆತನ ಸೂಚಕ ಕಾರ್ಯಗಳನ್ನು ಆತನ ಕೃತ್ಯಗಳನ್ನೂ,
4. ಈಜಿಪ್ಟ್ ಸೈನ್ಯಕ್ಕೆ ಅವರ ಕುದುರೆಗಳಿಗೆ ಮತ್ತು ರಥಗಳಿಗೆ ಮಾಡಿ**ದ್ದ**ನ್ನೂ ಅವರು ನಿಮ್ಮನ್ನು ಹಿಂದುಟ್ಟುವಾಗ **ಕೆಂಪು** ಸಮುದ್ರದ ನೀರನ್ನು* ನಾಶಮಾಡಿದ್ದನ್ನೂ **ಜ್ಞಾ ಸಿರಿ**.

* **ಅವರ ಮೇಲೆ ಬರಮಾಡಿ ಸಂಪೂರ್ಣವಾಗಿ ಅವರನ್ನು** ಈ ಲೋಕದಲ್ಲಿರುವ ಜನರಿಗೆ ತನ್ನ ್ರೀತಿಯನ್ನು ವ್ಯಕ್ತಗೊಳಿಸಲು ಮತ್ತು ಅವರು ತನ್ನನ್ನು ್ರೀತಿಸಲು ಸಾಹಾಯವಾಗುವಂತೆ ದೇವರು ವಿಸ್ಮಯಗೋಳಿಸುವ ಅದ್ಭುತ ಕಾರ್ಯಗಳನ್ನು ಅವರ ಬಲವಾದ ಕೈಯಿಂದಲೂ, ಚಾಚಿದ ತೋಳಿನಿಂದಲೂ ಮಾಡಿದರೆಂಬುದನ್ನು ಜ್ಞಾ ಸಿಕೊಳ್ಳೋಣ.

ಇಸ್ರಾಯೇಲ್ಯರು ಕೆಂಪು ಸಮುದ್ರವನ್ನು ದಾಟಿ ಮರುಭೂಮಿಯೊಳಗೆ ಹೋದಾಗ ನಡೆದ ಒಂದು ಘಟನೆಯನ್ನು ನಾವು ನೋಡೋಣ. ದೇವರು ಪ್ರತಿದಿನ ಅವರಿಗೆ ತಿನ್ನಲು ಪರಲೋಕದಿಂದ ಮನ್ನವನ್ನು ಸುರಿಸಿದನು. ಆದರೂ ಅವರು ತೃಪ್ತರಾಗದೆ ಗೊಣಗುಟ್ಟಲು ಶುರುಮಾಡಿದರು.

ಆರಣ್ಯಕಾಂಡ 11:4-6"ಅವರೊಳಗಿದ್ದ ಮಿಶ್ರ ಗುಂ ನ ಜನರು ಮಾಂಸಕ್ಕಾಗಿ ದುರಾಶೆಪಟ್ಟರು. ಇಸ್ರಾಯೇಲರು ಸಹ ತಿರುಗಿ ಅತ್ತುನಮಗೆ ಮಾಂಸವನ್ನು **ತಿನ್ನುವುದಕ್ಕೆ** ಕೊಡುವವರು ಯಾರು? 5. ನಾವು ಈಜಿಪ್ಟ್ ದೇಶದಲ್ಲಿ ಉಚಿತವಾಗಿ ತಿಂದ ಮೀನನ್ನೂ ಸವತೆಕಾಯಿಯನ್ನು ಕರ್ಬುಜಗಳನ್ನು ಕಾಡುಳ್ಳಿ ಈರುಳ್ಳಿ ಬೆಳ್ಳುಳ್ಳಿಗಳನ್ನೂ ಜ್ಞಾ ಸಿಕೋಳ್ಳುತ್ತೇವೆ.

6. ಆದರೆ, ಈಗ ನಮ್ಮ ಪ್ರಾಣವು ಬತ್ತಿಹೋಯಿತು, ಈ ಮನ್ನವಲ್ಲದೆ ಬೇರೆ ಯಾವುದು ನಮ್ಮ ಕಣ್ಣುಗಳ ಮುಂದೆ ಇರುವುದಿಲ್ಲ ಎಂದರು."

ಜನರ ಕೃತಜ್ಞತೆಯಿಲ್ಲದ ಹೃದಯ ಮತ್ತು ಅವರ **ಗೊಣಗು**ಟ್ಟುವಿಕೆಯನ್ನು ನೋಡಿ ದೇವರು ಬಹಳ ಕೋಪಗೊಂಡನು.

ಜನರ ಮನೋಭಾವನೆಯನ್ನು ನೋಡಿ ಮೋಶೆ ನಿಜವಾಗಿಯೂ ಬಹಳ ಕುಗ್ಗಿಹೋದನು.

ಅರಣ್ಯಕಾಂಡ11:11-15 "ಮೋಶೆಯು ಯೆಹೋವನಿಗೆ" ನಿನ್ನ ಸೇವಕನ ಮೇಲೆ ತೊಂದರೆಯನ್ನು ಏಕೆ ತಂದಿದ್ದಿ? ಈ ಎಲ್ಲಾ ಜನರ ಭಾರವನ್ನು ನನ್ನ ಮೇಲೆ ಹಾಕುವಂತೆ ನಿನ್ನನ್ನು ಅತೃ್ತಗೊಳಿಸಲು **ನಾನೇನು** ಮಾಡಿದ್ದೇನೆ? 12. ನಾನು ಈ ಎಲ್ಲಾ ಜನರನ್ನು ಗರ್ಭಧರಿಸಿ ಜನ್ಮ ಕೋಟ್ಟಾತನೋ? ಇತರ ತೃಗಳಿಗೆ ನೀನು ವಾಗ್ದಾನ ಮಾಡಿದ ದೇಶಕ್ಕೆ ದಾದಿಯು ಹಸುಗೂಸನ್ನು ಎತ್ತಿಕೊಂಡು ನಡೆಸಬೇಕೆಂದು ನೀನು ನನಗೇಕೆ ಹೇಳಿದ್ದಿ?

13. ಈ ಸಮಸ್ತ ಜನರಿಗೆ ಕೊಡುವುದಕ್ಕೆ ಮಾಂಸವು ನನಗೆಲ್ಲಿದೊರಕುವುದು? ನಮಗೆ ತಿನ್ನಲು ಮಾಂಸವನ್ನು ಕೊಡು ಎಂದು ನನ್ನ ಬಳಿಯಲ್ಲಿ ಅಳುತ್ತಿದ್ದಾರೆ. 14. ನಾನು ಒಬ್ಬಂಟಿಗನಾಗಿ ಈ ಸಮಸ್ತ ಜನರನ್ನು ಹೊತ್ತುಕೊ**ಳ್ಳು**ವುದಕ್ಕೆ ಶಕ್ತನಲ್ಲ. ಅದು ನನಗೆ ಅತೀದೊಡ್ಡ ಭಾರವಾಗಿದೆ.

15. ಈ ರೀತಿಯಲ್ಲಿ ನೀನು ನನ್ನನ್ನು ನಡೆಸುವುದಾದರೆ ಈಗಲೆ ನನ್ನನ್ನು ಕೊಂದುಬಿಡು. ನಿನ್ನ ದೃಷ್ಟಿಯಲ್ಲಿ ನನಗೆ ದಯೆ ದೊರೆತರೆ ನಾನು ನಿನ್ನ ನಾಶವನ್ನು ಎದುರಿಸುವಂತೆ ಕಾಪಾಡು ಎಚಿದನು ಆಗ ದೇವರು ಒಂದು ಪರಿಹಾರವನ್ನು ಕೊಟ್ಟರು.



ಆರಣ್ಯಕಾಂಡ11:18-23 "ಜನರಿಗೆ ನೀನು ನಾಳೆಗಾಗಿ ನಿಮ್ಮನ್ನು ಪರಿಶುದ್ಧ ಮಾಡಿಕೊಳ್ಳಿರಿ. ಆಗ ಮಾಂಸವನ್ನು ತಿನ್ನುವಿರಿ ನಮಗೆ ಯಾವನು ಮಾಂಸವನ್ನು ತಿನ್ನುವುದಕ್ಕೆ ಕೊಡುವನು? **ಈಜಿ್ಟ** ದೇಶದಲ್ಲಿ ನಮಗೆ ಒಳ್ಳೆಯದು ಇತ್ತು ಎಂದು ಹೇಳಿ ಯೆಹೋವನು ಕೇಳುವಂತೆ ಅತ್ತಿರಿ ಆದ ಕಾರಣ ಯೆಹೋವನು ನಿಮಗೆ ತಿನ್ನುವುದಕ್ಕೆ ಮಾಂಸವನ್ನು ಕೊಡುವನು ಮತ್ತು ನೀವು ಅದನ್ನು ತಿನ್ನುವಿರಿ. 19. ನೀವು ತಿನ್ನುವುದು ಒಂದು ದಿನವಲ್ಲ ಎರಡು ದಿನವೂ ಅಲ್ಲ. ಐದು ದಿನವೂ ಅಲ್ಲ. ಹತ್ತು ದಿನವಲ್ಲ ಇಪ್ಪತ್ತು ದಿನವೂ ಅಲ್ಲ. 20.ಅದು ನಿಮ್ಮ ಮೂಗಿನಿಂದ ಬಂದು ನಿಮಗೆ ಅಸಹ್ಯವಾಗುವ ತನಕ ಪೂರ್ತಿ ತಿಂಗಳವರೆಗೆ ಮಾಂಸವನ್ನು ತಿನ್ನುವಿರು. ನಿಮ್ಮ ಮಧ್ಯದಲ್ಲಿರುವ ಯೆಹೋವನನ್ನು ನೀವು ಆಲಕ್ಷ್ಯಮಾಡಿ ಆತನ ಎದುರಿನಲ್ಲಿ ಅತ್ತು ನಾವು ಏಕೆ **ಈಜಿಪ್ಟನಿಂದ** ಬಂದೆವು ಎಂದು ಹೇಳುತ್ತಿರಲ್ಲಾ ಎಂದು ಹೇಳು ಎಂದರು.

21.ಆದರೆ, ಮೋಶೆಯು, ನನ್ನ ಸಂಗಡ ಇರುವ ಜನರು ಆರುಲಕ್ಷ ಕಾಲಾಳುಗಳು. ಅವರು ಒಂದು ತಿಂಗಳು ಪೂರ್ತಿ ತಿನ್ನುವ ಹಾಗೆ ಅವರಿಗೆ ನಾನು ಮಾಂಸವನ್ನು ಕೊಡುವೆನೆಂದು ನೀನು ಹೇಳಿದೆ.

22.ಅವರಿಗೆ ಸಾಕಾಗುವ ಹಾಗೆ ಕುರಿದನಗಳನ್ನು ಅವರಿಗೋಸ್ಕರ **ಕೊಯೂಬೇಕೋ?** ಅವರಿಗೆ ಸಾಕಾಗುವ ಹಾಗೆ ಸಮುದ್ರದ ಮೀನುಗಳನೆಲ್ಲಾ ಕೊಡಿಸಿ ತರಬೇಕೋ? ಎಂದು ಕೇಳಲು 23.ಯೆಹೋವನು ಮೋಶೆಗೆ ಯೆಹೋವನ ಕೈ ಮೋಟುಗೈಯೋ? ನನ್ನ ಮಾತು ನೆರೆವೇರುತ್ತದೋ ಇಲ್ಲವೋ ಎಂದು ನೀನು ನೋಡುವೆ "ಎಂದನು." ದೇವರು ಅವರ ಮೇಲೆ, ಅವರ ಮನೋಭಾವನೆಯನ್ನು ನೋಡಿ ಬಹಳ ಕೋಪಗೋಂಡರೂ, ಮಾಂಸವನ್ನು ತಿನ್ನಲು ಕೋಡುತ್ತೇನೆಂದು ಮಾತುಕೊಟ್ಟನು.

ಆದರೆ ಮೋಶೆಗೆ ಅದರ ಬಗ್ಗೆ ಸಂದೇಹವಿತ್ತು ವಚನ21-ರಲ್ಲಿ"ಮೋಶೆ"ನನ್ನ ಸಂಗಡ ಇರುವ ಜನರು ಆರುಲಕ್ಷ ಕಾಲುಳುಗಳು. ಅವರು ಒಂದು ತಿಂಗಳು ಪೂರ್ತಿ ತಿನ್ನುವ ಹಾಗೆ ಅವರಿಗೆ ನಾನು ಮಾಂಸವನ್ನು ಕೊಡುವೆನೆಂದು ನೀನು ಹೇಳಿದೆ 22 ಅವರಿಗೆ ಸಾಕಾಗುವ ಹಾಗೆ ಕುರಿದನಗಳನ್ನು ಅವರಿಗೋಸ್ಕರ ಕೊಯ್ಯೊಬೇಕೋ? ಅವರಿಗೆ ಸಾಕಾಗುವ ಹಾಗೆ ಸಮುದ್ರದ ಮೀನುಗಳನ್ನೆಲ್ಲಾ ಕೊಡಿಸಿ ತರಬೇಕೋ ಎಂದು ಕೇಳಿದನು.

23.ಯೆಹೋವನ ಮೋಶೆಗೆ ಉತ್ತರವಾಗಿ "ಯೆಹೋವನ ಕೈ ಮೋಟಗೈಯೋ? ನನ್ನ ಮಾತು ನೆರವೇರುತ್ತದೋ ಇಲ್ಲವೋ ಎಂದು ನೀನು ನೋಡುವೆ, ಎಂದನು"

ಅಲ್ಲಿ 10 ಲಕ್ಷಕ್ಕೂ ಮೇಲ್ಪಟ್ಟು ಜನರಿದ್ದರು ಮೋ**ಶೆ**ಗೆ ಮರುಭೂಮಿಯಲ್ಲಿ ಹತ್ತು ಲಕ್ಷಕ್ಕೂ ಮೀರುವ ಜನರಿಗೆ ಯಾವ ರೀತಿಯಿಂದ ಮಾಂಸವನ್ನು ಕೊಡಲು ಯಾರಿಂದ ಸಾದ್ಯವೆಂದು ಅಚ್ಚರಿ ಪಟ್ಟನು. ದೇವರು "ನಾನು ಒಂದು ತಿಂಗಳು ಪೂರ್ತಿ ಅವರಿಗೆ ಮಾಂಸವನ್ನು ಕೋಡುತ್ತೇನೆಂದು" ಮಾತು ಕೊಟ್ಟನು. ದೇವರು ಒಂದೆರಡು ದಿನವಲ್ಲ ಪೂರ್ತಿ ಒಂದು ತಿಂಗಳು

ಅವರಿಗೆ ತಿನ್ನಲು ಮಾಂಸವನ್ನು ಕೊಡಲು ತಯಾರಿದ್ದನು.

ಆದರೆ ಮೋಶೆಗೆ ಅದು ಅಸಾಧ್ಯವೆನಿಸಿತು. ಹಾಗೆಯೇ ತನ್ನ ಭಾವನೆಯನ್ನು ದೇವರಿಗೆ ಸ್ಪಷ್ಟವಾಗಿ ಹೇಳಿದನು. ಅದಕ್ಕೆ ದೇವರ ಉತ್ತರವೇನು? ವಚನ23-ಯೆಹೋವನು ಮೋಶೆಗೆ ಯೆಹೋವನ ಕೈ ಮೋಟಗೈಯೋ? ನನ್ನ ಮಾತು ನೆರವೇರುತ್ತದೋ ಇಲ್ಲವೋ ಎಂದು ನೀನು ನೋಡುವಿ ಎಂದನು.

ನಿಮ್ಮ ಜೀವನದಲ್ಲಿ ನಿಮಗಿರುವ ಯಾವ ಅವಶ್ಯಕತೆಗಳು ಆದರೆ, ಆ ಅವಶ್ಯಕತೆಗಳನ್ನು ಪೊರೈಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ನಿಮಗೆನಿಸಿದೆ? ನೀವು ಯಾವುದಕ್ಕಾದರೂ ಬಹಳವಾಗಿ ಪ್ರಾರ್ಥಿಸಿ, ಅದು ಯಾರಿಂದಲೂ ಸಾದ್ಯವಾಗದು ಎಂದು ನೆನೆದು ಪ್ರಾರ್ಥಿಸುವುದನ್ನು ಬಿಟ್ಟಿದ್ದೀರಿ?

ನಾವು ದೇವರಿಗೆ ವಿರೋಧವಾಗಿ ಮಾಡುವ ಒಂದು ಘೋರವಾದ ತಪ್ಪೆಂದರೆ ಅವರನ್ನು ನಿರ್ಲಕ್ಷಿಸುವುದು. ನಿರ್ಲ**ಕ್ಷಿ**ಸುವುದು ಎಂದರೆ, "ಅವರನ್ನು ಕಡೆಗಣಿಸುವುದು ಅಥವಾ ತಿರಸ್ಕರಿಸುವುದು" ನಾವು ದೇವರನ್ನು ಹೇಗೆ ಕಡೆಗಣಿಸಬಹುದು? ನಮಗೆ ಬೇಕಾದದ್ದನ್ನು ದೇವರಿಂದ ಕೊಡಲು ಸಾದ್ಯವಿಲ್ಲ ಎಂದು ನಂಬುವುದು ಮತ್ತು ಇತರರಿಗೆ ಅದನ್ನು ವ್ಯಕ್ತಪಡಿಸುವುದು ಅದರಿಂದ ದೇವರು ಬಲಹೀನ ಎಂಬ ಭಾವನೆ ನಮ್ಮಲ್ಲಿ ಮತ್ತು ಇತರರಲ್ಲಿ ಮೂಡಿಸುವುದು. ನಾವು ದೇವರಿಂದ ಸೃಷ್ಟಿಸಲ್ಪಟ್ಟಿರುವುದು ಅವರನ್ನು ಮಹಿಮೆ ಪಡಿಸಲು, ತಿರಸ್ಕರಿಸುವುದಕ್ಕಲ್ಲ.

ಯೆಶಾಯ 43:5-7"ಭಯಪಡಬೇಡ, ಏಕೆಂದರೆ ನಾನೇ ನಿನ್ನೊಂದಿಗೆ ಇದ್ದೇನೆ ನಿನ್ನ ಸಂತತಿಯನ್ನು ಮೂಡಣದಿಂದ ತರುವೆನು. ಪಶ್ಚಿಮದಿಂದ ನಿನ್ನನ್ನು ಕೂಡಿಸುವೆನು 6ನಾನು ಒ¸ಪ್ಪಿಸಿಬಿಡು ಎಂದು ಬಡಗಲಿಗೂ ತಡೆಯಬೇಡ ಎಂದು ತೆಂಕಲಿಗೂ ಹೇಳಿ ದೂರದಲ್ಲಿರುವ ನನ್ನ ಪುತ್ರರನ್ನೂ, ದಿಗಂತರಳಲ್ಲಿರುವ ನನ್ನ ಪುತ್ರಿಯರನ್ನು 7.ನನ್ನ ಹೆಸರಿನಿಂದ ಕರೆಯಲ್ಪಟ್ಟ ಪ್ರತಿಯೊಬ್ಬರನ್ನೂ ಬರಮಾಡುವೆನು ಏಕೆಂದರೆ ಅವರನ್ನು ನನ್ನ ಮಹಿಮೆಗಾಗಿ ಸೃಷ್ಟಿಸಿದ್ದೇನೆ. ನಾನು ಅವರನ್ನು ನಿರ್ಮಿಸಿದ್ದೇನೆ ನಾನು ಅವರನ್ನು ಉಂಟುಮಾಡಿದ್ದೇನೆ"

ಹಾಗಾದರೆ ಮಾಂಸವನ್ನು ಕೊಡುತ್ತೇನೆಂದು ದೇವರು ಕೊಟ್ಟ ಮಾತೇನಾಯಿತು?

ಅರಣ್ಯಕಾಂಡ11:31-34 "ಯೆಹೋವನ ಕಡೆಯಿಂದ ಒಂದು ಗಾಳಿಯು ಹೊರಟು ಸಮುದ್ರದ ಕಡೆಯಿಂದ ಲಾವಕ್ಕಿಗಳನ್ನು ತಂದು ಪಾಳೆಯದ ಸುತ್ತಲೂ ಈ ಕಡೆ ಒಂದು ದಿನದ ದೂರದ ಪ್ರಯಾಣದಷ್ಟು ಆ ಕಡೆ ಒಂದು ದಿನ ದೂರದ ಪ್ರಯಾಣದಷ್ಟು ಪಾಳೆಯದ ಬಳಿಯಲ್ಲಿ ಭೂಮಿಯ ಮೇಲೆ ಎರಡು ಮೊಳ ಎತ್ತರದಲ್ಲಿ ಅವುಗಳನ್ನು ಬೀಳುವಂತೆ ಮಾಡಿತು 32.ಜನರು ಆ ದಿನವೆಲ್ಲಾ ಆ ರಾತ್ರಿಯೆಲ್ಲಾ ಮರುದಿವಸವೆಲ್ಲಾ ಲಾವಕ್ಕಿಗಳನ್ನು ಕೂಡಿಸಿದರು. ಕಡಿಮೆ ಕೂಡಿಸಿದವನು ಸಾವಿರ **ಕಿ**ಲೋಗ್ರಾಮಿನಷ್ಟು ಕೂಡಿಸಿದರು. ಅವರು ಪಾಳೆಯದ ಸುತ್ತಲೂ ಅವುಗಳನ್ನು ಹರಡಿಕೊಂಡರು 33.ಆದರೆ ಮಾಂಸವು ಇನ್ನೂ ಅವರ ಹಲ್ಲುಗಳ ನಡುವೆ ಇದ್ದಾಗ



ಅದನ್ನು ಅಗಿಯುವುದಕ್ಕಿಂತ ಮುಂಚೆ ಯೆಹೋವನು ಜನರನ್ನು ಘೋರವ್ಯಧಿಯಿಂದ ಸಾಯಿಸಿದನು. 34. ಆಶೆಪಟ್ಟವರನ್ನು ಅಲ್ಲಿ ಹೂಳಿಟ್ಟದ್ದರಿಂದ ಆ ಸ್ಥಳಕ್ಕೆ ಕಿಬ್ರೋತ್ ಹತಾವ ಎಂದು ಹೆಸರಾಯಿತು.

ದೇವರು ಒಂದು ಗಾಳಿಯನ್ನು **ಕಳಿ**ಸಿದರು (ಇಡೀ ನಿಸರ್ಗ ದೇವರ ನಿಯಂತ್ರಣದಲ್ಲಿದೆ) ಮತ್ತು ಲಾವಕ್ಕಿಗಳನ್ನು ತಂದು ಪಾಳೆಯದ ಸುತ್ತಲೂ ಹರಡಿದರು. ಎಲ್ಲಾ ಕಡೆಯಿಂದ ಒಂದು ದಿನ ದೂರದ ಪ್ರಯಾಣದಷ್ಟು ಮತ್ತು ಭೂಮಿಯಿಂದ ಎರಡು ಮೊಳ ಎತ್ತರದಷ್ಟು ಲಾವಕ್ಕಿಗಳು ರಾಶಿಯಾದವು ಆ ದೃಷ್ಯವನ್ನು ನಿಮ್ಮಿಂದ ಕಲ್ಪಿಸಲು ಸಾಧ್ಯವೇ?

ಒಂದು ಮೊಳ ಎಂದರೆ 18-20 ಇಂಚುಗಳು, ಎರಡು ಮೊಳ ಎಂದರೆ ಸಾದಾರಣವಾಗಿ(3ಅಡಿ) ಎತ್ತರ, ಒಂದು ದಿನದ ಪ್ರಯಾಣ ಎಂದರೆ (ಅಂದಾಜಿನ ಪ್ರಕಾರ46 ಕಿಲೋಮಿಟರ್)46 ಕಿಲೋಮಿಟರ್*3ಅಡಿ.

ದೇವರು **ಕಳಿ**ಸಿದ ಲಾವಕ್ಕಿಗಳನ್ನು ಅಳತೆ ಮಾಡಲು ಮತ್ತು ತೂಕ ಮಾಡಲು ಯಾರಿಂದಲೂ **ಸಾಧ್ಯಾವಾಗಲಿಲ್ಲ** ಒಂದು ಲಕ್ಷಕೋಟಿ ಇಸ್ರಾಯೇಲರು ತಿನ್ನುವುದಕ್ಕೂ ಹೆಚ್ಚಾಗಿ ಲಾವಕ್ಕಿಗಳಿದ್ದುವು.

ಹಾಗಾದರೆ ದೇವರ ಕೈ ಎಷ್ಟು ಬಲಿಷ್ಠವಾದುದು? ಅವರ ಚಾಚಿದ **ತೋಳಿನಿಂದ** ಇಡೀ ಜನಾಂಗಕ್ಕೆ **ತಿ**ನ್ನುವುದಕ್ಕೆ ಮಾಂಸವನ್ನು ಕೊಟ್ಟನು. ಆದರೆ, ದೇವರಿಂದ ಅಷ್ಟೊಂದು ಮಾಂಸ ಕೊಡಲು ಸಾಧ್ಯವೇ (ಎಂದರೆ ಎಲ್ಲಾ ಅಗತ್ಯಗಳನ್ನು ಪೊರೈಸಲು)ಸಾದ್ಯವೇ ಎಂದು ದೇವರ ಕಾರ್ಯಶಕ್ತಿಯಲ್ಲಿ ಸಂದೇಹ ಪಟ್ಟಾಗ, ದೇವರು ಒಂದು ಭಯಂಕರ ವ್ಯಾಧಿಯಿಂದ ಸಾಯಿಸಿದನು ಅಲ್ಲಿ ತುಂಬಾ ಜನರು ಸತ್ತರು.

ಹಂಚಿಕೊಳ್ಳುವುದು: ಕೆಲವು ವರ್ಷಗಳ ಹಿಂದೆ **ಬೆಂಗಳುರಿನಲ್ಲಿ** ಕ್ರೈಸ್ತಸಭೆ, ಸಾಯಂಕಾಲದ ಆರಾಧನೆಗೆ ಮತ್ತು ಚಿಕ್ಕ ಕೂಟಗಳಿಗೆ ವಿಶ್ರಾಂತಿ ನಿಲಯದ ಸಭಾಂಗಣವನ್ನು ಬಾಡಿಗೆಗೆ ತೆಗೆದುಕೊಳ್ಳುತ್ತಿತ್ತು. ಬಿನಾ ಮತ್ತು ನಾನು ಆಗ ಕ್ರೈಸ್ತರಬೇತಿ ಕಾರ್ಯಕ್ರಮ ನಡೆಸುತ್ತಿದ್ದೆವು ಒಂದು ವಾರಕ್ಕೆ 3 ದಿನದಂತೆ, ಕೆಲವು ವಾರಗಳು ನಾವು ಒಂದು ಸಭಾಂಗಣವನ್ನು ಮುಂಚಿತವಾಗಿಯೇ ಬಾಡಿಗೆಗೆ **ಮಾತಾಡಿದ್ದವು** ಆದರೆ ನಾವು ಅಲ್ಲಿ ಹೋದಾಗಲೆಲ್ಲಾ ಅಲ್ಲಿರುವ ಅಧಿಕಾರಿಗಳು ನಮಗೆ ಬಹಳ ತೊಂದರೆ ಕೊಡುತ್ತಿದ್ದರು. ಒಂದೇ ನಾವು ಬಾಡಿಗೆಗೆ ಮುಂಚಿತವಾಗಿ ಮಾತಾಡಿಲ್ಲ ಎಂದು ಹೇಳುವುದು **ಅಥವಾ ಸಂಭಾಗಣ** ಬದಲಾಯಿಸುವುದು ಹೀಗೆಲ್ಲಾ ಮಾಡುತ್ತಿದ್ದರು. ಶಿಷ್ಯರು ತುಂಬಾ ದೂರದಿಂದ ವೇದವಾಕ್ಯವನ್ನು ಕಲಿಯಲು. ಕೆಲಸವನ್ನು ಮುಗಿಸಿ ಪ್ರಯಾಣ ಮಾಡಿ ಬರುತ್ತಿದ್ದರು. ಅದಕ್ಕಾಗಿ ನಾವು ಒಂದು ಫ್ಲಾಸ್ಕ್ ಖರೀದಿಸಿ ಅವರಿಗಾಗಿ ಕಾ¸ ತೆಗೆದುಕೊಂಡು ಹೋಗಲು ನಿಶ್ಚಯಿಸಿದೆವು ಆದರೆ ಅಲ್ಲಿ ಹೋದಾಗ ಆ ಅಧಿಕಾರಿಗಳು ನಮ್ಮನ್ನು ತಡೆದು ಹೊರಗಡೆಯಿಂದ **ತಿ**ಂಡಿ. ಕಾ¸ ತರಬಾರದೆಂದು ಹೇಳಿದರು ಅದರಿಂದ ನಮಗೆ ತುಂಬಾ ಬೇಸರವಾಯಿತು. ಆಗಲೇ ನಾವು ದೇವರೆ ನಮಗೆ ನಮ್ಮದೇ ಆದ ಒಂದು ಸ್ಥಳವನ್ನು ಖರೀದಿಸಲು, ನಿಮ್ಮನ್ನು ಯಾವುದೂ ತಡೆಯಿಲ್ಲದೆ ಆರಾಧಿಸಲು ಮತ್ತು ತೊಂದರೆಯಿಲ್ಲದೆ ಕೂಟಗಳನ್ನು ನಡೆಸಲು ಸಹಾಯ ಮಾಡು ಎಂದು ಪ್ರಾರ್ಥಿಸಲು ಪ್ರಾರಂಭಿಸಿದೆವು,

ನಾವು(ಎಫೆಸೆಯದವರಗೆ3:20 ನಮ್ಮಲ್ಲಿ ಕಾರ್ಯಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವುದಕ್ಕಿಂತಲೂ ಯೋಚಿಸುವುದಕ್ಕಿಂತಲೂ ಅತ್ಯಧಿಕವಾಗಿ ಎಲ್ಲವನ್ನು ಮಾಡಲು ಶಕ್ತನಾದ ದೇವರು)ಎಂದು ವಚನವನ್ನು ಜ್ಞಾ ಸಿದೆವು. ನಾವು ಬೇಡುವುದಕ್ಕಿಂತಲೂ ಯೋಚಿಸುವುದಕ್ಕಿಂತಲೂ ಅತ್ಯದಿಕವಾಗಿ ನಮ್ಮ ಅವಶ್ಯಕತೆಗಳನ್ನು ಪೂರೈಸಲು ದೇವರಿಗೆ ಸಾಧ್ಯ.

ಮರುದಿನವೇ ನಾನು ಒಂದು ಜಾಹೀರಾತಿನ ಪತ್ರಿಕೆ ಖರೀದಿಸಿದೆ. ಅದರಲ್ಲಿ ಯಾವುದಾದರೂ ವ್ಯಾಪಾರಿ ಮಳಿಗೆ ಮಾರಾಟಕ್ಕಿದೆಯೇ ಎಂದು ಪರಿಶೀಲಿಸುತ್ತಿದ್ದೆ. ಆಗಲೇ ಒಂದು ಮಳಿಗೆಯ ಒಂದು ಭಾಗ ಮಾರಾಟಕ್ಕಿದೆ. ಅದೂ ನಗರದ ಮಧ್ಯಾಭಾಗದಲ್ಲಿದೆ-ಶಿವಾಜಿನಗರ ಬಸ್ಸ್‌ನಿಲ್ದಾಣದಿಂದ ನಡೆದು ಕೊಂಡು ಹೋಗಬಹುದು. ಕಮರ್ಶಿಯಲ್ ಸ್ಟ್ರೀಟಗೆ ಬಹು ಹತ್ತಿರ ಎಂಬ ಜಾಹೀರಾತು ಕಣ್ಣಿಗೆ ಬಿತ್ತು. ಆ ಮಳಿಗೆಯ ಮಾಲಿಕ ಸಹೃದಯದಿಂದ ಅದನ್ನು ತುಂಬಾ ಕಡಿಮೆ ಬೆಲೆಗೆ ನಮಗೆ ಮಾರಲು ಒ್ಪದ. ಸಾಧಾರಣವಾಗಿ ಜನರು ಆಸ್ತಿಯನ್ನು ಮಾರುವಾಗ ಹೇಗಿದೆಯೋ ಹಾಗೇ ಮಾರುತ್ತಾರೆ, ಆದರೆ ಈ ಮಾಲಿಕ ನಮಗೆ ಮಳಿಗೆಯನ್ನು ಮಾರುವಾಗ, ಹೊಸ ಬಾಗಿಲುಗಳನ್ನು, ನಾವು ಹೇಳಿದ ಹಾಗೆ ಕೆಲವು ಬದಲಾವಣೆಗಳನ್ನು ನೆಲಕ್ಕೆ ಹೊಸ ಪಾಲಿಶ್, ಗೋಡೆಗೆ ಸುಣ್ಣಬಣ್ಣ ಎಲ್ಲವನ್ನೂ ಉತ್ತಮವಾದ ವಸ್ತುಗಳನ್ನು ಉಪಯೋಗಿಸಿ ಮಾಡಿಕೊಟ್ಟ ಎಲ್ಲಕ್ಕೂ ಅವನ ಹಣವನ್ನೇ ಉಪಯೋಗಿಸಿದ. ನಾವು ಬರೀ ಕುರ್ಚಿಗಳು, ಪರದೆಗಳನ್ನು ಮತ್ತು ಸೌಂಡ್ ಸಿಸ್ಟಮ್ ಮಾತ್ರ ಕೊಂಡುಕೊಂಡೆವು. ಆ ಮಳಿಗೆ ಉಪಯೋಗಿಸಲು ಸಿದ್ಧವಾಯಿತು.

ಮಳಿಗೆ ಖರೀದಿಸಿದ ಕೂಡಲೇ ನಾವದರಲ್ಲಿ ಸಾಯಂಕಾಲದ ಆರಾಧನೆ ಮತ್ತು 100 ಜನರು ಕೂಡಬಹುದಾದ ಇತರ ಕಾರ್ಯಕ್ರಮಗಳನ್ನು ಆರಂಬಿಸಿದೆವು. ಅದು ವ್ಯಾಪಾರೀ ಸ್ಥಳವಾದ್ದರಿಂದ, ನಾವು ಹಾಡುಗಳನ್ನು ಹಾಡುವಾಗ, ಪ್ರಾರ್ಥನೆ ಮಾಡುವಾಗ ಸ್ವಲ್ಪ ಸದ್ದುಗದ್ದಲವಾದರೂ ಯಾರೂ ನಮ್ಮನ್ನು ತಡೆಯುವುದಿಲ್ಲ. ಯಾರೂ ನಮಗೆ ಹೊರಗೆ ಹಾಕುವಂತಿಲ್ಲ. ನಾವು ನಮ್ಮಿಷ್ಟದಂತೆ ಟೀ, ಕಾ಼ೀ, ತಿಂಡಿ, ಮಾಡಿಕೊಳ್ಳಬಹುದು, ನಿಜವಾಗಿಯೂ ದೇವರು ತಮ್ಮ ಚಾಚಿದ ತೋಳಿನಿಂದ ನಮ್ಮ ಎಲ್ಲಾ ಅವಶ್ಯಕತೆಗಳನ್ನು ಪೂರೈಸುತ್ತಾರೆ.

ಆಹ್ವಾನ:1. ದೇವರು ನಿಮ್ಮ ಜೀವನದಲ್ಲಿ ಪೂರೈಸಿದ ಎಲ್ಲಾ ಅವಶ್ಯಕತೆಗಳ ಒಂದು ಪಟ್ಟಿ ಮಾಡಿ, ಅದಕ್ಕಾಗಿ ಅವರಿಗೆ ಕೃತಜ್ಞತೆ,ಸ್ತೋತ್ರ ಅ಼ಸಿ ಮತ್ತು ಬೇರೆಯವರ ಸಂಗಡ ದೇವರು ನಿಮಗೆ ಮಾಡಿದ ಅದ್ಭುತಗಳನ್ನು ಹೇಳಿಕೊಳ್ಳಿ.

2. ದೇವರು ನಿಮಗೆ ಪೂರೈಸಬೇಕಾದ ಕೆಲವು ಅವಶ್ಯ ಕತೆಗಳ ಇನ್ನೊಂದು ಪಟ್ಟಿ ಮಾಡಿ (ಸಭೆಗಾಗಿಯೂ ಮಾಡಿ).



## ದಿನ -2
## ದೇವರ ಕೈ ಸಬ್ಬತ್ ವಿಶ್ರಾಂತಿಯನ್ನು ದಯಾಪಾಲಿಸುತ್ತದೆ.

ದೇವರು ಸಬ್ಬತ್ ದಿನವನ್ನು ಸ್ಥಾ ಸಿದರು-10 ಕಟ್ಟಳೆಗಳ ಮೂಲಕ ಒಂದು ವಿಶ್ರಾಂತಿಯ ದಿನವನ್ನು ಸ್ಥಾ ಸಿದರು. ಜನರು ವಾರಕ್ಕೊಂದು ದಿನವಾದರೂ ವಿಶ್ರಾಂತಿ ಪಡೆಯಬೇಕು ಎಂಬುದು ದೇವರ ಇಚ್ಛೆ ಇಸ್ರಾಯೇಲರು ವಾಗ್ದಾನ ಮಾಡಿದ ಸ್ಥಳಕ್ಕೆ ಹೋದಾಗ, **ಭೂಮಿಗೂ** 7ನೆಯ ವರ್ಷ ಬೇಸಾಯ ಮಾಡದೆ ಸಬ್ಬತ್ ವಿಶ್ರಾಂತಿ ಕೊಡಬೇಕೆಂದು ಆಜ್ಞೆಮಾಡಿದರು.

ನಮಗೂ ದೇವರು ವಾರಕ್ಕೊಂದು ದಿನ ವಿಶ್ರಾಂತಿ ಪಡೆಯಬೇಕೆಂದು ಕಟ್ಟಳೆಯಿಟ್ಟಿದ್ದಾರೆ. ಆದರೆ ನಾವೋ ಇನ್ನೂ ಒಂದು ದಿನ ಕೆಲಸ ಮಾಡಬೇಕು ಜಾಸ್ತಿ ಸಂಪಾದನೆ ಮಾಡಬೇಕು, ನನ್ನ ಮತ್ತು ಕುಟುಂಬದ ಅವಶ್ಯಕತೆಗಳನ್ನು ಪೂರೈಸಬೇಕು ಎಂದೆಣಿಸುತ್ತೇವೆ. ದೇವರು ನಮಗೆ ವಿಶ್ರಾಂತಿ ತೆಗೆದುಕೊಳ್ಳಿ ಎಂದು ಆಜ್ಞಾ ಸಿದಾಗ, ವಿಶ್ರಾಂತಿಯಲ್ಲಿದ್ದಾಗಲೂ ನಮ್ಮೆಲ್ಲಾ ಅವಶ್ಯಕತೆಗಳನ್ನು ಪೂರೈಸಲು ಬಲ್ಲವರಾಗಿದ್ದಾರೆ. ಆದರೆ, ನಮಗೆ ಅವನ ಆಜ್ಞೆಯನ್ನು ಪಾಲಿಸಿ, ವಿಶ್ರಾಂತಿ ಪಡೆಯುವಾಗ ದೇವರು ನಮ್ಮ ಅವಶ್ಯಕತೆಗಳನ್ನು ಪೂರೈಸುತ್ತಾರೆ ಎಂಬ ಭರವಸೆಯಿದೆಯೇ?

ವಿಮೋಚನಕಾಂಡ 16 ಮತ್ತು ಯಾಜಕಕಾಂಡ25 ಓದಿರಿ.

ಮರುಭೂಮಿಯಲ್ಲಿ 40 ವರ್ಷ ಇಸ್ರಾಯೇಲರು ವಾಸಮಾಡಿದರು; ಆಗ ದೇವರು ಪ್ರತಿದಿನ ಬೆಳಗ್ಗೆ ವಾರದ 6ದಿನ ಮನ್ನವನ್ನು ಸುರಿಸುತ್ತಿದ್ದನು. 6ನೆಯ ದಿನ ಎರಡುರಷ್ಟು ಮನ್ನವನ್ನು ಸುರಿಸಿ. ಸಬ್ಬತ್ ದಿನಕ್ಕೂ ಮನ್ನವನ್ನು ಕೂಡಿಸಿ ಇಟ್ಟು ಅದನ್ನು ಅಡಿಗೆ ಮಾಡಿ ಸಬ್ಬತ್ ದಿನ ತಿನ್ನಲು ತಯಾರಿಡಬೇಕು, ಮತ್ತು ಸಬ್ಬತ್ ದಿನ ಏನೂ ಕೆಲಸ ಮಾಡದೆ ವಿಶ್ರಾಂತಿ ಪಡೆಯಬೇಕು ಎಂದರು ದೇವರು ಮಾತು ಕೊಟ್ಟ ಪ್ರಕಾರ 40 ವರ್ಷ ಎಡಬಿಡದೆ ಮನ್ನವನ್ನು ಸುರಿಸಿ ಅವರ **ಅವಶ್ಯಕತೆಗಳನ್ನು** ಪೂರೈಸಿದರು.

ಇಷ್ಟಲ್ಲಾ ವಾಗ್ದಾನಗಳನ್ನು ಮತ್ತು ಕಟ್ಟಳಗಳನ್ನು ಕೊಟ್ಟಾಗ್ಯೂ ಕೆಲವು ಇಸ್ರಾಯೇಲರು ಏನು ಮಾಡಿದರು ನೋಡಿ;

ವಿಮೋಚನಕಾಂಡ 16:27 "ಏಳನೆಯ ದಿನದಲ್ಲಿ ಜನರಲ್ಲಿ ಕೆಲವರು ಕೊಡಿಸುವುದಕ್ಕೆ ಹೋದಾಗ ಅವರಿಗೆ ಏನೂ ಸಿಕ್ಕಲಿಲ್ಲ

28.ಆಗ ಯೆಹೋವನ ಮೋಶೆಗೆ" ಎಷ್ಟುಕಾಲ ನನ್ನ ಕಟ್ಟಳೆಗಳನ್ನು ನಿಯಮಗಳನ್ನೂ ಕೈಕೊಳ್ಳದೆ ನಿರಾಕರಿಸುವಿರಿ? ಎಚಿದನು.

ನೀವು ವಿಶ್ರಾಂತಿ ತೆಗೆದುಕೊಳ್ಳುತ್ತಿರುವಿರೋ? ನೀವು ವಿಶ್ರಾಂತಿ ತೆಗೆದುಕೊಳ್ಳುವುದು ದೇವರ ಅಪೇಕ್ಷೆ ಎಂಬುದು ನಿಮಗೆ ತಿಳಿದಿದೆಯೇ? ನಾವು ಮಲಗಿದಾಗ ನಿದ್ದೆ ನಮ್ಮನ್ನು

ಉಲ್ಲಾಸಗೊಳಿಸುತ್ತದೆ ಮತ್ತು ನಮ್ಮ ಮಿದುಳು ಚುರುಕುಗೋಳ್ಳುತ್ತದೆ ಮಾತ್ರವಲ್ಲ ನಮ್ಮಲ್ಲಿ ಪುನರುಜ್ಜೀವನ ಉಂಟಾಗ್ಳುತ್ತದೆ ಎಂಬುದನ್ನು ವಿಜ್ಞಾನಿಗಳು ಕಂಡುಹಿಡಿದಿದ್ದಾರೆ.

ಯಾಜಕಕಾಂಡ 25ರಲ್ಲಿ ದೇವರು ಹೊಲಗದ್ದೆಗಳಿಗೂ ಸಬ್ಬತ್ ವರ್ಷ ಪಾಲಿಸಬೇಕೆಂದು ಕಟ್ಟಳೆಯಿಟ್ಟರು ಆರು ವರ್ಷ ಅವರು ಹೊಲಗದ್ದೆಗಳನ್ನು ವ್ಯವಸಾಯ ಮಾಡಬಹುದು ಮತ್ತು 7ನೆಯ ವರ್ಷ ಆ ಭೂಮಿಗೆ ವಿಶ್ರಾಂತಿ ಕೊಡಬೇಕು ಅಂದರೆ 7ನೆಯ ವರ್ಷ ವ್ಯವಸಾಯ ಮಾಡಬಾರದು ಎಂದು ಕಟ್ಟಳೆಯಿಟ್ಟರು.

ಹಾಗಾದರೆ 7ನೆಯ ವರ್ಷ ಅವರು ಬದುಕುವುದು ಹೇಗೆ? ಎಂಬ ಪ್ರಶ್ನೆಗೆ ದೇವರು ಯಾವಾಗಲೂ ನಮ್ಮ ಜೀವನಕ್ಕೆ ದೊಡ್ಡ ಯೋಜನೆಗಳನ್ನು ಮಾಡಿದ್ದಾರೆ ಮತ್ತು ಆ ಯೋಜನೆ ಖಂಡಿತ ಸಫಲವಾಗುತ್ತದೆ. ದೇವರು ಏನು ಹೇಳುತ್ತಾರೆ ನೋಡಿ

ಯಾಜಕಕಾಂಡ 25:20-22"ನೀವು,"ನಾವು ಬಿತ್ತುವುದಿಲ್ಲ, ಇಲ್ಲವೆ ನಮ್ಮ ಹುಟ್ಟುವಳಿಯಲ್ಲಿ ಕೂಡಿಸಿಕೊಳ್ಳುವುದಿಲ್ಲ, ಏಳನೆಯ ವರ್ಷದಲ್ಲಿ ನಾವು ಏನು ತಿನ್ನೋಣ" ಎನ್ನುವಿರಿ 21.ಆಗನಾನು "ಆರನೆ ವರ್ಷದಲ್ಲಿ ಮೂರು ವರ್ಷಗಳಿಗೆ ಫಲ ಫಲಿಸುವಂತೆ ನಿಮ್ಮ ಮೇಲೆ ನನ್ನ ಆಶೀರ್ವಾದವನ್ನು ಕೊಡುವೆನು. 22.ನೀವು ಎಂಟನೆಯ ವರ್ಷದಲ್ಲಿ ಬಿತ್ತಿ ಅದರ ಫಲವನ್ನು ಒಂಬತ್ತನೆಯ ವರ್ಷದವರೆವಿಗೆ ತಿನ್ನುವಿರಿ. ಅದರ ಫಲ ಬರುವವರೆಗೆ ತಿನ್ನುವಿರಿ, ಅದರ ಫಲ ಬರುವವರೆಗೆ ನೀವು ಸಂಗ್ರಹಿಸಿದ ಹಳೆಯದನ್ನೇ ತಿನ್ನುವಿರಿ" ಎಂದು ಹೇಳುತ್ತೇನೆ.

ದೇವರ ಯೋಜನೆ ತುಂಬಾ ಅದ್ಭುತವಾಗಿದೆಯಲ್ಲವೇ? **ಕಾಲಕಾಲಕ್ಕೆ** ಕೆಲವು ಸಮಯ ವಿಶ್ರಾಂತಿ ಕೊಟ್ಟು ಪುನರುಜ್ಜೀವನಗೊಳಿಸದಿದ್ದರೆ, ಭೂಮಿಗೆ ಒಂದೇ ಬೆಳೆಯನ್ನು ಪದೇ ಪದೇ **ಬೆಳೆಸಿ** ಪೋಷಿಸುವ ಸಾಮರ್ಥ್ಯವಿಲ್ಲ ಎಂಬುದನ್ನು ವಿಜ್ಞಾನಿಗಳು ಕಂಡುಹಿಡಿದಿದ್ದಾರೆ, ಭೂಮಿಯಿಂದ ಬೆಳೆಗೆ ಹೋಗುವ ಪೋಶಕ ಆಹಾರ ಮತ್ತು ಏಕಾಣು ಜೀವಿಗಳು (ಸಾರಜನಿಕ ಕೊಡುವ ಏಕಾಣುಜೀವಿಗಳು) ಭರ್ತಿಗೊಳ್ಳುವುದಕ್ಕೆ ಕೆಲವು ಸಮಯ ಬೇಕಾಗುತ್ತದೆ. ಆ ಭೂಮಿಯನ್ನು ಆರು ವರ್ಷ ವ್ಯವಸಾಯ ಮಾಡಿ ಒಂದು ವರ್ಷ ವಿಶ್ರಾಂತಿ ಕೊಟ್ಟರೆ, ಆ ಭೂಮಿ ಪುನರುಜ್ಜೀವನ ಗೊಳ್ಳುವುದು ಮಾತ್ರವಲ್ಲ ಎಲ್ಲಾ ಪೋಶಾಕಾಂಶಗಳು ಮತ್ತು ಜೀವಕೊಡುವ ಏಕಾಣುಜೀವಿಗಳು ಭೂಮಿಯಲ್ಲಿ **ಭರ್ತಿಗೊಳ್ಳುತ್ತವೆ**. ಕೆಲವು ದಶಕಗಳಿಂದ ಮಾತ್ರ ಈ ಸತ್ಯಾಂಶ ವಿಜ್ಞಾನಿಗಳ ಅರಿವಿಗೆ ಬಂದಿದೆ. ಆದರೆ ದೇವರು ಸಾವಿರಾರು ವರ್ಷಗಳ ಹಿಂದೆ ಈ ಆಜ್ಞೆಗಳನ್ನು ಕೊಟ್ಟಿದ್ದರು. ವ್ಯವಸಾಯದ ಬಗ್ಗೆ ಉತ್ತಮ ವಿಷಯಗಳನ್ನು ತಿಳಿದಿರುವವರು ಯಾರು? ದೇವರು ಭೂಮಿ ಮತ್ತು ಬೆಳೆಯನ್ನು ಉಂಟುಮಾಡಿದರು! ನಾವು ಅವರ ಮಾತಿಗೆ ಕಿವಿಗೊಟ್ಟರೆ ನಮ್ಮ ಭೂಮಿ, ಬೆಳೆ, ನಮ್ಮ ಜೀವನ ಎಲ್ಲವೂ ಸುರಕ್ಷಿತವಾಗಿ ನಮ್ಮೆಲ್ಲಾ ಅವಶ್ಯಕತೆಗಳು ಪೂರೈಸುತ್ತವೆ.

ದೇವರ ಆಜ್ಞೆಗಳನ್ನು ನಂಬಿ ಅದರಂತೆ ನಡೆಯುತ್ತಿರುವಿರೋ? ಅಥವಾ ಆ ಅಜ್ಞೆಗಳನ್ನು ನಾನೇಕೆ ಪಾಲಿಸಬೇಕು? ಎಂಬ ಪ್ರಶ್ನೆಗೆ, ಉತ್ತರ ಸಿಕ್ಕಬೇಕು ಎಂದು ಕಾಯುತ್ತಿರುವಿರೋ? ದೇವರು ಜ್ಞಾನದಲ್ಲಿ ಶ್ರೇಷ್ಠರು ಮತ್ತು ನಂಬಿಕೆಗೆ ಅರ್ಹರು ಆದ್ದರಿಂದ ಅವರಲ್ಲಿ ಭರವಸೆಯಿಟ್ಟು ಅವರ



ಆಜ್ಞೆಗಳನ್ನು ಪಾಲಿಸೋಣ. ಆಜ್ಞೆಗಳ ಉದ್ದೇಶ ಮತ್ತು ಫಲಿತಾಂಶ ಅವನ್ನು ಪಾಲಿಸಿದಾಗ ಕೊನೆಯಲ್ಲಿ ನಮಗೆ ಉತ್ತರ ಸಿಗುತ್ತದೆ.

ಯಾವುದಾದರೂ ವಚನ ನಿಮಗೆ ಅನುಚಿತವೆನಿಸಿ ಅದನ್ನು ಪಾಲಿಸದೇ ಇರುವಿರೋ? ಅದನ್ನೆಲ್ಲಾ ಪಟ್ಟಿ ಮಾಡಿ, ತಪ್ಪೊಪ್ಪಿಕೊಂಡು ದೇವರಿಗೆ ಶರಣಾಗತರಾಗಿ.
(ಉದಾ: ನಮ್ಮ ಆದಾಯದಲ್ಲಿ ದಶಮಾಂಶ ದೇವರಿಗೆ ಕೊಡುವುದು, ಒಬ್ಬರನ್ನೊಬ್ಬರು ಪ್ರತಿದಿನ ಪ್ರೊತ್ಸಾಹ ಪಡಿಸುವುದು, ಕೂಟಗಳಿಗೆ ತಪ್ಪದೇ ಬರುವುದು, ಶಿಷ್ಯತ್ವದಲ್ಲಿ ತಿದ್ದಿಕೊಳ್ಳುವುದು, ಪಾಪಗಳನ್ನು ಅರಿಕೆಮಾಡುವುದು ಇತ್ಯಾದಿ)

## ದಿನ -3
## ದೇವರ ಕೈ ಗುಡಾರವನ್ನು ಕಟ್ಟಿತು.
## ವಿಮೋಚನಕಾಂಡ 35:4ರಿಂದ 36:7ರ ವರೆಗೆ ಓದಿ.

ಇಸ್ರಾಯೇಲರು ಈಜಿಪ್ಟಿನಿಂದ ವಾಗ್ದಾನ ಮಾಡಿದ ದೇಶಕ್ಕೆ ಪ್ರಯಾಣಮಾಡುವ ದಾರಿಯಲ್ಲಿ ಮರುಭೂಮಿಯಲ್ಲಿರುವಾಗ ದೇವರು **ಮೋಶೆಗೆ** ಒಂದು ಗುಡಾರವನ್ನು ಕಟ್ಟಿ, ದಹನಬಲಿಗೆ ಬೇಕಾದ ಎಲ್ಲಾ ವಸ್ತುಗಳನ್ನು ಅದರಲ್ಲಿ ಸಂಗ್ರಹಿಸಲು ಆಜ್ಞೆಯಿತ್ತರು ಮೋಶೆ ಎಲ್ಲಾ ಜನರನ್ನು ಕೂಡಿಸಿ ಗುಡಾರ ಕಟ್ಟಲು ಪೂರ್ಣ ಹೃದಯದಿಂದ ಕಾಣಿಕೆಗಳನ್ನು ತರಲು ಹೇಳಿದನು. ಜನರು ತಕ್ಷಣ **ಪ್ರತಿಕ್ರಿಯೆ** ತೋರಿಸಿ ಬೇಕಾದುದಕ್ಕಿಂತ ಹೆಚ್ಚಾಗಿ ಕಾಣಿಕೆಗಳನ್ನು ತಂದುಕೊಟ್ಟರು. ಇಸ್ರಾಯೇಲರು ಈಜಿಪ್ಟಿನಲ್ಲಿ ದಾಸರಾಗಿದ್ದರು ಎಂಬ ವಿಷಯ ಜ್ಞಾ ಸೋಣ ದಾಸರಿಗೆ ಯಾವ ಆಸ್ತಿ ಇರುವುದಿಲ್ಲ ಮುಖ್ಯವಾಗಿ ಚಿನ್ನ, ವಜ್ರಗಳಂತೂ ಇರುವುದೇ ಇಲ್ಲ ಆದರೂ ಕರ್ತನು ಅವರು ತುಂಬಾ ಉತ್ತಮ ವಸ್ತುಗಳಿಂದ, ವಜ್ರ ವೈಡೊರ್ಯದಿಂದ ಗುಡಾರವನ್ನು ಕಟ್ಟಬೇಕೆಂದು ಅಜ್ಞಾ ಸಿದರು. ಅದು ಹೇಗೆ ಸಾಧ್ಯ? ದೇವರು ಅಸಾಧಾರಣ ಯೋಜನೆ ರಚಿಸುವವ. ಈ ವಿಷೆಯವನ್ನು ಇಸ್ರಾಯೇಲರು ಈಜಿಪ್ಟ್ ದೇಶ ಬಿಡುವ ಬಹು ಮುಂಚೆಯೇ ಯೋಜಿಸಿಕೊಂಡಿದ್ದರು! ಅಲ್ಲಿ ಏನು ನಡೆಯಿತು ಎಂಬುದನ್ನು ನೋಡೋಣ.

ವಿಮೋಚನಕಾಂಡ 12:35-36 "ಇಸ್ರಾಯೇಲ್ಯರು ಮೋಶೆಯ ಹೇಳಿದಂತೆ ಮಾಡಿ ಬೆಳ್ಳಿ ಬಂಗಾರದ ಒಡವೆಗಳನ್ನೂ ವಸ್ತ್ರಗಳನ್ನೂ ಈಜಿಪ್ಟಿನವರಿಂದ ಕೇಳಿಪಡೆದರು. 36ಯೆಹೋವನು ಈಜಿಪ್ಟಿನವರ ಎದುರಿನಲ್ಲಿ ಜನರ ಮೇಲೆ ದಯೆ ತೋರಿದ್ದರಿಂದ ಅವರು ಕೇಳಿದ್ದನ್ನು ಕೊಟ್ಟರು ಹೀಗೆ ಅವರು ಈಜಿಪ್ಟಿನವರನ್ನು ಸುಲಿದು ಕೊಂಡರು

ಈಜಿಪ್ಟನ್ನು ಬಿಡುವ ಮುಂಚೆಯೇ, ದೇವರು ಈಜಿಪ್ಟಿನವರ ಮೂಲಕ ಗುಡಾರಕ್ಕೆ ಬೇಕಾದ ಚಿನ್ನ, ಬೆಳ್ಳಿ, ವಜ್ರ ವೈಡೊರ್ಯಗಳನ್ನು ಮತ್ತು ವಸ್ತ್ರಗಳನ್ನು ಪೂರೈಸಿದ್ದರು ದೇವರು ಕಳಿಸಿದ 10 ಘೋರ ವ್ಯಾಧಿಗಳಿಂದ ಈಜಿಪ್ಟನವರು ಇಸ್ರಾಯೇಲರ ದೇವರನ್ನು ಕಂಡು ಎಷ್ಟು ಭಯಪಟ್ಟರೆಂದರೆ ಅವರ ದಾಸರಾದ ಇಸ್ರಾಯೇಲ್ಯರಿಗೆ ಅವರು ಕೇಳಿದ್ದನ್ನೆಲ್ಲಾ ಧಾರಳವಾಗಿ ಕೊಟ್ಟು, ಇಸ್ರಾಯೇಲ್ಯರು ಸಮಾಧಾನದಿಂದ ಹೋಗುವಂತೆ ಮಾಡಿದರು, ಅವರಿಗೆ ಇನ್ನೂ ಯಾವ ಶಾಪವೂ ಬೇಕಾಗಿರಲಿಲ್ಲ.

ಈಗ ಗುಡಾರವನ್ನು ಕಟ್ಟುವುದಕ್ಕೆ ಬೇಕಾದ ವಸ್ತುಗಳನ್ನು ನೋಡೋಣ, ಅದಕ್ಕೆ ಚಿನ್ನ, ಬಳ್ಳಿ, ವೈಡೋರ್ಯಗಳು ಮಾತ್ರವಲ್ಲ, ಅಪರಿಮಿತ ವಸ್ತ್ರಗಳು, ಜಾಲಿಯ ಮರದ ಕಟ್ಟಿಗೆ ಬೇಕಾಗಿತ್ತು. ಮುಂಚಿತವಾಗಿಯೇ ದೇವರು ಈಜಿಪ್ಟಿನವರ ಹೃದಯವನ್ನು ಮೃದುಗೋಳಿಸಿ ಗುಡಾರವನ್ನು ಕಟ್ಟಲು ಬೇಕಾದ ಎಲ್ಲಾ ವಸ್ತುಗಳನ್ನು ಅವರು ಕೊಡುವಂತೆ ತಯಾರುಗೊಳಿಸಿದರು ಅದರಂತೆಯೇ ದೇವರು ಇಸ್ರಾಯೇಲ್ಯರ ಹೃದಯವನ್ನು ಮೃದುಗೋಳಿಸಿ ಗುಡಾರ ಕಟ್ಟಲು ಬೇಕಾದುದಕ್ಕಿಂತ ಹೆಚ್ಚಾಗಿ ಕೊಡುವಂತೆ ಮಾಡಿದರು. ಅವರು ಎಷ್ಟು ಕೊಟ್ಟರೆಂದರೆ, ಮೋಶೆ ಸಾಕು, ಇನ್ನೂ ಹೆಚ್ಚು ಕಾಣಿಕೆ ತರಬೇಡಿ ಎಂದು ನಿಲ್ಲಿಸಿದರು.

ವಿಮೋಚನಕಾಂಡ 35:30-34 "ಆಗ ಮೋಶೆಯು ಇಸ್ರಾಯೇಲರಿಗೆ, ನೋಡಿರಿ, ಯೆಹೋವನು ಯೆಹೂದ ಕುಲದ ಹೊರನ ಮೊಮ್ಮಗನೂ, ಊರಿಯನ ಮಗನಾದ ಬೆಚಲೇಲನನ್ನು ಹೆಸರು ಹೇಳಿ ಕರೆದು 31 ಆತನು ಅವನನ್ನು ದೇವರಾತ್ಮರಿಂದ ತುಂಬಿಸಿ, ಜ್ಞಾನದಲ್ಲಿಯೂ ತಿಳುವಳಿಕೆಯಲ್ಲಿಯೂ ವಿವೇಕದಲ್ಲಿಯೂ ಎಲ್ಲಾ ವಿಧವಾದ ಕೌಶಲ್ಯದಲ್ಲಿಯೂ 32 ಚಿನ್ನ, ಬೆಳ್ಳಿ, ಹಿತ್ತಾಳೆಯಲ್ಲಿ ವಿಚಿತ್ರವಾದ ಕಲ್ಪನೆಯ ಕೆಲಸವನ್ನು ಮಾಡುವುದರಲ್ಲಿಯೂ 33 ಕಲ್ಲುಗಳನ್ನು ಕೆತ್ತಿಡುವುದರಲ್ಲಿಯೂ ಮರ ಕೆತ್ತನೆಯಲ್ಲಿಯೂ ಮತ್ತು ಎಲ್ಲಾ ತರವಾದ ಕೌಶಲ್ಯದ ಕೆಲಸದಲ್ಲಿಯೂ ಜ್ಞಾನದಿಂದಲೂ ಅವನನ್ನು ತುಂಬಿಸಿದ್ದಾನೆ. 34 ಇದಲ್ಲದೆ ದಾನನ ಕುಲದವನಾದ ಅಹಿಸಾಮಾತನ ಮಗ ಒಹೋಲೀಯಾಬನಿಗೂ ಕಲಿಸುವ ಹೃದಯವನ್ನು ಕೊಟ್ಟಿದ್ದಾನೆ. 35.ಅವರು ಕೆತ್ತನೆಯ ಕೆಲಸವನ್ನು ಮಾಡುವುದಕ್ಕೂ ಚಮತ್ಕಾರದ ಕೆಲಸವನ್ನು ಮಾಡುವುದಕ್ಕೂ ನೀಲಿ, ಧೂಮ, ರಕ್ತವರ್ಣ ನಯವಾದ ನಾರುಮಡಿ ಇವುಗಳಲ್ಲಿ ಕಸೂತಿ ಕೆಲಸ ಮಾಡುವುದಕ್ಕೂ ಎಂದರೆ ಅವುಗಳಲ್ಲಿ ಯಾವ ಕೆಲಸವನ್ನಾದರೂ ಮಾಡುವುದಕ್ಕೂ ಚಮತ್ಕಾರದ ಕೆಲಸವನ್ನು ಕಲ್ಪಿಸಿ ಮಾಡುವವರಂತೆಯೂ ದೇವರು ಹೀಗೆ ಎಲ್ಲಾ ತರವಾದ ಕೆಲಸ ಮಾಡುವುದಕ್ಕೆ ಜ್ಞಾನದ ಹೃದಯವನ್ನು ಅವರಲ್ಲಿ ತುಂಬಿಸಿದ್ದಾನೆ ಎಂದು ಹೇಳಿದನು.

ದೇವರು ಬೆಚಲೇಲನಿಗೂ ಮತ್ತು ಒಹೋಲೀಯಾಬನಿಗೂ ವಿಸ್ಮಯಗೊಳಿಸುವ ಕೌಶಲ್ಯ ಮತ್ತು ಜ್ಞಾನದಿಂದ ತುಂಬಿಸಿ ವಿಚಿತ್ರವಾದ ಕೆತ್ತನೆಯ ಮಾಡುವುದಕ್ಕೂ ಮತ್ತು ಗುಡಾರವನ್ನು ಕಟ್ಟಲು ಬೇರೆಯವರನ್ನು ತರಬೇತಿಗೊಳಿಸಲು, ಕಲಿಸುವ ಹೃದಯವನ್ನೂ ಕೊಟ್ಟನು.

ಹಡ್ಸನ್ ಟೇಲರ್ ಎಂಬ ಚೀನಾ ದೇಶಕ್ಕೆ ಹೋದ ಸುವಾರ್ತಾ ಸಾರಕ ಹೇಳಿದ್ದೇನೆಂದರೆ "ದೇವರ ಕೆಲಸ ದೇವರ ಇಚ್ಚೆಯ ಪ್ರಕಾರ ಮಾಡಿದಾಗ ದೇವರು ಎಲ್ಲವನ್ನೂ ಕೊರತೆಯಿಲ್ಲದೆ ಒದಗಿಸುತ್ತಾನೆ.

ನಿನ್ನಲ್ಲಿರುವ ಎಲ್ಲವೂ ದೇವರಿಗೆ ಸೇರಿದುದು ಎಂದು ನಿನಗೆ ತಿಳಿದು ಅದನ್ನು ಒಪ್ಪಿಕೊಂಡಿರುವೆಯಾ? ದೇವರಿಗೆ ನೀನು ಧಾರಾಳವಾಗಿ ಕೊಡುತ್ತಿರುವೆಯಾ? ಹಣಕಾಸಿನ ವಿಷಯವಾಗಿ- ನಿನ್ನ ಆದಾಯದಲ್ಲಿ10% ಗಿಂತ ಹೆಚ್ಚಾಗಿ, ನಿನ್ನ ಸಮಯ, ನಿನ್ನಲ್ಲಿರುವ ಪ್ರತಿಭೆ, ಕೌಶಲ್ಯ ಎಲ್ಲವನ್ನೂ ದೇವರಿಗಾಗಿ ಮಿಸಲಾಗಿಟ್ಟಿರುವೆಯಾ? ಯಾವ ವಿಧದಲ್ಲಿ ದೇವರಿಗೆ ನೀನು



ಹೆಚ್ಚಾಗಿ ಕೊಡಬಹುದು? ದೇವರ **ರಾಜ್ಯವನ್ನು** ಕಟ್ಟಲು ಯಾವ ರೀತಿಯಲ್ಲಿ ತೊಡಗಿಸಿಕೊಂಡಿರುವೆ? ಒಂದು ಆತ್ಮವನ್ನು **ರಕ್ಷಿಸಲು** ಯಾವಾಗ ಕಡೆಯ ಸಾರಿ ನೀನು ಪ್ರಯತ್ನಪಟ್ಟೆ? ಯಾವುದಾದರು ನಾಯಕತ್ವದ ಕೆಲಸಗಳಲ್ಲಿ ಸೇವೆ ಮಾಡಿರುವೆ? ಇನ್ನೂ ಹೆಚ್ಚಿಗೆ ಸೇವೆ ಮಾಡಲು ನೀನು ಏನನ್ನು ಬಿಟ್ಟುಕೊಡಬೇಕಾಗಿದೆ? (ನಾಯಕನಲ್ಲದಿದ್ದರೆ ನಾಯಕನಾಗಲು, ನಾಯನಾಗಿದ್ದರೆ ಇನ್ನೂ ಹೆಚ್ಚು ಹೆಚ್ಚಾಗಿ ಸೇವೆ ಮಾಡುಲು?)

## ದಿನ -4

## ದೇವರ ಕೈ: ದೇವರು ನಿನಗಾಗಿ ಯುದ್ಧ ಮಾಡುವರು

ವಿಮೋಚನಕಾಂಡ 13:21 "ಇದಲ್ಲದೆ ಅವರು ಹಗಲೂ ರಾತ್ರಿಯೂ ಪ್ರಯಾಣ ಮಾಡುವ ಹಾಗೆ ಯೆಹೋವನು ಹಗಲಲ್ಲಿ ಅವರಿಗೆ ದಾರಿ ತೋರಿಸುವುದಕ್ಕೆ ಮೇಘದ ಸ್ಥಂಬದಲ್ಲಿಯೂ ರಾತ್ರಿಯಲ್ಲಿ ಅವರ್ಗಿಗೆ ಬೆಳಕು ಕೊಡುವುದಕ್ಕೆ ಅಗ್ನಿಯ ಸ್ಥಂಭದಲ್ಲಿಯೂ ಅವರ ಮುಂದೆ ಹೋದನು.

ದೇವರು ಇಸ್ರಾಯೇಲರನ್ನು ಈಜಿಪ್ಟಿನ ದಾಸತ್ವದಿಂದ ಬಿಡಿಸಿ, ವಾಗ್ದಾನ ಮಾಡಿದ ದೇಶಕ್ಕೆ ಕರೆದುಕೊಂಡು ಹೋದನು ಹಾಗೆ ಅವರು ಪ್ರಯಾಣ ಮಾಡುವಾಗ ಅವರಿಗೆ ದಾರಿ ತೋರಿಸಲು ಹಗಲಲ್ಲಿ ಮೇಘದ ಸ್ಥಂಬವಾಗಿಯೂ ರಾತ್ರಿಯಲ್ಲಿ ಅಗ್ನಿಯ ಸ್ಥಂಬವಾಗಿಯೂ ಅವರ ಮುಂದೆ ಹೋಗಿ, ರಾತ್ರಿ ಹಗಲು ಪ್ರಯಣ ಮಾಡಲು ಸಹಕರಿಸಿದನ್ನು ಆ ಅನುಭವ ಎಷ್ಟು **ವಿಸ್ಮಯ** ಕಾರಿಯಾಗಿರಬಹುದು? ಯೋಚಿಸಿ ನೋಡಿ

ಸರ್ವಶಕ್ತನಾದ ದೇವರು ನಮ್ಮೊಂದಿಗೆ, ಮತ್ತು ನಮ್ಮ ಮುಂದೆ ಹೋಗಿ ನಮಗೆ ದಾರಿ ತೋರಿಸುವುದು ಮಾತ್ರವಲ್ಲದೆ ಹಗಲು ರಾತ್ರಿ ನಮ್ಮನ್ನು ಕಾಪಾಡುತ್ತಾರೆ.

ಹಗಲಿನಲ್ಲಿ ಅವರ ಮುಂದೆ ಮೇಘದ ಸ್ಥಂಭದಲ್ಲಿ ಹೋಗಿ ಅವರಿಗೆ ದಾರಿ ತೋರಿಸುವುದು ಮಾತ್ರವಲ್ಲದೆ
ಮರುಭೂಮಿಯಲ್ಲಿರುವ ಸುಡುಬಿಸಿಲಿನಿಂದ ಅವರನ್ನು ರಕ್ಷಿಸಿದನು. ರಾತ್ರಿಯಲ್ಲಿ ಅವರ ಮುಂದೆ ಸ್ಥಂಬದಲ್ಲಿ ಹೋಗಿ ಅವರಿಗೆ
ಬೆಳಕನ್ನು ಕೊಡುವುದು ಮಾತ್ರವಲ್ಲದೆ. ಮರುಭೂಮಿಯಲ್ಲಿ ರಾತ್ರಿ ಭಯಂಕರ ಚಳಿಯಲ್ಲಿ ಅವರನ್ನು ಬೆಚ್ಚಗೆ ಮಾಡಿದನು

ದೇವರು ತನ್ನ ಜನಾಂಗವನ್ನು ಎಷ್ಟೊಂದು ಮಮಕಾರದಿಂದ ಸಲಹಿದರು ಎಂದು ಕೇವಲ ಮಾತುಗಳಿಂದ ವರ್ಣಿಸಲು ಅಸಾಧ್ಯ. ಅವರೊಟ್ಟಿಗೇ ಇದ್ದು ಖುದ್ದಾಗಿ ಅವರ ಎಲ್ಲಾ ಅವಶ್ಯಕತೆಗಳನ್ನು ಪೊರೈಸಿದರು ಯಾವ ದೇವದೂತರನ್ನು ಅಥವಾ ಕಾರ್ಯಭಾರಿಯನ್ನು ಕಳಿಸಲಿಲ್ಲ ತಾನು ಅವರ ತಂದೆ ಎಂದು ಅವರಿಗೆ ಈ ಎಲ್ಲಾ ಕಾರ್ಯಗಳಿಂದ ಸ್ಪಷ್ಟಪಡಿಸಿದರು.

ಅವರೊಂದಿಗಿದ್ದಾಗ ಅವರಿಗಾಗಿ ಬೇರೇನು ಮಾಡಿದರು?

ಧರ್ಮೋಪದೇಶಕಾಂಡ 1:26-36

"ಆದರೆ ನೀವು ಮೇಲೆ ಹೋಗುವುದಕ್ಕೆ ಮನಸ್ಸಿಲ್ಲದೆ ನಿಮ್ಮ ದೇವರಾದ ಯೆಹೋವನ ಅಪ್ಪಣೆಗೆ ತಿರುಗಿಬಿದ್ದು 27ನಿಮ್ಮ ಗುಡಾರಗಳಲ್ಲಿ ಗೊಣಗುಟ್ಟಿ ಯೆಹೋವನು ನಮ್ಮನ್ನು ಹಗೆಮಾಡಿದ್ದರಿಂದ

ನಮ್ಮನ್ನು ಅಮೋರಿಯರ ಕೈಗೆ ಒಪ್ಪಿಸಿ ನಮ್ಮನ್ನು ನಾಶಮಾಡುವುದಕ್ಕೆ ಈಜಿಪ್ಟ್ ದೇಶದೊಳಗಿಂದ ಹೊರಗೆ ಬರಮಾಡಿದ್ದಾನೆ, 28ನಾವು ಎಲ್ಲಿಗೆ ಏರಿ ಹೋಗೋಣ? ನಮ್ಮ ಸಹೋದರರು, ಆ ಜನರು ನಮಗಿಂತ ದೊಡ್ಡವರೂ ಎತ್ತರವಾದವರೂ ಪಟ್ಟಣಗಳು ದೊಡ್ಡವುಗಳೂ ಆಕಾಶದ ಎತ್ತರಕ್ಕೂ ಗೋಡೆಯುಳ್ಳವುಗಳೂ, ಇದಲ್ಲದೆ ರಾಕ್ಷಸಾಕಾರದ ಅನಾಕ್ಯರ ಮಕ್ಕಳನ್ನು ಅಲ್ಲಿ ನೋಡಿದೆವು ಎಂದು ಹೇಳಿ ನಮ್ಮ ಹೃದಯವನ್ನು ಅಧೈರ್ಯಪಡಿಸಿದ್ದಾರೆ ಎಂದು ಹೇಳಿದ್ದಿರಿ. 29ಆಗ ನಾನು ನಿಮಗೆ "ಅಂಜಬೇಡಿರಿ ಅವರಿಗೆ ಭಯಪಡಬೇಡಿರಿ, 30.ನಿಮ್ಮ ಮುಂದೆ ಹೋಗುವ ನಿಮ್ಮ ದೇವರಾದ ಯೆಹೋವನು ಆತನೇ ಈಜಿಪ್ಟಿನಲ್ಲಿ ನಿಮ್ಮ ಕಣ್ಣುಗಳ ಮುಂದೆಯೂ ಮರುಭೂಮಿಯಲ್ಲಿಯೂ ನಿಮಗೆ ಮಾಡಿದ ಎಲ್ಲಾದರ ಪ್ರಕಾರ ನಿಮಗೋಸ್ಕರ ಯುದ್ಧಮಾಡುವನು 31.ನೀವು ಈ ಸ್ಥಳಕ್ಕೆ ಸೇರುವ ಪರ್ಯಂತರ ನಿಮ್ಮ ಪ್ರಮಾಣದಲ್ಲೆಲ್ಲಾ ಒಬ್ಬ ತಂದೆ ತನ್ನ ಮಗನನ್ನು ಹೇಗೋ ಹಾಗೆಯೇ ನಿಮ್ಮ ದೇವರಾದ ಯೆಹೋವನು ನಿಮ್ಮನ್ನು ಹೊತ್ತುತಂದನಲ್ಲವೇ? ಎಂದು ನಿಮಗೆ ಹೇಳಿದೆನು. 32ಆದರೆ ಈ ಕಾರ್ಯದಲ್ಲಿ ನೀವು ನಿಮ್ಮ ದೇವರಾದ ಯೆಹೋವನನ್ನು ನಂಬಲಿಲ್ಲ, 33.ಆತನೇ ಇಳಿದು ಕೊಳ್ಳುವುದಕ್ಕೆ ನಿಮಗೆ ಸ್ಥಳವನ್ನು ವಿಚಾರಿಸಲೂ, ನೀವು ಹೋಗತಕ್ಕ ಮಾರ್ಗವನ್ನು ನಿಮಗೆ ತೋರಿಸಲೂ ರಾತ್ರಿ ಹೊತ್ತು ಬೆಂಕಿಯಲ್ಲಿರುಯೂ ಹಗಲೂ ಹೊತ್ತು ಮೇಘದಲ್ಲಿಯೂ ಮಾರ್ಗದಲ್ಲಿ ನಿಮ್ಮ ಮುಂದೆ ಹೋದನು. 34,ಯೇಹೋವನು ನಿಮ್ಮ ಮಾತುಗಳ ಧ್ವನಿಯನ್ನು ಕೇಳಿ ಕೋ ಸಿಕೊಂಡು ಪ್ರಮಾಣಮಾಡಿ 35,"ನಿಶ್ಚಯವಾಗಿ ಕೆಟ್ಟ ಸಂತತಿಯಾದ ಈ ಮನುಷ್ಯರಲ್ಲಿ ಒಬ್ಬನಾದರೂ ನಾನು ನಿಮ್ಮ ತ್ರಗಳಿಗೆ ಕೊಡುತ್ತೇನೆಂದು ಪ್ರಮಾಣಮಾಡಿದ ಆ ಒಳ್ಳೆಯ ದೇಶವನ್ನು ನೋಡುವುದಿಲ್ಲ 36,ಯೆಫುನ್ನೆಯ ಮಗ ಕಾಲೇಬನು ಮಾತ್ರ ಅದನ್ನು ನೋಡುವನು. ಅವನು ಯೆಹೋವನನ್ನು ಪೂರ್ಣವಾಗಿ ಹಿಂಬಾಲಿಸಿದ್ದರಿಂದ ಅವನು ಸಂದರ್ಶಿಸಿದ ದೇಶವನ್ನು ಅವನಿಗೂ ಅವನ ಮಕ್ಕಳಿಗೂ ಕೊಡುವೆನು" ಎಂದನು

ಒಬ್ಬ ತಂದೆಯ ಹಾಗೆ ಅವರೊಂದಿಗೆ ಹಗಲು ರಾತ್ರಿ ಇದ್ದು ಅವರನ್ನು ಹೊತ್ತುಕೊಂಡು ಹೊದಾಗಲೂ . "ಪ್ರಮಾಣಮಾಡಿದ ದೇಶದೊಳಗೆ ಹೋಗಿರಿ" ಎಂದು ದೇವರು ಹೇಳಿದಾಗ ಅವರು ಹೋಗಲು ನಿರಾಕರಿಸಿದರು ಏಕೆಂದರೆ ಗೂಡಾಚಾರರಾಗಿ ಅದರೊಳಗೆ ಹೋದ **ಕೆಲವು** ಇಸ್ರಾಯೇಲ್ ನಾಯಕರು ಕೆಟ್ಟ ವಾರ್ತೆಯನ್ನು ಅವರಿಗೆ ತಂದಿದ್ದರು, **ಏನೆಂದರೆ** ಕಾನಾನ್ ದೇಶದ ಜನರು ರಾಕ್ಷಸರು, ಅವರೊಂದಿಗೆ ಯುದ್ಧಮಾಡಿದರರೆ ನಾವೆಲ್ಲ **ಸಾಯುತ್ತೇವೆ** ಎಂದು ಅವರನ್ನು ಹೆದರಿಸಿದರು, ಇದನ್ನೆಲ್ಲಾ ನೋಡಿ ದೇವರಿಗೆ ದು:ಖ ಮತ್ತು ಕೋಪವುಂಟಾಯಿತು ಏಕೆಂದರೆ ಅವರು ಮಾಡಿದ ಎಲ್ಲಾ ಕಾರ್ಯಗಳನ್ನು ಜನರು ಪ್ರಶಂಶಿಸಲಿಲ್ಲ ಮತ್ತು ಅವರಿಗೆ ಕೃತಜ್ಞತೆಯನ್ನೂ ತೋರಿಸಲಿಲ್ಲ ಮಾತ್ರವಲ್ಲ ಪ್ರಮಾಣಮಾಡಿದ ದೇಶದಲ್ಲಿ ಯಾರು ವಾಸವಾಗಿದ್ದರೂ ಸರಿ, ತಾನವರನ್ನು ಅಲ್ಲಿ ಸುರಕ್ಷಿತವಾಗಿ ಕೊಂಡುಹೋಗಿ ಸೇರಿಸುವೆನೆಂಬ ವಿಶಯದಲ್ಲಿ ದೇವರನ್ನು ನಂಬಿ ಭರವಸೆಯಿಡಲಿಲ್ಲ

ಕೇವಲ ಕಾಲೇಬ ಮತ್ತು ಯೆಹೋಶುವ ಮಾತ್ರ ದೇವರನ್ನು ನಂಬಿ ಪೂರ್ಣ ಭರವಸೆಯಿಟ್ಟರು.

ಅವರ ಅಪನಂಬಿಕೆ ಮತ್ತು ಪ್ರತಿಭಟನೆಗೆ ಪ್ರತಿಕ್ರಿಯೆತೋರಿ ದೇವರು ಹೀಗನ್ನುತಾರೆ,



ಧರ್ಮೋಪದೇಶಕಾಂಡ1:29-30"ಆಗ ನಾನು ನಿಮಗೆ " ಅವರಿಗೆ ಅಂಜಬೇಡಿರಿ ಭಯಪಡಬೇಡಿರಿ 30,ನಿಮ್ಮ ಮುಂದೆ ಹೋಗುವ ನಿಮ್ಮ ದೇವರಾದ ಯೆಹೋವನು ಆತನೇ ಈಜಿಪ್ಟಿನಲ್ಲಿ ನಿಮ್ಮ ಕಣ್ಣುಗಳ ಮುಂದೆಯೂ ಮರುಭೂಮಿಯಲ್ಲಿಯೂ ನಿಮಗೆ ಮಾಡಿದ ಎಲ್ಲಾದರ ಪ್ರಕಾರ ನಿಮಗೋಸ್ಕರ ಯುದ್ಧಮಾಡುವನು.

ಈ ಜನರನ್ನು ರಾಕ್ಷಸರ ದೇಶಕ್ಕೆ ಕಳೆಸಿ, ಯುದ್ಧದಲ್ಲಿ ಅವರು ಸೋತು ಸಾಯುವುದು ದೇವರ ಯೋಜನೆಯಾಗಿರಲಿಲ್ಲ ಅದಕ್ಕಿಂತ ಹೆಚ್ಚಾಗಿ ಅವರ ಮುಂದೆ ಹೋಗಿ ಅವರಿಗೋಸ್ಕರ ಯುದ್ಧಮಾಡುವುದು ದೇವರ ಯೋಜನೆಯಾಗಿತ್ತು. ಇಲ್ಲಿ ದೇವರು ನಾನು ಮಾಡುತ್ತಿರುವುದು ಹೊಸತ್ತೇನಲ್ಲ. ಮೋಶೆಯನ್ನು ಅವರ ಬಳಿಗೆ ಕಳಿಸಿ ಈಜಿಪ್ಟಿನಿಂದ ಅವರನ್ನು **ಬಿಡಿಸಿ**, ಪ್ರಯಾಣದಲ್ಲಿ ಅವರ ಮುಂದೆ ಹೋಗಿ, ಈಜಿಪ್ಟಿನಿಂದ ಹೊರಟು ಮರುಭೂಮಿಯಲ್ಲೆಲ್ಲಾ ಅವರಿಗೋಸ್ಕರ ಯುದ್ಧ ಮಾಡಿರುವೆನೆಂದು ಜ್ಞಾ ಸುತ್ತಿದ್ದಾರೆ.

ಈ ವಿಷಯ ಕುರಿತು ಕೆಲವು ಭಾಗಗಳನ್ನು ಓ**ದೋಣ**

ಧರ್ಮೋಪದೇಶಕಾಂಡ 20:1-4"ನೀವು ನಿಮ್ಮ ಶತ್ರುಗಳಿಗೆ ವಿರೋಧವಾಗಿ ಯುದ್ಧಕ್ಕೆ ಹೊರಟು ಕುದುರೆಗಳನ್ನೂ ರಥಗಳನ್ನೂ ನಿಮಗಿಂತ **ಹೆಚ್ಚಾಗಿರುವ** ಜನರನ್ನು ನೋಡಿದರೆ ಅವರಿಗೆ ಭಯ ಪಡಬೇಡಿರಿ, ಏಕೆಂದರೆ ಈಜಿಪ್ಟ್‌ದೇಶದೊಳಗಿಂದ ನಿಮ್ಮನ್ನು ಹೊರಗೆ ಬರಮಾಡಿದ ನಿಮ್ಮ ದೇವರಾದ ಯೆಹೋವನು ನಿಮ್ಮ ಸಂಗಡ ಇದ್ದಾನೆ, 2,ನೀವು ಯುದ್ಧಕ್ಕೆ ಸಮೀಪ ಬಂದಾಗ ಯಾಜಕನು ಹತ್ತಿರ ಬಂದು ಜನರ ಸಂಗಡ ಮಾತನಾಡಿ ಅವರಿಗೆ 3.ಇಸ್ರಾಯೇಲರೇ ಕೇಳಿರಿ, ನೀವು ಈ ಹೊತ್ತು ನಿಮ್ಮ ಶತ್ರುಗಳಿಗೆ ವಿರೋಧವಾಗಿ ಯುದ್ಧಕ್ಕೆ ಸಮೀಪಬಂದಿದ್ದೀರಿ ನಿಮ್ಮ ಹೃದಯಗಳು ಬಳಲಬಾರದು ನೀವು ಭಯಪಡಬೇಡಿರಿ 4,ಏಕೆಂದರೆ ನಿಮ್ಮ ಶತ್ರುಗಳ ವಿರೋಧವಾಗಿ ನಿಮಗೋಸ್ಕರ ಯುದ್ಧಮಾಡಿ ನಿಮ್ಮನ್ನು ರಕ್ಷಿಸುವುದಕ್ಕೆ ನಿಮ್ಮ ದೇವರಾದ ಯೆಹೋವನೇ ನಿಮ್ಮ ಸಂಗಡ ಬರುತ್ತಾನೆ" ಎಂದು ಹೇಳಬೇಕು

ಯೆಶಾಯ45:2 "ನಾನು ನಿನ್ನ ಮುಂದೆ ಹೋಗಿ ಡೊಂಕಾದ ಸ್ಥಳಗಳನ್ನು ಸಮಮಾಡಿ, ಹಿತ್ತಾಳೆಯ ಕದಗಳನ್ನು ಒಡೆದು ಕಬ್ಬಿಣದ ಅಗುಳಿಗಳನ್ನು ಮುರಿದುಬಿಡುವೆನು,"

ಯೆಶಾಯ52:12" ನೀವು ತ್ವರೆಯಾಗಿ ಹೋಗುವುದಿಲ್ಲ ಓಡಿ ಹೋಗುವುದಿಲ್ಲ ಏಕೆಂದರೆ ಯೆಹೋವನೇ ನಿಮ್ಮ ಮುಂದೆ ಹೋಗುವನು ಇಸ್ರಾಯೇಲಿನ ದೇವರು ನಿಮ್ಮ ಹಿಂದೆ ಕಾವಲು ಕಾಯುವನು.

ಯೆಶಾಯ 58:8 "ಆಗ ನಿನ್ನ ಬೆಳಕು ಉದಯದಂತೆ ಪ್ರತ್ಯಕ್ಷವಾಗುವುದು ನಿನ್ನ ಕ್ಷೇಮವು ಬೇಗನೆ ಚಿಗುರುವುದು ನಿನ್ನ ನೀತಿಯು ನಿನಗೆ ಮುಂಬಲವಾಗಿರುವುದು ಯೆಹೋವನ ಮಹಿಮೆಯು ನಿನಗೆ ಹಿಂಬಲವಾಗಿರುವುದು.

ದೇವರ ಕೈ ಎಷ್ಟು ಬಲಿಷ್ಠವಾದುದು? ಅವರು ನಿಮ್ಮ ಮುಂದೆ ಹೋಗಿ ನಿಮಗೋಸ್ಕರ ಯುದ್ಧಮಾಡುವರು ಹಾಗಾದರೆ ಯಾವುದಕ್ಕಾದರೂ ಭಯಪಡಲು ಅಥವಾ ಅಭದ್ರತೆಪಡಲು

ಸಾಧ್ಯವೇ?

ನಾವು ಯಾವುದಾದರೂ ಗಂಡಾಂತರದಲ್ಲಿ ಬಿದ್ದು ಹಾನಿಗೊಳಗಾಗದ ಹಾಗೆ, ದೇವರು ನಮ್ಮೊಡನೆ ಒಬ್ಬ ಶ್ರೇಷ್ಠ ತಂದೆಯ ಹಾಗೆ ಮತ್ತು ತಾಯಿಯ ಹಾಗೆ ನಮ್ಮ ಮುಂದೆ ಹೋಗಿ ನಮ್ಮ ದಾರಿಯನ್ನು ಸರಿಪಡಿಸುತ್ತಾರೆ, ಒಬ್ಬ ಶ್ರೇಷ್ಠ ನಾಯಕನ ಹಾಗೆ ನಮ್ಮ ಮುಂದೆ ಹೋಗಿ ಸರಿಯಾದ ದಾರಿಯನ್ನು ಹುಡುಕಿ ತುಂಬಾ ಮೃದುವಾಗಿ ಮತ್ತು ಸುರಕ್ಷಿತವಾಗಿ ನಮ್ಮನ್ನು ನಡೆಸುತ್ತಾರೆ, ಅವರೊಬ್ಬ ಸರ್ವಶಕ್ತ ಸೈನ್ಯಾಧಿಕಾರಿಯಾಗಿ ಒಬ್ಬರೇ ನಮ್ಮೆಲ್ಲಾ ಯುದ್ಧಗಳನ್ನು ಮೊದಲೇ ಮಾಡಿ ಮುಗಿಸಿದ್ದಾರೆ. **ನಿಮ್ಮ ಭಯಗಳು** ಯಾವುವು ಎಂದು ಪಟ್ಟಿ ಮಾಡು ಈ ಭಯಗಳು ಮತ್ತು ಯುದ್ಧಗಳು, ನಿನ್ನ ತೊಂದರೆಗಳಲ್ಲ ಎಂದು ನಂಬಲು ಶುರುಮಾಡು, ಏಕೆಂದರೆ ನೀವು ದೇವರಿಗೆ ಸೇರಿದವರು ಆದ್ದರಿಂದ ಅವೆಲ್ಲ ದೇವರ ಯುದ್ಧಗಳು ನೀನೇನು ಚಿಂತಿಸದೆ ಅವರಲ್ಲಿ ಭರವಸೆಯಿಟ್ಟು ಅವರು ತಮ್ಮ ಬಲಿಷ್ಠ ಕೈಯಿಂದ ಮತ್ತು ಚಾಚಿದ ತೋಳಿನಿಂದ ನಿನ್ನ ಯುದ್ಧಗಳನ್ನು ಮಾಡುವರೆಂದು ನಂಬು.

ಹೀಗೆ ದೇವರು ನಿನಗಾಗಿ ಯುದ್ಧಮಾಡುತ್ತಿರುವಾಗ, ನಿನಗೆ ಶೋದನೆಗಳನ್ನು ಜಯಸುವುದು ಸಾಧ್ಯವೇ? ನಿನಗೆ ಜಯಸಲು ಅಸಾಧ್ಯವೆನಿಸುವ ಪಾಪಗಳನ್ನು, ಶೋದನೆಗಳನ್ನು ಪಟ್ಟಿಮಾಡಿ, ಅವರು ನಿನಗೋಸ್ಕರ ಯುದ್ಧ ಮಾಡುವರೆಂದು ನಂಬಿ, ಕದಲದೆ
ನಿಲ್ಲಿರಿ. ಆಗ ದೇವರು ತೋರಿಸುವ ರಕ್ಷಣೆಯನ್ನು ನೋಡುವಿರಿ.

## ದಿನ -5
## ತೀರ್ಪು ಕೊಡುವ ದೇವರ ಬಲಿಷ್ಠ ಕೈ

ದೇವರ ತೀರ್ಪು ಬಹಳ ಸರಳವಾದುದು: ಆಶೀರ್ವಾದ ಅಥವಾ ಶಾಪ ಧರ್ಮೋಪದೇಶಕಾಂಡ2:7 "ಏಕೆಂದರೆ ನಿಮ್ಮ ದೇವರಾದ ಯೆಹೋವನು ನಿಮ್ಮ ಎಲ್ಲಾ ಕೈಕೆಲಸದಲ್ಲಿ ನಿಮ್ಮನ್ನು ಆಶೀರ್ವದಿಸಿದ್ದಾನೆ ನೀವು ಈ ದೊಡ್ಡ ಮರುಭೂಮಿಯಲ್ಲಿ ಸಂಚಾರ ಮಾಡಿದ್ದನ್ನು ಆತನು ಬಲ್ಲನು. ಈ ನಾಲ್ವತ್ತು ವರ್ಷನಿಮ್ಮ ದೇವರಾದ ಯೆಹೋವನು ನಿಮ್ಮ ಸಂಗಡ ಇದ್ದಾನೆ ನಿಮಗೆ ಏನೂ ಕಡಿಮೆ ಆಗಲಿಲ್ಲ "ಎಂದು ಹೇಳಿದನು

ವಚನ:14-23 "ನಾವು ಕಾದೆಶ್ ಬರ್ನೇಯವನ್ನು ಬಿಟ್ಟಂದಿನಿಂದ ಜೆರೆದ ಹಳ್ಳವನ್ನು ದಾಟಿದವರೆಗೆ ಗತಿಸಿದ ಕಾಲವು 38 ವರ್ಷ ಯೆಹೋವನು ಅವರಿಗೆ ಪ್ರಮಾಣಮಾಡಿದ ಪ್ರಕಾರ ಯುದ್ಧಸ್ಥರ ಸಂತತಿ ಎಲ್ಲಾ ಸೈನ್ಯದೊಳಗಿಂದ ಮುಗಿದುಹೋಗುವವರೆಗೆ ತಡವಾಯಿತು 15,ಅವರು ಮುಗಿದು ಹೋಗುವವರೆಗೆ ಅವರನ್ನು ಸೈನ್ಯದೊಳಗಿಂದ ನಿರ್ಮೂಲ ಮಾಡುವುದಕ್ಕೆ ಯೆಹೋವನ ಹಸ್ತವು ಅವರ ಮೇಲಿತ್ತು. 16ಯುದ್ಧ ಮಾಡುವವರು ಜನರೊಳಗಿಂದ ಸತ್ತು ಮುಗಿದು ಹೋದ ಮೇಲೆ 17.ಯೆಹೋವನು ನನಗೆ "ಇಂದು ನೀನು ಮೋವಾಬಿನ ಮೇರೆಯಾದ ಆರ್ ಎಂಬ ಸ್ಥಳವನ್ನು ದಾಟಬೇಕು 18,ಅಮ್ಮೋನ್ಯರ ಎದುರಿಗೆ ನೀನು ಬಂದರೆ ಅವರಿಗೆ ಉಪದ್ರವ ಕೊಡಬೇಡಿ



ಅವರ ಸಂಗಡ ಜಗಳವಾಡಬೇಡಿ 19,ಏಕೆಂದರೆ ನಾನು ಅಮ್ಮೋನನ ಮಕ್ಕಳ ದೇಶದಲ್ಲಿ ನಿನಗೆ ಸೊತ್ತನ್ನು ಕೊಡುವುದಿಲ್ಲ " ನಾನು ಅದನ್ನು ಲೋಟನ ಮಕ್ಕಳಿಗೆ ಸೊತ್ತಾಗಿ ಕೊಟ್ಟಿನಲ್ಲಾ" ಎಂದನು 20, ಇದು ಸಹ ರಾಕ್ಷಸರ ದೇಶವೆನಿಸಿಕೊಂಡಿತ್ತು. ರಾಕ್ಷಸರು ಮೊದಲು ಅದರಲ್ಲಿ ವಾಸಮಾಡಿದರು ಅಮೋನಿಯರು ಅವರಿಗೆ ಜಂಜುಮ್ಯರೆಂದು ಕರೆದರು. 21,ಅವರು ಆನಾಕ್ಯರ ಹಾಗೆ ದೊಡ್ಡವರೂ ಅನೇಕ ವಾದವರೂ ಎತ್ತರವಾದವರೂ ಆಗಿರುವ ಜನರು. ಆದರೆ ಯೆಹೋವನು ಅವರನ್ನು ಇವರ ಮುಂದೆ ನಾಶಮಾಡಿದ್ದರಿಂದ ಇವರು ಅವರನ್ನು ಹೊರಡಿಸಿ ಅವರ ಬದಲಾಗಿ ವಾಸಿಸಿದರು 22.ಯೆಹೋವನು ಸೇಯಿರಿನಲ್ಲಿ ವಾಸವಾಗಿರುವ ಏಸಾವನ ಮಕ್ಕಳಿಗೂ ಮಾಡಿದ ಹಾಗೆ ಆಯಿತು. ಅವನು ಅವರ ಮುಂದೆ ಹೋರಿಯರನ್ನು ನಾಶಮಾಡಿದಾಗ ಅವರು ಇವರನ್ನು ಹೊರಡಿಸಿ ಇವರ ಬದಲಾಗಿ ಇಂದಿನವರೆಗೂ ವಾಸಿಸಿದವರು. 23,ಹಾಗೆ ಗಾಜಾದ ಪರ್ಯಂತರ ವಾಸವಾಗಿದ್ದ ಅವ್ವಿಯರನ್ನು ಕಫ್ತೋರ್ಗರಿಂದ ಹೊರಟ ಕಫ್ತೊರ್ಯರು ನಾಶಮಾಡಿ ಅವರ ಬದಲಾಗಿ ವಾಸಿಸಿದರು.

ಯೆರೆಮೀಯ 17:5-7 ದೇವರ ತೀರ್ಪು ಹೇಗಿರುವುದೆಂದು ಈ ವಚನಗಳು ಬಹಳ ಸ್ಪಷ್ಟವಾಗಿ ಹೇಳುತ್ತವೆ.

ವಚನ 5: ಯೆಹೋವನು ಹೀಗೆ ಹೇಳುತ್ತಾನೆ "ಮನುಷ್ಯನಲ್ಲಿ ನಂಬಿಕೆ ಇಟ್ಟು ಅವನನ್ನು ತನ್ನ ತೋಳಾಗಿ ಮಾಡಿಕೊಂಡು ಯೆಹೋವನ ಕಡೆಯಿಂದ ಯಾವನ ಹೃದಯವು ತೊಲಗುವುದೋ ಅವನು ಶಾಪಗ್ರಸ್ತನು ವಚನ 7: ಯಾವನು ಯೆಹೋವನಲ್ಲಿ ಭರವಸೆಯಿಟ್ಟಿರುವನೋ ಯಾವನಿಗೆ ಯೆಹೋವನು ನಿರೀಕ್ಷೆ ಯಾಗಿದ್ದಾನೊ, ಆ ಮನುಷ್ಯನು ಧನ್ಯನು.

ನಮ್ಮ ಭರವಸೆಯೆಲ್ಲಿದೆಯೊ, ಅದೇ ದೇವರ ತೀರ್ಪು ನಮ್ಮ ಮೇಲೆ ಬರುವುದನ್ನು ತಿರ್ಮಾನಿಸುತ್ತದೆ. ಇಸ್ರಾಯೇಲರಿಗೂ ಇದೇ ತರಹ ಆಯಿತು- ಈಜಿಪ್ಟನ ದಾಸತ್ವದಿಂದ ಅವರನ್ನು ಬಹು ವಿಸ್ಮಯವಾದ ಅದ್ಭುತಗಳಿಂದ, ಚಾಚಿದ ತೋಳಿನಿಂದ ರಕ್ಷಿಸಿದ ಅದೇ ದೇವರು, ಅದೇ ಕೈಗಳಿಂದ ಪ್ರಮಾಣಮಾಡಿದ ದೇಶದಲ್ಲಿ ವಾಸಿಸುತ್ತಿದ್ದ ರಾಕ್ಷಸರಿಂದ ತಮ್ಮನ್ನು ರಕ್ಷಿಸಲು ಸಾಧ್ಯ ಎಂಬುದನ್ನು ನಂಬಲು ನಿರಾಕರಿಸಿದರು ಅವರು ದೇವರನ್ನು ನಂಬದ ಕಾರಣ, ದೇವರ **ಶಾಪ** ಅವರ ಮೇಲುಂಟಾಗಿ ಯುದ್ಧ ಮಾಡುವ ಜನರೆಲ್ಲಾ ಮರುಭೂಮಿಯಲ್ಲಿ ಸತ್ತು **ನಾಶ**ವಾದರು ಮತ್ತು 40 ವರ್ಷಗಳು ಮರುಭೂಮಿಯಲ್ಲಿ ಅವರು ಅಲೆದಾಡಬೇಕಾಯಿತು.

ವಚನ:14, ಯೆಹೋವನು ಅವರಿಗೆ ಪ್ರಮಾಣ ಮಾಡಿದ ಪ್ರಕಾರ ಯುದ್ಧಸ್ಥರು ಸಂತತಿ ಎಲ್ಲಾ ಸೈನ್ಯದೊಳಗಿಂದ ಮುಗಿದುಹೊಗುವವರೆಗೆ ತಡವಾಯಿತು. 15,ಅವರು ಮುಗಿದುಹೋಗುವವರೆಗೆ ಅವರನ್ನು ಸೈನ್ಯದೊಳಗಿಂದ ನಿರ್ಮೂಲ ಮಾಡುವುದಕ್ಕೆ ಯೆಹೋವನ ಹಸ್ತವು ಅವರ ಮೇಲಿತ್ತು.

ಅವರಲ್ಲಿ ನಂಬಿಕೆಯಿಡದ ವಯಸ್ಕ ಸಂತತಿಯನ್ನು ನಾಸಮಾಡಿ ನಂತರ, ಮುಂದಿನ ಸಂತತಿಯನ್ನು ವಾಗ್ದಾನ ಮಾಡಿದ ದೇಶಕ್ಕೆ ದೇವರು ಕರೆದೊಯ್ಯುತ್ತಾರೆ ಮತ್ತವರಿಗೆ ತಾನು ಅವರಿಗಾಗಿ ಏನು ಮಾಡುವೆನೆಂದು ಹೇಳುತ್ತಾರೆ,

ಧರ್ಮೋಪದೇಶಕಾಂಡ 7:16-26 " ನಿಮ್ಮ ದೇವರಾದ ಯೆಹೋವನು ನಿಮಗೆ ಒಪ್ಪಿಸುವ ಜನಗಳನ್ನೆಲ್ಲಾ ನಾನು ಸಂಹರಿಸಿಬಿಡುವೆ. ಅವರ ಮೇಲೆ ನೀವು ಕಟಾಕ್ಷವಿಡಬಾರದು, ಇಲ್ಲವೆ ಅವರ ದೇವರುಗಳನ್ನು ಆರಾಧಿಸಬಾರದು ಏಕೆಂದರೆ ಅದು ನಿಮಗೆ ಉರುಲಾಗುವುದು. 17.ಈ ಜನಾಂಗದವರು ನಮಗಿಂತ ಹೆಚ್ಚು ಮಂದಿ ಇದ್ದಾರೆ. ನಾವು ಹೇಗೆ ಅವರನ್ನು ವಶಮಾಡಿಕೊಳ್ಳಲಿ ಎಂದು ನಿಮ್ಮ ಹೃದಯದಲ್ಲಿ ಎಂದುಕೊಳ್ಳುವಿರೋ? 18,ನೀವು ಅವರಿಗೆ ಭಯಪಡಬೇಡಿರಿ, ನಿಮ್ಮ ದೇವರಾದ ಯೆಹೋವನು ಫರೋಹನಿಗೂ ಎಲ್ಲಾ **ಈಜಿಪ್ಟ್**ಗೂ ಮಾಡಿದ್ದನ್ನು 19,ನಿಮ್ಮ ಕಣ್ಣುಗಳು ನೋಡಿದೆ ದೊಡ್ಡ ಪುದ್ರವಗಳನ್ನೂ ನಿಮ್ಮ ದೇವರಾದ ಯೆಹೋವನು ನಮ್ಮನ್ನು ಹೊರಗೆ ಬರಮಾಡಿದಾಗ ಉಂಟಾದ ಗುರುತುಗಳನ್ನು ಅದ್ಭುತಗಳನ್ನೂ ಬಲವಾದ ಕೈಯನ್ನೂ ಚಾಚಿದ ತೋಳನ್ನು ನೀವು ಚೆನ್ನಾಗಿ ಜ್ಞಾಪಕ ಮಾಡಬೇಕು ನೀವು ಯಾವ ಜನಗಳಿಗೆ ಭಯಪಡುತ್ತೀಯೋ ಆ ಜನಗಳಿಗೆಲ್ಲಾ ನಿಮ್ಮ ಯೆಹೋವನಾದ ದೇವರು ಹಾಗೆಯೇ ಮಾಡುವನು 20,ಇದಲ್ಲದೆ ಉಳಿದವರೂ ನಮಗೆ ಮರೆಯಾಗಿ ಉಳುಕೊಂಡವರೂ ನಾಶವಾಗುವ ತನಕ ನಿಮ್ಮ ದೇವರಾದ ಯೆಹೋವನು ಕಣಜದ ಹುಳುಗಳನ್ನು ಅವರಲ್ಲಿ ಕಳುಹಿಸುವನು 21,ಅವರಿಗೆ ಹೆದರಬೇಡಿರಿ ಏಕೆಂದರೆ ನಿಮ್ಮ ದೇವರಾದ ಯೆಹೋವನು ಭಯಂಕರನಾದ ದೊಡ್ಡ ದೇವರಾಗಿ ನಿಮ್ಮ ಮಧ್ಯದಲ್ಲಿದ್ದಾನೆ. 22,ನಿಮ್ಮ ದೇವರಾದ ಯೆಹೋವನು ಆ ಜನಾಂಗಗಳನ್ನು ನಿಮ್ಮ ಮುಂದೆ ಸ್ವಲ್ಪ ಸ್ವಲ್ಪವಾಗಿ ಹೊರಗೆ ಹಾಕುವನು **ಅಡವಿಯ** ಮೃಗಗಳು ನಿಮ್ಮ ಮೇಲೆ ಹೆಚ್ಚದ ಹಾಗೆ ಅವುಗಳನ್ನು ತ್ವರೆಯಾಗಿ ಸಂಹರಿಸಬಾರದು 23,ಅವರೂ ನಿಮ್ಮ ದೇವರಾದ ಯೆಹೋವನು ಅವುಗಳನ್ನು ನಿಮಗೆ ಒಪ್ಪಿಸಿಬಿಡುವನು. ಅವು ನಾಶವಾಗುವ ತನಕ ಅತ್ಯಧಿಕವಾಗಿ ಅವನು ಸಂಹರಿಸುವರು 24,ಅವರ ಅರಸುಗಳನ್ನು ನಿನಗೆ ಒಪ್ಪಿಸುವನು ನೀವು ಅವರ ಹೆಸರನ್ನು ಆಕಾಶದ ಕೆಳಗೆ ಇಲ್ಲದ ಹಾಗೆ ನಾಶಮಾಡುವೆ ನೀವು ಅವರನ್ನು ನಿರ್ಮೂಲ ಮಾಡುವ ತನಕ ಒಬ್ಬನಾದರೂ ನಿಮ್ಮ ಮುಂದೆ ನಿಲ್ಲಲಾರನು 25 ಅವರ ದೇವರುಗಳ ವಿಗ್ರಹಗಳನ್ನು ಬೆಂಕಿಯಿಂದ ಸುಡಬೇಕು ಅವುಗಳ ಮೇಲಿರುವ ಬೆಳ್ಳಿಬಂಗಾರವನ್ನು ನೀವು ಆಶಿಸಬಾರದು, ತೆಗೆದುಕೊಳ್ಳಬಾರದು, ಅದು ನಿಮಗೆ ಉರ್ಲಾದೀತು ಏಕೆಂದರೆ ಅದು ನಿಮ್ಮ ದೇವರಾದ ಯೆಹೋವನಿಗೆ ಅಸಹ್ಯವೇ, 26,ನೀವು ಅದರಂತೆ ಶಾಪಕ್ಕೊಳಗಾಗದ ಹಾಗೆ ಅಸಹ್ಯವಾದದ್ದನ್ನು ನಿಮ್ಮ ಮನೆಗೆ ತೆಗೆದುಕೊಂಡು ಬರಬಾರದು ಅದನ್ನು ಸಂಪೂರ್ಣವಾಗಿ ಅಸಹ್ಯಿಸಬೇಕು, ಸಂಪೂರ್ಣವಾಗಿ ಹೇಸಿ**ಕೊಳ್ಳ**ಬೇಕು ಏಕೆಂದರೆ ಅದು ಶ ಸಲ್ಪಟ್ಟಿದ್ದು.

ಕಾನಾನ ದೇಶದ ನಿವಾಸಿಗಳನ್ನು ಹೊರಗಟ್ಟಲು ಅವರಲ್ಲಿ ಕಣಜದ ಹುಳುಗಳನ್ನು ಕಳುಹಿಸುವುದಾಗಿ ದೇವರು ಹೇಳಿದರು. ಕಣಜದ ಹುಳುಗಳೆಂದರೆ ಬಹಳ ಭಯಂಕರವಾಗಿ ಜೇನುನೊಣದಂತೆ ಕಚ್ಚಿ ಶರೀರದಲ್ಲಿ ವಿಷವೇರುವಂತೆ ಮಾಡುತ್ತದೆ. ಬಹಳ ನೋವಿನಿಂದ ಜನರು ಸಾಯುತ್ತಾರೆ.

ಈ ವಚನವಲ್ಲದೆ ಇತರ ಕಡೆಗಳಲ್ಲಿಯೂ ಕಣಜದ ಹುಳುಗಳ ಬಗ್ಗೆ ಹೇಳಿದೆ ವಿಮೋಚನಕಾಂಡ 23:28, ಹಿವ್ವಿಯರೂ ಕಾನಾನ್ಯರೂ ಹತ್ತಿಯರೂ ನಿಮ್ಮ ಎದುರಿನಿಂದ **ಓ**ಡಿಹೋಗುವಂತೆ ಕಣಜದ ಹುಳುಗಳನ್ನು ನಿಮ್ಮ ಮುಂದೆ ಕಳುಹಿಸುವೆನು.

ಹಾಗೆಯೇ ವಗ್ದಾನ ಮಾಡಿದ ದೇಶದ ಬಹಳ ಭಾಗವನ್ನು ಗೆದ್ದುಕೊಂಡಮೇಲೆ



ಯೆಹೋಶುವದಲ್ಲಿ ದೇವರು ಹೀಗನ್ನುತ್ತಾರೆ,
ಯೆಹೋಶುವ 24;11-12 ನೀವು ಯೋರ್ದನನ್ನು ದಾಟಿ ಯೆರಿಕೋವಿಗೆ ಬಂದಿರಿ. ಯೆರಿಕೋವಿನ ನಿವಾಸಿಗಳೂ ಅಮೋರಿಯರೂ ಪೆರಿಜ್ಜೀಯರೂ ಕಾನಾನ್ಯರೂ ಹಿತ್ತಿಯರೂ ಗಿರ್ಗಾಷಿಯರೂ ಹಿವ್ವಿಯರೂ ಯೆಬೂಸಿಯರೂ ನಿಮ್ಮ ಸಂಗಡ ಯುದ್ಧ ಮಾಡಿದರು ಆದರೆ ನಾನು ಅವರನ್ನು ನಿಮ್ಮ ಕೈಗೆ ಒಪ್ಪಿಸಿದೆನು. 12 ಇದಲ್ಲದೆ ನಾನು ನಿಮ್ಮ ಮುಂದೆ ಕಣಜದ ಹುಳುಗಳನ್ನು ಕಳುಹಿಸಿದೆನು.
ಅವು ಅವರನ್ನೂ ಅಮೋರಿಯರ ಇಬ್ಬರು ಅರಸರನ್ನು ನಿಮ್ಮ ಮುಂದೆ **ಓ**ಡಿಸಿಬಿಟ್ಟವು, ನಿಮ್ಮ ಕತ್ತಿಯಿಂದಲ್ಲ, ನಿಮ್ಮ ಬಿಲ್ಲಿನಿಂದಲ್ಲ.

"ನಾನು ನಿಮ್ಮ ಮುಂದೆ ಕಣಜದ ಹುಳುಗಳನ್ನು ಕಳುಹಿಸಿದೆನು" ಎಂದು ದೇವರು ಹೇಳುವಾಗ ಅದು ನಿಜವಾದ ಕಣಜದ ಹುಳವಾಗಿರಬಹುದು ಅಥವಾ ಮುಂದೆ ಬರುವ ವಿಮೋಚನಕಾಂಡ23:27ರ ಪ್ರಕಾರ ದೇವರು ತಮ್ಮ ದೂತನನ್ನು ಅವರ ಮುಂದೆ ಕಳುಹಿಸಿ "ನೀವು ಹೋಗುವ ಎಲ್ಲಾ ಜಾಗಗಳಲ್ಲೂ ನನ್ನ ಮೇಲಿನ ಬೀತಿಯನ್ನು ನಿಮ್ಮನ್ನು ಎದುರಿಸುವ ಜನರಲ್ಲಿ ಉಂಟುಮಾಡಿಸಿ ಅವರನ್ನೆಲ್ಲಾ ನಾಶಮಾಡುವೆನು" ಹೀಗೆ ದೇವರ ವಿರೋಧಿಗಳೆಲ್ಲಾ ಒಂದೇ ಓಡಿಹೋದರು ಅಥವಾ ತಮ್ಮನ್ನೇ ಸರ್ವನಾಶಮಾಡಿಕೊಂಡರು

ವಿಮೋಚನಕಾಂಡ23:20 ಮಾರ್ಗದಲ್ಲಿ ನಿನ್ನನ್ನು ಕಾಪಾಡುವುದಕ್ಕೋಸ್ಕರವೂ ನಾನು ಸಿದ್ದಮಾಡಿದ ಸ್ಥಳಕ್ಕೆ ನಿಮ್ಮನ್ನು ತರುವುದಕ್ಕೋಸ್ಕರವೂ ನಾನು ಒಬ್ಬ ದೂತನನ್ನು ನಿಮ್ಮ ಮುಂದೆ ಕಳುಹಿಸುತ್ತೇನೆ" ವಚನ23:"ಏಕೆಂದರೆ ನನ್ನ ದೂತನು ನಿಮ್ಮ ಮುಂದೆ ಹೋಗಿ ಅಮೋರಿಯರೂ **ಹಿತ್ತಿ**ಯರೂ ಪೆರಿಜೀಯರೂ ಕಾನಾನ್ಯರೂ ಹಿವ್ವಿಯರೂ ಯೆಬುಸಿಯರೂ ಇರುವ ದೇಶಕ್ಕೆ ನಿಮ್ಮನ್ನು ಬರಮಾಡುವವನು ಅವರನ್ನು ನಾನು ನಿರ್ಮೂಲ ಮಾಡುವೆನು ವಚನ27:" ನೀವು ಹೋಗುವ ಎಲ್ಲಾ ಜಾಗಗಳಲ್ಲೂ ನನ್ನಮೇಲಿನ ಬೀತಿಯನ್ನು ನಿಮ್ಮನ್ನು ಎದುರಿಸುವ ಜನರಲ್ಲಿ ಉಂಟುಮಾಡಿಸಿ ಅವರನ್ನೆಲ್ಲಾ ನಾಶಮಾಡುವೆನು ಮತ್ತು ನಿಮ್ಮನ್ನು ವಿರೋಧಿಸುವವರೆಲ್ಲಾ ನಿಮಗೆ ಬೆನ್ನು ತೋರಿಸುವಂತೆ ಮಾಡುವೆನು

ಮೊದಲನೆ ವಚನ ಓದಿ ಈ ಪಾಠವನ್ನು ಮುಗಿಸೋಣ

ಧರ್ಮೋಪದೇಶಕಾಂಡ2:20-23 "ಇದು ಸಹ ರಾಕ್ಷಸರ ದೇಶ ವೆನಿಸಿಕೊಂಡಿತು ರಾಕ್ಷಸರು ಮೊದಲು ಅದರಲ್ಲಿ ವಾಸಮಾಡಿದರು. ಅಮ್ಮೋನಿಯರು ಅವರಿಗೆ ಜಂಜುಮ್ಮರೆಂದು ಕರೆದರು. 21,ಅವರು ಅನಕ್ಯರು ಹಾಗೆ ದೊಡ್ಡವರೂ ಅನೇಕವಾದವರೂ ಎತ್ತರವಾದವರೂ ಆಗಿರುವ ಜನರು. ಆದರೆ ಯೆಹೋವನು ಅವರನ್ನು ಇವರ ಮುಂದೆ ನಾಶಮಾಡಿದ್ದರಿಂದ ಇವರು ಅವರನ್ನು ಹೊರಡಿಸಿ ಅವರ ಬದಲಾಗಿ ವಾಸಿಸಿದರು 22,ಯೆಹೋವನು ಸೇಯೀರಿನಲ್ಲಿ ವಾಸವಾಗಿರುವ ಏಸಾವನ ಮಕ್ಕಳಿಗೆ ಮಾಡಿದ ಹಾಗೆ ಆಯಿತು ಅವನು ಅವರ ಮುಂದೆ ಹೋರಿಯನ್ನು ನಾಶಮಾಡಿದಾಗ ಅವರು ಇವರನ್ನು ಹೊರಡಿಸಿ ಇವರ ಬದಲಾಗಿ ಇಂದಿನವರೆಗೂ ವಾಸಿಸಿದವರು. 23,ಹಾಗೆ ಗಾಜದ ಪರ್ಯಂತರ ವಾಸವಾಗಿದ್ದ ಅವ್ವಿಯರನ್ನು ಕಫ್ತರಿಯರಿಂದ ಹೊರಟ ಕಫ್ತೊರ್ಯರು ನಾಸಮಾಡಿ ಅವರ ಬದಲಾಗಿ ವಾಸಿಸಿದರು. ದೇವರ ಕೈ ಬೇರೆ ದೇಶದ ನಿವಾಸಿಗಳ

ಮೇಲೆ ಹೇಗೆ **ತೀರ್ಪು** ಮಾಡಿತು ನೋಡಿ. ಆದರೆ ಹಾಗಿದ್ದ ಜಂಜುಮ್ಯರ ಧೈತ್ಯಕಾರದ ಮನುಷ್ಯರಾಗಿದ್ದರು. ಆದರೆ ದೇವರು ಅಮೊನ್ಯರ ಮುಲಕ ಅವರನ್ನು **ನಾಶಮಾಡಿ** ಅವರ ದೇಶವನ್ನು ಅಮೋನ್ಯರಿಗೆ ಕೊಟ್ಟರು.

ಏಸಾವನ ಮಕ್ಕಳು ಹೋರಿಯರನ್ನು ನಾಶಮಾಡಿ ಅವರ ದೇಶವನ್ನು ಆಕ್ರಮಿಸಿದರು. ಕಫ್ತೋರಿಯರು ಅವ್ವಿಯರನ್ನು ನಾಶಮಾಡಿ ಅವರ ದೇಶವನ್ನು ತೆಗೆದುಕೊಂಡರು.

ದೇವರ ತೀರ್ಪನ್ನು ತ್ಪಿಸಿಕೊಳ್ಳುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಇಬ್ರಿಯರು 10:26-31,ವಚನವನ್ನು **ಧ್ಯಾನಿಸಿ** ನಿಮ್ಮ ಜೀವನದಲಿ ಉದ್ದೇಶಪೂರ್ವಕವಾಗಿ ಪದೇ ಪದೇ ಮಾಡುವ **ಕೆ**ಲವು ಪಾಪಗಳನ್ನು ಗುರುತಿಸಿ. ಆ ಪಾಪಗಳಿಗೇಲ್ಲ ಪಶ್ಚತ್ತಾಪ ಪಟ್ಟು ಈ ಕೆಳಗಿನ ವಚನವನ್ನು ಜ್ಞಾಪಕದಲ್ಲಿಟ್ಟುಕೊಳ್ಳಿ ಇಬ್ರಿಯರು 10:31 "ಜೀವವುಳ್ಳ ದೇವರ ಕೈಯಲ್ಲಿ ಬೀಳುವುದು ಭಯಂಕರವಾದದ್ದು."

## ದಿನ -6

## ಕದಲದೆ ನಿಂತು ದೇವರ ಕೈ ಮಾಡುವ ಕಾರ್ಯಗಳನ್ನು ನೋಡಿರಿ.

ವಿಮೋಚನಕಾಂಡ 14

ದೇವರು ಉದ್ದೇಶಪೂರ್ವಕವಾಗಿ ಇಸ್ರಾಯೆಲರನ್ನು ಈಜಿಪ್ಟಿನ ಬಲಿಷ್ಠ ಸೈನ್ಯದ ಮತ್ತು ಕೆಂಪುಸಮುದ್ರದ ಮದ್ಯೆ ಹಾಕಿಬಿಟ್ಟರು, ಅವರಿಗೊಂದು ಸ್ಪಷ್ಟ ಯೋಜನೆಯಿತ್ತು ಅದನ್ನವರು ಮೋಶೆಗೆ ಬಹಿರಂಗಪಡಿಸಿದರು (ವಚನ1-4) ಆದರೆ ಇಸ್ರಾಯೇಲರು ಈಜಿಪ್ಟಿನ ಬಲಿಷ್ಟ ಸೈನ್ಯ ತಮ್ಮ ಎದುರಾಗಿ ಬರುವುದು ಕಂಡರು ಮತ್ತು ತಾವು ಸೈನ್ಯದ ಹಾಗೂ ಕೆಂಪು ಸಮುದ್ರದ ನಡುವೆ ಸಿಕ್ಕಿಹಾಕಿಕೊಂಡಿರುವುದು ಕಂಡು, ಅವರ ನಿಜವಾದ ಬಣ್ಣ ಬಯಲಾಯಿತು. ಅವರು ಮೋಶೆಯ ಬಗ್ಗೆ ಮತ್ತು ದೇವರ ಬಗ್ಗೆ ದೋ**ಷಾ**ರೋಪಣೆ ಮಾಡಿ ಗೂಣಗುಟ್ಟಲು ಆರಂಬಿಸಿದರು

ವಚನ11-14 "ಅವರು ಮೋಶೆಗೆ, ಈ**ಜಿ**ಪ್ಟಿನಲ್ಲಿ ಸಮಾಧಿಗಳು ಇಲ್ಲದ ಕಾರಣ ನಾವು ಮರುಭೂಮಿಯಲ್ಲಿ ಸಾಯುವ ಹಾಗೆ ನಮ್ಮನ್ನು ಕರೆದುಕೊಂಡು ಬಂದೆಯೋ? ಏಕೆ ನೀನು ಈ ಪ್ರಕಾರ ನಮಗೆ ಮಾಡಿ ನಮ್ಮನ್ನು ಈ**ಜಿ**ಪ್ಟಿನಿಂದ ಏಕೆ ಕರೆದುಕೊಂಡು ಬಂದೆ? 12 ನಾವು ಈಜಿ**ಪ್ಟ್** ದೇಶದಲ್ಲಿದ್ದಾಗಲೇ, ನೀನು ನಮ್ಮ ಗೊಡವೆಗೆ ಬರಬೇಡ ನಾವು ಈಜಿಪ್ಟಿನವರಿಗೆ ಸೇವೆಮಾಡುವೆವು ಎಂದು ನಿನಗೆ ಹೇಳಲಿಲ್ಲವೇ? ನಾವು ಮರುಭೂಮಿಯಲ್ಲಿ ಸಾಯುವುದಕ್ಕಿಂತ ಈಜಿಪ್ಟಿನವರಿಗೆ ಸೇವೆಮಾಡುವುದೇ? ಒಳ್ಳೆಯದಾಗಿತ್ತಲ್ಲವೇ? ಎಂದು ಹೇಳಿದರು, 13, ಅದಕ್ಕೆ ಮೋಶೆಯು ಜನರಿಗೆ "ನೀವು ಭಯಾಪಡಬೇಡಿರಿ. ಕದಲದೆ ನಿಲ್ಲಿರಿ. ಯೆಹೋವನು ನಿಮಗೆ ಈ ಹೊತ್ತು ತೋರಿಸುವ ರಕ್ಷಣೆಯನ್ನು ನೋಡಿರಿ ಏಕೆಂದರೆ ನೀವು ಈ ಹೊತ್ತು ನೋಡುವ ಈಜಿಪ್ಟಿನವರನ್ನು



ಇನ್ನು ಮುಂದೆ ಎಂದೆಂದಿಗೂ ನೋಡುವುದಿಲ್ಲ 14,ಯೆಹೋವನು ನೀಮಗೋಸ್ಕರ ಯುದ್ಧಮಾಡುವನು ಆದರೆ ನೀವು ವಿಶ್ರಾಂತಿಯಿಂದಿರಿ" ಎಚಿದರು.

ನಾವು ಮೊದಲಿನಿಂದ ಕಲಿತ ಹಾಗೆ, ದೇವರು ಜನರಿಂದ **ನಿರೀಕ್ಷಿಸುವುದು** ಏನೆಂದರೆ, ನಾವು ಅವರಲ್ಲಿ ಪೂರ್ಣ ಭರವಸೆಯಿಡಬೇಕೆಂದು, ಆದರೆ ನಮ್ಮ ದುಷ್ಪ್ರೇರಣೆ ಏನೆಂದರೆ ಅವರಲ್ಲಿ ಸಂದೇಹಪಡುವುದು ನಾನು ದೇವರ ಮೇಲೆ ಮತ್ತು ಅವರ ಯೋಜನೆಗಳ ಮೇಲೆ ಸಂದೇಹದಿಂದ ನೋಡಿ ನನಗೆ ಏಕೆ? ಎಂದು ಪ್ರಶ್ನೆಗಳನ್ನು ಹಾಕುವಾಗ ನಾವು ಈಗಿರುವ ಸನ್ನಿವೇಶಗಳನ್ನ**ೇ** ನೋಡುತ್ತ**ವೇ** ವಿನ: ದೇವರು ಅವರ ಬಲಿಷ್ಠ ಕೈಗಳಿಂದ ನಮ್ಮನ್ನು ಎತ್ತಿಕೊಂಡು ನಮ್ಮ ಜೀವನದ ಒಂದೊಂದು ಘಟನೆಯನ್ನು **ತಾನಾಗಿ ನಿರ್ದೇಶಿಸಿ**, ಕೊನೆಗೆ ನಮ್ಮನ್ನು ಜಯಶಾಲಿಯನ್ನಾಗಿ ಮಾಡುತ್ತಾನೆ ಎಂಬುದನ್ನು ನೋಡುವುದಿಲ್ಲ.

ಸಂದೇಹಪಡುವ ಈ ಇಸ್ರಾಯೇಲರು, ಹಿಂದೆ ನೋಡಿ ದೇವರು ಅವರನ್ನು ರಕ್ಷಿಸುವುದಕ್ಕಿಂತ ಈಜಿಪ್ಟಿನವರ ಸೇವೆ ಮಾಡುವುದೇ ಮೇಲಾದುದು ಎಂದು ಹೇಳತೊಡಗಿದರು

ನಿಮ್ಮ ಜೀವನದಲ್ಲಿ ಯಾವತ್ತಾದರೂ, ಕ್ರೈಸ್ತರಾಗುವುದಕ್ಕೆಮುಂಚೆಯೇ ಜೀವನ ಚೆನ್ನಾಗಿತ್ತು ಎಂದೆನಿಸಿದೆಯೇ? ಹೌದಲ್ಲವೇ, ನಿಮಗೆ ಸಾಕಷ್ಟು ಸ್ವಾತಂತ್ರ್ಯವಿತ್ತು ಪಾಪ ಮಾಡುವುದಕ್ಕೆ ಸ್ವಾತಂತ್ರ್ಯವಿತ್ತು(ನಿನಗೆ ಏನಿಷ್ಟವೋ ಅದನ್ನೆಲ್ಲಾ ಮಾಡಿ ಅಥವಾ ಇಂದ್ರಿಯ ಭೋಗಗಳಲ್ಲಿ ನಿನ್ನನ್ನೆ ತೊಡಗಿಸಿಕೊಳ್ಳುತ್ತಿದ್ದೆ) ಹೌದು, ಕ್ರೈಸ್ತನಾಗಿ ನಾವು ನಮ್ಮ ಪ್ರಯಾಣ ಮಾಡುವಾಗ ಸಾಕಷ್ಟು ಪ್ರತಿಭಟನೆ ಎದುರಿಸಬೇಕಾಗುತ್ತದೆ, ಆದರೆ ದೇವರು ನಮಗೆ ವಾಗ್ದಾನ ಮಾಡಿದ ಗುರಿಯಿಂದ ನಮ್ಮ ಕಣ್ಣೋಟವನ್ನು **ತೆ**ಗೆಯಬಾರದು ಅವರು ಬಹಳ ನಂಬಲರ್ಹರಾದ ದೇವರು, ಮತ್ತು ಖಂಡಿತವಾಗಿ ತನ್ನ ತೋಳನ್ನು ಚಾಚಿ ಅವರು ವಾಗ್ದಾನ ಮಾಡಿದ ಸ್ಥಳಕ್ಕೆ ನಮ್ಮನ್ನು ರಕ್ಷಿಸಿ ಕರೆದು ಕೊಂಡು ಹೋಗುತ್ತಾರೆ, ಏಕೆಂದರೆ **ಅವರೊಬ್ಬ** ವಿಶ್ವಾಸಾರ್ಹ ದೇವರು.

ಮೋಶೆಯಲ್ಲಿ ಮತ್ತು ಅ ಜನರಲ್ಲಿ ಇದ್ದ ಮನೋಭಾವನೆಯಲ್ಲಿ **ವ್ಯತ್ಯಾಸ** ನೋಡಿರಿ ದೇವರು ತಮ್ಮ**ನ್ನೆ**ಲ್ಲಾ ಖಂಡಿತವಾಗಿ ರಕ್ಷಿಸಿ, ಎಲ್ಲಾ ತೊಡಕುಗಳಿಂದ ಪಾರು ಮಾಡಿ, ಎಷ್ಟೆ ದೊಡ್ಡ ತೊಡಕಾದರೂ ಸರಿ, ಎಂದು ಅವನು ದೇವರ ಶಕ್ತಿಯ ಮೇಲೆ ಪೂರ್ಣ ಭರವಸೆಯಿಟ್ಟಿದ್ದನು, ಜನರೆಲ್ಲಾ ಭಯದಿಂದ ತತ್ತರಿಸುತ್ತಿರುವಾಗ, ಅವನು ಮಾತ್ರ ಭಯಪಡದೆ ಕದಲದೆ ನಿಂತಿದ್ದನು ದೇವರ ಯೋಜನೆಯಲ್ಲಿ ವಿಶ್ವಾಸವಿಟ್ಟಿದ್ದನು

ಮೋಶೆ ಹೇಳಿದ ಮಾತನ್ನು ಗುರುತಿಸಿ ವಚನ 13, "ಅದಕ್ಕೆ ಮೋಶೆಯು ಜನರಿಗೆ, ನೀವು ಭಯಪಡಬೇಡಿರಿ ಕದಲದೆ **ನಿ**ಲ್ಲಿರಿ, ಯೆಹೋವನು ನಿಮಗೆ ಈ ಹೊತ್ತು ತೋರಿಸುವ ರಕ್ಷಣೆಯನ್ನು ನೋಡಿರಿ ಏಕೆಂದರೆ ನೀವು ಈ ಹೊತ್ತು ನೋಡುವ ಈಜಿಪ್ಟಿನವರನ್ನು ಇನ್ನು ಮುಂದೆ ಎಂದೆಂದಿಗೂ ನೋಡುವುದಿಲ್ಲ 14,ಯೆಹೋವನು ನಿಮಗೋಸ್ಕರ ಯುದ್ಧಮಾಡುವನು ಆದರೆ ನೀವು ವಿಶ್ರಾಂತಿಯಿಂದಿರಿ ಎಚಿದನು.

ನಿಮ್ಮ ಜೀವನದಲ್ಲಿ ಯಾವತ್ತಾದರೂ ತೊಡಕುಗಳು ಎದುರಾದಾಗ ನಿಮಗೆ ಬರುವ ಪ್ರಶ್ನೆ "

ಈಗ ನಾನೇನು ಮಾಡಲಿ" ಎಂದು ಈ ಪ್ರಶ್ನೆಗೆ ಇಲ್ಲಿ ಏನು ಉತ್ತರವಿದೆ? ಜನರಿಗೆ **ಮೋಶೆ** ಕೊಟ್ಟ ಉತ್ತರ ತುಂಬಾ ಅರ್ಥಗರ್ಭಿತವಾಗಿತ್ತು "ಕದಲದೆ ನಿಲ್ಲಿರಿ, ಯೆಹೋವನು ಈ ಹೊತ್ತು ತೋರಿಸುವ ರಕ್ಷಣೆಯನ್ನು ನೋಡಿರಿ

ವಚನ 14ರ ಬೇರೆ ಬೇರೆ ಬಾಷಾಂತರಗಳನ್ನು ನೋಡೋಣ:

1. "ದೇವರು ನಿಮಗೋಸ್ಕರ ಯುದ್ಧಮಾಡುವನು. ನೀವು ಕೇವಲ ಅಲುಗಾಡದೆ ಸ್ತಬ್ಧವಾರಬೇಕು

2. "ದೇವರು ಅವನಾಗಿಯೇ ನಿಮಗೋಸ್ಕರ ಯುದ್ಧಮಾಡುವನು ನೀವು ಸಂಪೂರ್ಣವಾಗಿ ನಿಶ್ಚಲರಾಗಿರಬೇಕು

3. "ದೇವರು ನಿಮಗೋಸ್ಕರ ಯುದ್ಧಮಾಡುವನು ನೀವು ಮಾತ್ರ ನಿಶಬ್ಧವಾಗಿರಬೇಕು"

4. "ನೀವು ನಿಶಬ್ಧವಾಗಿ ಅಲುಗಾಡದೆ ನಿಂತಿರುವಾಗ ದೇವರು ನಿಮಗೋಸ್ಕರ ಯುದ್ಧಮಾಡುವನು"

ಮೊದಲನೇ ಭಾಷಾಂತರ "ಕದಲದೆ ನಿಲ್ಲಿರಿ" ಎಂದರೆ ಆದರರ್ಥ ಒಂದು ವಿಗ್ರಹದಂತೆ ಕದಲದೆ ನಿಂತಿರು" ಎಂದಲ್ಲ, ಆದರೆ ಅದರ ನಿಜವಾದ ಅರ್ಥ "ನಿಮ್ಮ ನಾಲಗೆಯ**ನ್ನು** ಅಲುಗಾಡಿಸಬೇಡಿ" ಅಥವಾ "ನಿಶಬ್ಧವಾಗಿರಿ" ಎಚಿದು.

ಅವರು **ಅವರ** ನಾಲಗೆಯಿಂದ ಏನು ಮಾಡುತ್ತಿದ್ದರು? ದೇವದೂಷಣೆ, ಗೊಣಗುಟ್ಟುವುದು, ಮತ್ತು ದೇವರಿಗೆ ಹಾಗೂ ಮೋಶೆಗೆ ವಿರೋಧವಾಗಿ ಸಂದೇಹ ಮತ್ತು ಅಸಮಧಾನವನ್ನು ವ್ಯಕ್ತಮಾಡುತ್ತಿದ್ದರು. ಯೇಸು ಹೇಳಿದ್ದು" ಹೃದಯದ ಸಮೃದ್ಧಿಯಿಂದ ಅವನ ಬಾಯಿ ಮಾತನಾಡುತ್ತದೆ"(ಲೂಕ6:45) ಯೇಶಯ 43:6-7"ನಾನು ಒಪ್ಪಸಿಬಿಡು ಎಂದು ಬಡಗಲಿಗೂ ತ**ಡೆ**ಯಬೇಡ, ಎಂದು ತೆಂಕಲಿಗೂ ಹೇಳಿ ದೂರದಲ್ಲಿರುವ ನನ್ನ ಪುತ್ರರನ್ನೂ ದಿಗಂತಗಳಲ್ಲಿರುವ ನನ್ನ ಪುತ್ರಿಯರನ್ನೂ ನನ್ನ ಹೆಸರಿನಿಂದ ಕರೆಯಲ್ಪಟ್ಟ ಪ್ರತಿಯೊಬ್ಬನನ್ನೂ ಬರಮಾಡುವೆನು ಏಕೆಂದರೆ ಅವರನ್ನು ನನ್ನ ಮಹಿಮೆಗಾಗಿ ಸೃಷ್ಟಿಸಿದ್ದೇನೆ ನಾನು ಅವರನ್ನು ನಿರ್ಮಿಸಿದ್ದೇನೆ ಹೌದು ನಾನವರನ್ನು ಉಂಟುಮಾಡಿದ್ದೇನೆ(ಲೂಕ 6:45) ಅವರ ಬಾಯಿಯ ಮಾತುಗಳು ಅವರಿಗೆ ದೇವರಲ್ಲಿ ಭರವಸೆಯಿಲ್ಲವೆಂಬುದನ್ನು ವ್ಯಕ್ತಪಡಿಸುತ್ತಿದ್ದುವು.

ಹಾಗಾದರೆ ಮೋಶೆಯ ಮತ್ತು ದೇವರ ಅಪೇಕ್ಷೆ ಅವರೇನು ಮಾಡಬೇಕು ಎಂದಾಗಿತ್ತು? ನಿಶಬ್ಧವಾಗಿರಿ (ದೇವರಲ್ಲಿ ಭರವಸೆಯಿಟ್ಟು ಅವರ ಬಲಿಷ್ಠ ಕೈಗಳಿಂದ ತಮ್ಮನ್ನು ರಕ್ಷಿಸಲು ಸಾಧ್ಯ ಎಂಬುದನ್ನು ನಂಬಲು) ದೇವರು ಕೊಡುವ ರಕ್ಷಣೆಯನ್ನು ನೋಡಿರಿ (ದೇವರು ಯಾವ ರೀತಿಯಲ್ಲಿ ನಿಮ್ಮನ್ನು ರಕ್ಷಸುತ್ತಾರೆ ಎಂಬುದನ್ನು ಕಾದು ನೋಡಿರಿ)

ಆ ನಂತರ ಏನಾಯಿತು?



ದೇವರು ಮಾಡಿದ ಅದ್ಭುತಗಳಲ್ಲೇ ತುಂಬಾ ವಿಸ್ಮಯಕಾರಿಯಾದ ಅದ್ಭುತ ಮತ್ತು ಕೌತುಕವನ್ನುಂಟುಮಾಡುವ ಘಟನೆಗಳು **ನಡೆದವು**

ವಿಮೋಚನಕಾಂಡ 14:15-16 "ಆಗ ಯೆಹೋವನು ಮೋಶೆಗೆ "ನೀನು ನನಗೆ ಏಕೆ ಕೂಗುತ್ತಿ" ಇಸ್ರಾಯೇಲರು ಮುಂದಕ್ಕೆ ಹೋಗಬೇಕೆಂದು ಹೇಳು 16,ನೀನು ಕೋಲನ್ನು ಎತ್ತಿ ನಿನ್ನ ಕೈಯನ್ನು ಸಮುದ್ರದ ಮೇಲೆ ಚಾಚಿ ಅದನ್ನು ವಿಭಾಗಿಸು. ಆಗ ಇಸ್ರಾಯೇಲ್ಯರು ಸಮುದ್ರದ ಮಧ್ಯದಲ್ಲಾದ ಒಣನೆಲದ ಮೇಲೆ ಹೋಗುವರು" ದೇವರು ಮೋಶೆಯನ್ನು ಸಹ ಸಮಾಧಾನದಿಂದಿದ್ದು ಇಸ್ರಾಯೇಲರನ್ನು ಮುಂದೆ ನಡೆಸಬೇಕೆಂದು **ಅಪೇಕ್ಷಿ**ಸಿದರು. ನಿಮ್ಮ ಕಣ್ಣಿಗೆ ಮುಂದಿನ ದಾರಿ ಕಾಣಿಸದಿದ್ದರು ಸಹ ಮುಂದೆ ನಡೆಯಿರಿ ಅದೇ ನಂಬಿಕೆಯ ನಡೆ. ನಾವು ಆ ರೀತಿಯ ನಂಬಿಕೆಯಿಂದ ನಡೆಯುವಾಗ. ದೇವರು ನಾವು ಈಗ ನೋಡದ ದಾರಿಗಳನ್ನು ನಮಗಾಗಿ ತೆರೆಯುತ್ತಾರೆ. ಅದುವೇ ದೇವರ ವಿಸ್ಮಯ

ವಚನ 19:22 ಆಗ ಇಸ್ರಾಯೇಲ್ ದಂಡಿನ ಮುಂದೆ ಹೋಗುತ್ತಿದ್ದ ದೇವದೂತನು ತನ್ನ ಸ್ಥಳವನ್ನು ಬಿಟ್ಟು ಅವರ ಹಿಂದೆ ಬಂದನು.ಅವರ ಮುಂದೆ ಇದ್ದ ಮೇಘಸ್ಥಂಭವು ಅಲ್ಲಿಂದ ಬಂದು ಅವರ ಹಿಂದೆ ನಿಂತುಕೊಂಡಿತು 20,ಅದು ಈಜಿಪ್ಟಿನ ದಂಡಿಗೂ ಇಸ್ರಾಯೇಲರ ದಂಡಿಗೂ ನಡುವೆ ಬಂದಿತು. ಅದು ಈಜಿಪ್ಟಿನವರಿಗೆ **ಕತ್ತುಲೂ** ಇಸ್ರಾಯೇಲರಿಗೆ ರಾತ್ರಿಯೇಲ್ಲಾ ಬೆಳಕು ಕೊಡುವಂಥಾದ್ದು ಆಗಿದ್ದರಿಂದ ಆ ರಾತ್ರಿಯಲ್ಲಾ ಒಬ್ಬರ ಹತ್ತಿರ ಒಬ್ಬರು ಬರಲಾಗಲಿಲ್ಲ 21,ಆಗ ಮೋಶೆಯು ಸಮುದ್ರದ ಮೇಲೆ ತನ್ನ ಬಲಗೈಯನ್ನು ಚಾಚಲಾಗಿ ಯೆಹೋವನು ರಾತ್ರಿಯೆಲ್ಲಾ ಬಲವಾದ ಮೂಡಣ ಗಾಳಿಯಿಂದ ಸಮುದ್ರವನ್ನು ಹಿಂದಕ್ಕೆ ಹೋಗುವಂತೆ **ಸಮುದ್ರವನ್ನು** ಸರಿಸಿ, ಒಣನೆಲ ಕಾಣಿಸುವಂತೆ ಮಾಡಿದನು. ಆಗ ನೀರು ವಿಭಾಗವಾಯಿತ್ತು. 22,ಹೀಗೆ ಇಸ್ರಾ**ಯೇ**ಲ್ಲರು ಸಮುದ್ರದ ಮಧ್ಯ ದಲ್ಲಿ ಒಣಗಿದ ನೆಲದ ಮೇಲೆ ಹೊರಟ್ಟು ಹೋದರು. **ನೀರು** ಅವರಿಗೆ ಎಡಬಲದಲ್ಲಿ ಗೋಡೆಯಾಗಿತ್ತು

ಮೊದಲು ಅವರ ಮುಂದೆ ಹೋಗುತ್ತಿದ್ದ ದೇವದೂತನನ್ನು ಅವರ ಹಿಂದೆ ಕಳುಹಿಸಿ ಈಜಿಪ್ಟಿನವರಿಂದ ಇಸ್ರಾಯೇಲರು ಹಾನಿಗೊಳಗಾಗದಂತೆ

ಕಾಪಾಡಿದರು. ಹಾಗೆಯೇ ರಾತ್ರಿ**ಯೆಲ್ಲಾ** ಮೇಘಸ್ಥಂಭ ಒಂದು ಕಡೆ ಕಾರ್ಗತ್ತಲು ಮತ್ತೊಂದು ಕಡೆ ಬೆಳಕನ್ನು ಉಂಟುಮಾಡಿತ್ತು ದೇವರು ಒಂದು ಬಲವಾದ ಮೂಡಣಗಾಳಿಯನ್ನು ಕಳಿಸಿ ಸಮುದ್ರವನ್ನು ವಿಭಾಗಿಸುವುದು ಮಾತ್ರವಲ್ಲದೆ, ಆ ಗಾಳಿಯ ರಭಸಕ್ಕೆ ಕೆಸರು ಕೊಚ್ಚೆಯಿಂದ ಒದ್ದೆಯಾಗಿದ್ದ ಸಮುದ್ರದ ನೆಲ ಸಂಪೂರ್ಣವಾಗಿ ಒಣಗಿಹೋಯಿತು ಅದರ ಮುಲಕ **ಇಸ್ರಾಯೇಲರು** ಹಾದುಹೋಗಲು ಸಾಧ್ಯವಾಯಿತು.

ಈ **ಭಾಗದಿಂದ** ನೀವೇನು ಕಲಿತಿರಿ? ತೊಡಕುಗಳನ್ನು ಎದುರಿಸುತ್ತಿರುವಾಗ ನಿಮ್ಮ **ಪ್ರತಿಕ್ರಿಯೆ**ಗಳೇನು? ನಿಮ್ಮ ಜೀವನದಲ್ಲಿ ನಿಮಗಿರುವ ದೊಡ್ಡ ತೊಡಕುಗಳೇನು? ಮತ್ತು ದೇವರು ಅದರಿಂದೆಲ್ಲಾ ಹೇಗೆ ಬಿಡುಗಡೆಮಾಡಿದರೆಂಬುದನ್ನು ಬರೆಯಿರಿ. **ಬೇರೆ**ಯವರನ್ನು ಸಹ ದೇವರು ಹೇಗೆ ರಕ್ಷಿಸಿದರೆಂದು **ಬರೆಯಿರಿ ತೊಡಕುಗಳನ್ನು** ಎದುರಿಸುವಾಗ ನಿಮ್ಮ ನಾಲಗೆಯಿಂದ ಏನು ಮಾಡುತ್ತೀರಿ? ಇನ್ನು ಮುಂದೆ ಏನು ಮಾಡಬೇಕೆಂದು ಇದರಿಂದ ಕಲಿತಿರಿ?

## ದಿನ -7

### ದೇವರ ಕೈ ಅತ್ಯುತ್ತಮವಾದುದನ್ನೇ ಅನುಗ್ರಹಿಸುತ್ತದೆ.

ಧರ್ಮೋಪದೇಶಕಾಂಡ 11:10"ಏಕೆಂದರೆ ನೀವು **ಸ್ವಾ**ಧೀನ ಮಾಡಿ ಕೊಳ್ಳುವುದಕ್ಕೆ ಹೋಗುವ ದೇಶವು ನೀವು ಹೊರಟ ಈಜಿಪ್ಟ್‌ದೇಶದಹಾಗಲ್ಲ. ಅಲ್ಲಿ ನೀವು ಬೀಜವನ್ನು ಬಿತ್ತಿ ಪಲ್ಯಗಳ ತೋಟವನ್ನು ಸಾಗುವಳಿ ಮಾಡುವ ರೀತಿಯಲ್ಲಿ ಏತವನ್ನು ತುಳಿದು ನೀರು ಅಟ್ಟುತ್ತಿದ್ದಿರಿ. 11,ಆದರೆ ನೀವು ಸ್ವಾಧೀನ ಮಾಡಿಕೊಳ್ಳುವುದಕ್ಕೆ ಹೋಗುವ ದೇಶವು ಬೆಟ್ಟಗಳೂ ಉಳ್ಳದೇಶವೇ ಆದು ಆಕಾಶದ ಮಳೆಯಿಂದ ನೀರು ಕುಡಿಯುತ್ತದೆ. 12,ಅದು ನಿಮ್ಮ ದೇವರಾದ ಯೆಹೋವನು ಪರಾಮರಿಸುವ ದೇಶವೇ, ವರ್ಷದ ಆರಂಭದಿಂದ ವರ್ಷದ ಅಂತ್ಯದವರೆಗೂ ಯಾವಾಗಲೂ ನಿಮ್ಮ ದೇವರಾದ ಯೆಹೋವನು ಕಣ್ಣುಗ**ಳು** ಅದರ ಮೇಲೆ ಇವೆ. 13,ಹಾಗಾದರೆ ನಾನು ಈ ಹೊತ್ತು ನಿಮಗೆ ಅಜ್ಞ ಸುವ ನನ್ನ **ಆಜ್ಞೆ**ಗಳನ್ನು ನೀವು ಲಕ್ಷ್ಯಕೊಟ್ಟು ಕೇಳಿ. ನಿಮ್ಮ ಪೂರ್ಣ ಹೃದಯದಿಂದಲೂ, ನಿಮ್ಮ ಪೂರ್ಣ ಪ್ರಾಣದಿಂದಲೂ ಆತನಿಗೆ ಸೇವೆ ಮಾಡಿದರೆ 14,ನೀವು ನಿಮ್ಮ ಧಾನ್ಯವನ್ನು ದ್ರಾಕ್ಷಾರಸವನ್ನೂ ಎಣ್ಣೆಯನ್ನೂ ಕೂಡಿಸುವ ಹಾಗೆ ನಿಮ್ಮ ಭೂಮಿಗೆ ಅದರ ತಕ್ಕ ಕಾಲದಲ್ಲಿ ಮಳೆಯನ್ನೂ ಮುಂಗಾರು ಹಿಂಗಾರುಗಳನ್ನೂ ಕೊಡುವೆನು. 15,ನಿನ್ನ ಪಶುಗಳಿಗೆ **ಹುಲ್ಲನ್ನು ನಿನ್ನ ಹೊಲದಲ್ಲಿ ಕೊಡುವೆನು ನೀನು** ತಿಂದು ತೃ_ಯಾಗುವಿ. 16,ನಿನ್ನ ಹೃದಯವು ಮರುಳುಗೊಳ್ಳದ ಹಾಗೆಯೂ ನೀವು ಓರೆ ಹೋಗಿ ಬೇರೆ ದೇವರುಗಳನ್ನು ಆರಾಧಿಸಿ ಅಡ್ಡಬೀಳದ ಹಾಗೆಯೂ 17,ಯೆಹೋವನ ಕೋಪವು ನಿಮ್ಮ ಮೇಲೆ ಉರಿಯಲು ಆತನು ಮಳೆಯಾಗದಂತೆ ಮಾಡಿ ಭೂಮಿಯು ತನ್ನ ಬೆಳೆಯನ್ನು ಕೊಡದಂತೆ ಆಕಾಶವನ್ನು ಮುಚ್ಚಿ ಬಿಡದ ಹಾಗೆಯೂ ಯೆಹೋವನು ನಮಗೆ ಕೊಡುವ ಆ ಒಳ್ಳೆಯ ದೇಶದಲ್ಲಿ ನೀವು ಬೇಗ ನಾಶವಾಗದ ಹಾಗೆಯೂ ಎಚ್ಚರಿಕೆ ತಂದುಕೊಳ್ಳಿರಿ. 18,ಆ ನನ್ನ ವಾಕ್ಯಗಳನ್ನು ನಿಮ್ಮ ಹೃದಯದಲ್ಲಿಯೂ ಪ್ರಾಣಗಳಲಿಯೂ ಇಟ್ಟುಕೊ**ಳ್ಳಿರಿ**. ಅವುಗಳನ್ನು ಗುರುತಾಗಿ ನಿಮ್ಮ ಕೈಗಳಿಗೆ ಕಟ್ಟಿಕೊಳ್ಳಿರಿ. ಅವು ನಿಮ್ಮ ಕಣ್ಣುಗಳ ನಡುವೆ ಹಣೆ ಕಟ್ಟಾಗಿರಲಿ. 19,ನಿಮ್ಮ ಮನೆಯಲ್ಲಿ **ಕೂ**ತಿರುವಾಗಲೂ ಮಾರ್ಗದಲ್ಲಿ ನಡೆಯುವಾಗಲೂ ಮಲಗುವಾಗಲೂ ಏಳುವಾಗಲೂ ಅವುಗಳ ವಿಷಯ ಮಾತನಾಡಿ ಅವುಗಳನ್ನು ನಿಮ್ಮ ಮಕ್ಕಳಿಗೆ ಕಲಿಸಬೇಕು 20,ನಿಮ್ಮ ಮನೆಯ ಕಂಬಗಳ ಮೇಲೆಯೂ ನಿಮ್ಮ ಬಾಗಿಲುಗಳಲ್ಲಿಯೂ ಅವುಗಳನ್ನು ಬರೆಯಬೇಕು. 21,ಹೀಗಾದರೆ ನಿಮ್ಮ ದಿವಸಗಳೂ ನಿಮ್ಮ ಮಕ್ಕಳ ದಿವಸಗಳೂ ಭೂಮಿಯಲ್ಲಿ ಆಕಾಶದ ದಿವಸಗಳ ಪ್ರಕಾರ ಯೆಹೋವನ ನಿಮ್ಮ ತೃಗಳಿಗೆ ಕೊಡುತ್ತೇನೆಂದ ಪ್ರಮಾಣಮಾಡಿದ ದೇಶದಲ್ಲಿ ಹೆಚ್ಚುವವು.

**ಕೆಂಪು** ಸಮುದ್ರದ ಬಳಿಯಲ್ಲಿರುವಾಗ ಹೇಗೆ ಈ ನಂಬಿಕೆಯಿಲ್ಲದ ಇಸ್ರಾಯೇಲರು ದೊಷಣೆ ಮಾಡುತ್ತಾ ಈಜ್ಪಿನಲ್ಲಿದ್ದಿದ್ದರೆ ಎಷ್ಟೋ ಮೇಲಾಗಿತ್ತು ಎಂದು **ಹೇಳಿದ್ದು** ಜ್ಞಾಪಕವಿದೆಯೇ?

ಬಹುಶ: ಅವರು **ನೋಡಿ**ದ ದೇಶಗಳಲ್ಲೆಲ್ಲಾ ಈಜಿಪ್ಟ್ ಒಂದು ಉತ್ತಮ ದೇಶವಾಗಿ ಅವರಿಗೆ ತೋರಿರಬಹುದು. ಆದರೆ, ದೇವರು ನಾನು ನಿಮಗಾಗಿ ನನ್ನ ಬಲಿಷ್ಟವಾದ ಕೈಗಳಿಂದ



ಸಿದ್ಧಪಡಿಸಿದ ದೇಶ, ನಿಮಗೆ ಬಹುಮಾನವಾಗಿ ಕೊಡುತ್ತಿರುವ ದೇಶ, ನೀವು ಕಲ್ಪನೆ ಮಾಡಲೂ ಅಸಾಧ್ಯವಾದುದನ್ನು, ಅತ್ಯುತ್ತಮವಾದುದನ್ನು ನಿಮಗೆ ಕೊಡುತ್ತಿದ್ದೇನೆ ಎಂದು ಹೇಳುತ್ತಿದ್ದಾರೆ.

ದೇವರು ಎರಡು ದೇಶಗಳನ್ನು ಹೋಲಿಕೆ ಮಾಡುತ್ತಿದ್ದಾರ, ವಚನ 10-14,ಏಕೆಂದರೆ ನೀವು ಸ್ವಾಧೀನ ಮಾಡಿಕೊಳ್ಳುವುದಕ್ಕೆ ಹೋಗುವ ದೇಶವು ನೀವು ಹೊರಟ ಈಜಿಪ್ಟ್‌ದೇಶದ ಹಾಗಲ್ಲ ಅಲ್ಲಿ ನೀವು ಬೀಜವನ್ನು ಬಿತ್ತಿ ಫಲ್ಯಗಳ ತೋಟವನ್ನು ಸಾಗುವಳಿ ಮಾಡುವ ರೀತಿಯಲ್ಲಿ ಏತವನ್ನು ತುಳಿದು ನೀರು ಕಟ್ಟಿದಿರಿ, 11,ಆದರೆ ನೀವು ಸ್ವಾಧೀನ ಮಾಡಿಕೊಳ್ಳುವುದಕ್ಕೆ ಹೋಗುವ ದೇಶವು ಬೆಟ್ಟಗಳೂ ತಗ್ಗುಗಳೂ ಉಳ್ಳ ದೇಶವೇ ಅದು ಆಕಾಶದ ಮಳೆಯಿಂದ ನೀರು ಕುಡಿಯುತ್ತದೆ. 12,ಅದು ನಿಮ್ಮ ದೇವರಾದ ಯೆಹೋವನು ಪರಾಮರಿಸುವ ದೇಶವೇ, ವರ್ಷದ ಆರಂಭದಿಂದ ವರ್ಷದ ಅಂತ್ಯದವರೆಗೂ ಯಾವಾಗಲೂ ನಿಮ್ಮ ದೇವರಾದ ಯೆಹೋವನ ಕಣ್ಣುಗಳ ಅದರ ಮೇಲೆ ಇವೆ. 13,ಹಾಗಾದರೆ ನಾನು ಈ ಹೊತ್ತು ನಿಮಗೆ ಅಜ್ಞಾ ಸುವ ನನ್ನ ಅಜ್ಞೆಗಳನ್ನು ನೀವು ಲಕ್ಷ್ಯಕೊಟ್ಟುಕೇಳಿ, ನಿಮ್ಮ ಪೂರ್ಣ ಹೃದಯದಿಂದಲೂ, ನಿಮ್ಮ ಪೂರ್ಣ ಪ್ರಾಣದಿಂದಲೂ ಆತನಿಗೆ ಸೇವೆಮಾಡಿದರೆ, 14,ನೀವು ನಿಮ್ಮ ಧಾನ್ಯವನ್ನೂ ದ್ರಾಕ್ಷರಸವನ್ನೂ ಎಣ್ಣೆಯನ್ನೂ ಕೂಡಿಸುವ ಹಾಗೆ **ನಿಮ್ಮ** ಭೂಮಿಗೆ ಅದರ ತಕ್ಕ ಕಾಲದಲ್ಲಿ ಮಳೆಯನ್ನೂ ಮುಂಗಾರು ಹಿಂಗಾರುಗಳನ್ನೂ ಕೊಡುವೆನು

ದೇವರ ಒಂದೇ ಒಂದು ಅಪೇಕ್ಷೆ ಏನಾಗಿತ್ತೆಂದರೆ, ಜನರು ಪೂರ್ಣ ಹೃದಯದಿಂದ ಅವರನ್ನು _ತಿಸಿ, ಅವರು ಕೊಟ್ಟ ಆಜ್ಞೆಗಳನ್ನು ಲಕ್ಷ್ಯಕೊಟ್ಟುಪಾಲಿಸಬೇಕೆಂಬುದಾಗಿತ್ತು. ಆಗ ಭೂಮಿಗೆ ತಕ್ಕ ಕಾಲಕ್ಕೆ ಮಳೆ, ಹಿಂಗಾರು ಮುಂಗಾರುಗಳನ್ನು **ಕೊ**ಡುವುದಾಗಿ ಹೇಳಿದನು. ಆಗ ಅವರು ಧಾನ್ಯ, ದ್ರಾಕ್ಷಾರಸ ಮತ್ತು ಎಣ್ಣೆಯನ್ನು ಕೂಡಿಸಬಹುದಾಗಿ**ತ್ತು**, ಅದು ಒಂದು ವಾಗ್ದಾನ ಮತ್ತು ಜನರು ಎಷ್ಟುಕಾಲ ದೇವರನ್ನು _ತಿಸಿದರೋ ಆಗೆಲ್ಲಾ ದೇವರು ತನ್ನ ಮಾತನ್ನು ಮುರಿಯಲಿಲ್ಲ. ನೀವು ದೇವರ ವಾಗ್ದಾನಗಳಿಗೆ ಲಕ್ಷ್ಯಕೋಡುತ್ತಿರೋ? ಅವರ ಬಲಿಷ್ಠ ಕೈಗಳಿಂದ ನಮಗೆ ವಾಗ್ದಾನ ಮಾಡಿದುದನ್ನೆಲ್ಲಾ ಅನುಗ್ರಹಿಸಲು ಸಾಧ್ಯ ಎಂದು ನಂಬುತ್ತಿರೋ? ಅಥವಾ ನಿಮಗೆ ಅವರಲ್ಲಿ ಸಂದೇಹವಿದೆಯೇ? ನಾವು ದೇವರಲ್ಲಿ ಭರವಸೆಯಿಟ್ಟಾಗ ತುಂಬಾ ಸಂತೋಷವಾಗಿಯೂ ಆತ್ಮವಿಶ್ವಾಸವುಳ್ಳವರಾಗಿಯೂ ಇರುತ್ತೇವೆ, ಆದರೆ ದೇವರ ಶಕ್ತಿಯಲ್ಲಿ, ಅವರು ತಮ್ಮ ವಾಗ್ದಾನಗಳನ್ನು ನೆರವೇರಿಸುತ್ತಾರೆ ಎಂಬ ಭರವಸೆಯಿಲ್ಲದಿದ್ದರೆ ನಾವು ಅಧೈರ್ಯಪಟ್ಟು ಚಿಂತಾಕ್ರಾಂತರಾಗುತ್ತೇವೆ, ಇಸ್ರಾಯೇಲ್ಯರು ದೇವರು ನೆರವೇರಿಸಿದ **ವಾಗ್ದಾನಗಳನ್ನು** ಕಣ್ಣಿಂದ ನೋಡಿದರೂ ಭಹಳ ಫಲವತ್ತಾದ, ಉತ್ತಮ್ಮ ದೇಶದಲ್ಲಿ ವಾಸಿಸುವ ಅವಕಾಶ ಸಿಕ್ಕಿದರೂ, ಒಳ್ಳೆಯ **ಬೆಳೆ ನಿರಾರರಿಸಿಬಿಟ್ಟರು** ಬೆಳೆದರೂ ದೇವರನ್ನು ಬಹಳ ಬೇಗ ನಿಆರಿರಿಸಿಬಿಟ್ಟರು.

ಆದ್ದರಿಂದ ದೇವರು ಪ್ರಮಾಣಮಾಡಿದ ಹಾಗೆ ಆಕಾಶಗಳು ಮುಚ್ಚಿಹೋಗಿ ಮಳೆಯಿಲ್ಲದೆ ಭೂಮಿ ಬರಡಾಯಿತು, ಮತ್ತು ದೇವರಲ್ಲಿ ಭರವಸೆಯಿಡದ ಜನರು ತುಂಬಾ ಕಠಿಣ ಬರವನ್ನು ಅನುಭವಿಸಿದರು (1ಅರಸು 18ರಲ್ಲಿ ಇಂಥಾ ಒಂದು ಸನ್ನಿವೇಶವಿದೆ)

ದೇವರು ನಮಗೆ ಇಂದು ವಾಗ್ದಾನ ಮಾಡಿರು**ವುದು** ಕೇವಲ ಒಂದು ತುಂಡು ನೆಲವಲ್ಲ ಆದರೆ ಪರಲೋದಕಲ್ಲಿ ನಮಗೆ ನಿತ್ಯ ಜೀವನವನ್ನು ಕೊಡುವುದಾಗಿ ಹೇಳಿದ್ದಾರೆ ದೇವರ ತಮ್ಮ ಮಾತನ್ನು ನೆರವೇರಿಸುವರೆಂದು ನಂಬಿರುವೆಯಾ? ನಾವು ಭೂಲೋಕದಲ್ಲಿ ವಾಸಿಸುವಾಗ ಸಹ ನಾವು ಅವರಲ್ಲಿ

ಭರವಸೆಯಿಟ್ಟು ಅವರನ್ನು ್ರೀತಿಸಿದರೆ ನಮ್ಮೆಲ್ಲಾ ಅಗತ್ಯಗಳನ್ನು ಅವರು ಖಂಡಿತ ಪೊರೈಸುತ್ತಾರೆ.

ತನ್ನ ಜನರು ಬೇರೆ ದೇವರುಗಳ ಆಕರ್ಶಣೆಗೆ ಒಳಗಾಗಿ, ಆ ದೇವರುಗಳನ್ನು ಆರಾಧಿಸಬಾರದು ಎಂದು ದೇವರ ನಿರೀಕ್ಷೆಯಾಗಿತ್ತು, ಅದೇ ನಿರೀಕ್ಷೆ ದೇವರಿಗೆ ನಮ್ಮಲ್ಲಿಯೂ ಇದೆ. ನೀವು ಆರಾಧಿಸುವುದು ಯಾರನ್ನು? ಪರಲೋಕದಲ್ಲಿರುವ ದೇವರನ್ನೇ ಅಥವಾ ಈ ಲೋಕದ ಭೋಗಗಳನ್ನು ಮತ್ತು ಥಳಥಳಿಸುವ ಈ ಲೋಕದ ವೈಭವಗಳನ್ನೇ?

ನಾವು ದೇವರನ್ನು ಸೇವಿಸುವುದಕ್ಕಿಂತ, ಹೆಚ್ಚು ಹಣ ಮಾಡುವುದಕ್ಕೆ ನಮ್ಮೆಲ್ಲಾ ಸಮಯವನ್ನು ಕೊಡುತ್ತಿದ್ದರೆ, ನಾವು ಈಗಾಗಲೇ ವಿಗ್ರಹಾರಾಧನೆಗೆ ಒಳಗಾಗಿದ್ದೇವೆ, ಸಭೆಯಲ್ಲಿದ್ದರೂ ಸಹ.

ಯೊಕೋಬ 4:4 "ವ್ಯಭಚಾರಿಗಳೇ ಇಹಲೋಕ ಸ್ನೇಹವು ದೇವವೈರವೆಂದು ನಿಮಗೆ ತಿಳಿಯದೋ? ಲೋಕಕ್ಕೆ ಸ್ನೇಹಿತನಾಗಿರಬೇಕೆಂದಿರುವವನು ದೇವರಿಗೆ ವೈರಿಯಾಗಿದ್ದಾನೆ

ನಾವು ಕ್ರೈಸ್ತರು ಎಂಬ ಹೇಳಿಕೊಳ್ಳುವ ಜನರನ್ನು ದೇವರು ವ್ಯಭಿಚಾರಿಗಳೇ ಎಂದು ಕರೆಯುತ್ತಾರೆ, ಏಕೆ? ಯೇಸು ಕ್ರಿಸ್ತರು ನಮ್ಮ ಮದುಮಗನು ಮತ್ತು ನಾವು ಅವರ ಮದುವಣಗಿತ್ತಿ ನಮ್ಮನ್ನು ನಿರಂತರವಾಗಿ ್ರೀತಿಸುವುದಾಗಿ ಅವನು ಮಾತುಕೊಟ್ಟು ಅದರ ಪ್ರಕಾರ ನಡೆಯುತ್ತಿದ್ದಾರೆ. ಆದರೆ ನಾವೋ ಬೇರೆಯವರ ಜೊತೆ ಚೆಕ್ಕಂದವಾಡುವುದು ಅದು ವ್ಯಭಿಚಾರವಲ್ಲ**ದೆ** ಮತ್ತೇನು? ನಾವು ಚೆಕ್ಕಂದವಾಡಿ, ನಿಷ್ಠೆಯಿಲ್ಲದೆ, ವ್ಯಭಿಚಾರಮಾಡುತ್ತಿರುವುದು ಹೇಗೆ? ಅದು ಇಹಲೋಕ ಸ್ನೇಹ. ಇಹಲೋಕವು ಸೈತಾನನಿಂದ ಆಳಲ್ಪಟ್ಟಿದೆ ಎಂದು ಯೇಸು ಹೇಳಿದರು. ನೀವು ಇಹಲೋಕಕ್ಕೆ ತುಂಬಾ ಆಕರ್ಶಿತರಾಗಿದ್ದಿರಾ?

(ಯೋಹಾನ 12:31,14:30,16"11) 2ಕೊರಿಂಥೆ 4:4 "ಈ ಯುಗದ ದೇವರು ಅವಿಶ್ವಾಸಿಗಳ ಹೃದಯವನ್ನು ಮಂಕುಮಾಡಿರುತ್ತಾನೆ ಅದ್ದರಿಂದ ದೇವರ ಸ್ವರೂಪದಲ್ಲಿರುವ ಕ್ರಿಸ್ತನ ಮಹಿಮಾ ಸುವಾರ್ತೆಯ ಪ್ರಕಾಶವನ್ನು ಅವರು ನೋಡಲಾರರು

ಹಳೆಯ ಒಡಂಬಡಿಕೆಯಲ್ಲಿ ವಿಗ್ರಹಾರಾಧಾನೆ ಯಾವಾಗಲೂ ವ್ಯಭಿಚಾರವೆಂದು ಕರೆಯಲ್ಪಟ್ಟಿದೆ ಮತ್ತು ಹೊಸ ಒಂಡಬಡಿಕೆಯಲ್ಲೂ ಸಹ ಅದನ್ನೆ ಸ್ಥಿರವಾಗಿ ನಂಬಲಾಗಿದೆ. ಇಹಲೋಕದೊಡನೆ ಸ್ನೇಹಬೆಳೆಸುವುದು, ಅದನ್ನು ಅತಿಯಾಗಿ ಒಲಿಯುದು ಮತ್ತು ಬಯಸುವುದು ದೇವವೈರವಾಗಿದೆ.



## ದಿನ -8

## ದೇವರ ಕೈ ಅವಿಶ್ವಾಸಿಗಳಲ್ಲಿ ಹೆದರಿಕೆ ಮೂಡಿಸುತ್ತದೆ.

ಧರ್ಮೋಪದೇಶಕಾಂಡ 11:25 "ಯಾವನೂ ನಿಮ್ಮ ಮುಂದೆ ನಿಲ್ಲಲಾರ ಏಕೆಂದರೆ ನಿಮ್ಮ ದೇವರಾದ ಯೆಹೋವನು ನಿಮಗೆ ಹೇಳಿದ ಹಾಗೆ ನಿಮ್ಮ ಹೆದರಿಕೆಯನ್ನೂ ದಿಗಿಲನ್ನೂ ನೀವು ಸಂಚಾರ ಮಾಡುವ ಸಮಸ್ತ ದೇಶದ ಮೇಲೆ ಇಡುವನು.

ಧರ್ಮೋಪದೇಶಕಾಂಡ:28:6-10

"ಬರುವಾಗ ನಿಮಗೆ ಆಶೀರ್ವಾದ ಹೊರಡುವಾಗ ನಿಮಗೆ ಆಶೀರ್ವಾದ. 7,ನಿಮಗೆ ವಿರೋಧವಾಗಿ ಏಳುವ ನಿಮ್ಮ ಶತ್ರುಗಳನ್ನು ಯೆಹೋವನು ನಿಮ್ಮ ಮುಂದೆ ಹೊಡೆದುಬಿಡುವನು. ಅವನು ಒಂದೇ ಮಾರ್ಗದಲ್ಲಿ ನಿಮಗೆ ವಿರೋಧವಾಗಿ ಹೊರಟು ಏಳು ಮಾರ್ಗಗಳಲ್ಲಿ ನಿಮ್ಮ ಮುಂದೆ ಓಡಿ ಹೋಗುವವನು. 8,ನಿಮ್ಮ ಕಣಜಗಳಲ್ಲಿಯೂ ನೀವು ಕೈಹಾಕುವ ಎಲ್ಲಾದರಲ್ಲಿಯೂ ನಿಮಗೆ ಆಶೀರ್ವಾದವಿರುವುದು 9,ನೀವು ನಿಮ್ಮ ದೇವರಾದ ಯೆಹೋವನ ಆಜ್ಞೆಗಳನ್ನು ಕಾಪಾಡಿ ಆತನ ಮಾರ್ಗಗಳಲ್ಲಿ ನಡೆದರೆ ಯೆಹೋವನು ನಿಮಗೆ ಪ್ರಮಾಣಮಾಡಿದ ಹಾಗೆ ನಿಮ್ಮನ್ನು ತನಗೆ ಮಿಸಾ**ಲಾ**ದ ಜನವಾಗಿ ಸ್ಥಾ ಸುವನು 10,ಆಗ ಭೂಲೋಕದ ಜನರೆಲ್ಲರೂ ಯೆಹೋವನ ಹೆಸರಿನಿಂದ ನೀವು ಕರೆಯಲ್ಪಡುವುದನ್ನು ನೋಡಿ ನಿಮಗೆ ಭಯಪಡುವರು

ಇಸ್ರಾಯೇಲರ ಶತ್ರುಗಳು ಅವರನ್ನು ನೋಡಿ ಭಯಪಡುವರು ಎಂದು ದೇವರು ಹೇಳಿದ್ದರೂ, ಅವರು ನಿಜವಾದ ಭಯಪಡುತ್ತಿದ್ದುದು **ಇಸಾಯೇಲರ ದೇವರನ್ನು**. ಇಸ್ರಾಯೇಲರು ಇನ್ನೂ ಮರುಭೂಮಿಯಲ್ಲಿದ್ದಾಗಲೇ ಅವರು ಅವರ ಶತ್ರುಗಳನ್ನು ನೋಡುವುದಕ್ಕೆ ಮೊದಲೇ ದೇವರು ಈ ಪ್ರಮಾಣಗಳನ್ನು ಮಾಡಿದರು ಮತ್ತು ಅವರು ಮಾಡಿದ ಎಲ್ಲಾ ಪ್ರಮಾಣಗಳನ್ನು ನೆರವೇರಿಸಿದರು. ಗೂಢಾಚಾರರು ಯೆರಿಕೋವಿಗೆ ಹೋದ ಸಮಯದಲ್ಲಿ ನಡೆದ ಒಂದು ಘಟನೆಯನ್ನು ನೋಡೋಣ **ರಾಹಬಳು** ಇಸ್ರಾಯೇಲರಿಗೆ ದೇವರು ಮಾಡುತ್ತಿರುವ ಅದ್ಭುತಗಳನ್ನು ಕೇಳಿ ಯೆರಿಕೋವಿನ ಜನ ದಿಕ್ಕೆಟ್ಟು ಹೋಗಿದ್ದಾರೆಂದು ಗೂಢಾಚಾರರಿಗೆ ಹೇಳಿದಳು.

ಯೆಹೋಶುವ 2:8-11:

8,ಗೂಡಾಚಾರರು ಮಲಗುವುದಕ್ಕಿಂತ ಮುಂಚೆ ಆಕೆಯು ಮಾಳಿಗೆಯ ಮೇಲಕ್ಕೇರಿ ಅವರ ಬಳಿಗೆ ಬಂದು 9,ಯೆಹೋವನು ನಿಮಗೆ ದೇಶವನ್ನು ಕೊಟ್ಟಿದ್ದಾನೆಂದೂ ನಿಮ್ಮ ನಿಮ್ಮಿತ್ತ ನಮಗೆ ಮಾಹಾಭೀತಿಯಾಗಿದೆ ಎಂದೂ ನಿಮಗೋಸ್ಕರ ದೇಶದ ನಿವಾಸಿಗಳೆಲ್ಲ**ರೂ** ಕಂಗೆಟ್ಟು ಹೋಗಿದ್ದಾರೆಂದೂ ನಾನು ಬಲ್ಲೆನು. 10,ನೀವು ಈಜಿಪ್ಟಿನಿಂದ ಹೊರಡುವಾಗ ಯೆಹೋವನು ಹೇಗೆ **ಕೆಂ**ಪು ಸಮುದ್ರದ ನೀರನ್ನು ಬತ್ತಿಹೋಗಮಾಡಿದ್ದನ್ನೂ ನೀವು ಸಂಪೂರ್ಣ ನಿರ್ಮೂಲ ಮಾಡಿದ ಯೋರ್ದನಿಗೆ ಆಚೆಯಲ್ಲಿದ್ದ

ಅಮೋರಿಯರ ಇಬ್ಬರು ಅರಸುಗಳಾದ ಸೀಹೋನನಿಗೆ ಓಗನಿಗೂ ಮಡಿದ್ದನ್ನೂ ನಾವು ಕೇಳಿದ್ದೇವೆ, 11,ಇವುಗಳನ್ನು ಕೇಳಿದಾಗಲೇ ನಮ್ಮ ಹೃದಯವು ಕರಗಿಹೋಯಿತು. ಇನ್ನು ನಿಮ್ಮ ನಿಮ್ಮಿತ್ತ ಯಾವನಲ್ಲಿಯೂ ಧೈರ್ಯವಿಲ್ಲದೆ ಹೋಯಿತು. ನಿಮ್ಮ ದೇವರಾದ ಯೆಹೋವನೇ ಮೇಲಿರುವ ಆಕಾಶದಲ್ಲಿಯೂ ಕೆಳಗಿರುವ ಭೂಮಿಯಲ್ಲಿಯೂ ದೇವರಾಗಿದ್ದಾನೆ.

ಯೋರ್ದಾನ ನದಿಯನ್ನು ದಾಟುವುದಕ್ಕೆ ದೇವರು ಅವರಿಗೆ ಸಹಾಯ ಮಾಡಿದ ಇನ್ನೊಂದು ಘಟನೆಯನ್ನು ನೋಡೋಣ:

ಯೆಹೋಶುವ 4:23-24 "ಏಕೆಂದರೆ ಭೂಮಿಯ ಜನರೆಲ್ಲಾ ಯೆಹೋವನ ಹಸ್ತವು ಬಲವುಳ್ಳದ್ದೆಂದು ತಿಳಿಯುವ ಹಾಗೆಯೂ ನೀವು ನಿರಂತರವೂ ನಿಮ್ಮ ದೇವರಾದ ಯೆಹೋವನಿಗೆ ಭಯಪಡುವ **ಹಾ**ಗೆಯೂ 24,ನಿಮ್ಮ ದೇವರಾದ ಯೆಹೋವನು ಕೆಂಪು ಸುಮುದ್ರವನ್ನು ನಮ್ಮ ಮುಂದೆ ನಾವು ದಾಟುವವರೆಗೂ ಒಣಗಿ ಹೋಗುವಂತೆಮಾಡಿದ ಹಾಗೆ ದೇವರಾದ ಯೆಹೋವನು ನೀವು ದಾಟಿ ಬರುವವರೆಗೂ ಯೋರ್ದನಿನ ನೀರನ್ನು ಭಾಗ ಮಾಡಿದನು ಎಂದು ನೀವು ಹೇಳಬೇಕು ಎಚಿದನು.

ಈ ವಚನವು ಹೇಳುವುದೇನೆಂದರೆ, ಯೋರ್ದಾನ ನದಿಯನ್ನು ಒಣಗಿಸಿ, ಇಸ್ರಾಯೇಲರು ಅದನ್ನು ದಾಟಲು ದೇವರು ಸಹಾಯ ಮಾಡುವಾಗ ಅವರ ನಿಜವಾದ **ಉದ್ದೇಶವೇನಿತೇಂದರೆ**, ಭೂಮಿಯ ಮೇಲಿರುವ ಎಲ್ಲಾ ಜನರೂ ಯೆಹೋವನ ಕೈ ಎಷ್ಟು ಬಲವಾದದ್ದು ಎಂದು ತಿಳಿಯುವ ಹಾಗೆಯೂ, ಹಾಗೆಯೇ ನಿರಂತರವೂ ಇಸ್ರಾಯೇಲರು ದೇವರನ್ನು ಭಯಪಡುವ ಹಾಗೆಯೂ ಇದನ್ನು ಮಡಿದನು.

ನಾವು ದೇವರಿಗೆ ಭಯಪಡುವಾಗ, ಮನುಷ್ಯರ ಭಯ ನಮ್ಮಿಂದ ದೂರಹೋಗುತ್ತದೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಿ.

ಇನ್ನೊಂದು ಘಟನೆ ಗಿದ್ಯೋನನ ಸಮಯದಲ್ಲಿ ನಡೆದದ್ದು, ಇಸ್ರಾಯೇಲರು ಬಹಳ ಬಲಹೀನರಾದ ಸಮಯದಲ್ಲಿ ಅವರ ವಿರುದ್ದ ಯುದ್ಧಮಾಡಲು ಒಂದು ಬಲವಾದ ಸೈನ್ಯ ಬಂದಿತು. ದೇವರು ಇಸ್ರಾಯೇಲನ್ನು ಅವರ ಶತ್ರುಗಳಿಂದ ರಕ್ಷಿಸಲು ಗಿದ್ಯೋನ ಎಂಬ ಒಬ್ಬ ಸಾಧಾರಣ ಮನು**ಷ್ಯ**ನನ್ನು ಅವರಿಗೆ ನಾಯಕನನ್ನಾಗಿ ಆರಿಸಿಕೊಂಡರು ಅವನು ದೊಡ್ಡ ಸೈನ್ಯದಿಂದಲ್ಲ ಕೇವಲ 300 ಜನರನ್ನು ತೆಗೆದುಕೊಂಡು ಹೋಗಬೇಕೆಂದು ದೇವರ ನಿರೀ**ಕ್ಷೆ**ಯಾಗಿತ್ತು. ಗಿದ್ಯೋನನಿಗಾದ ಭಯ ಮತ್ತು ಆತಂಕವನ್ನು ಕಲ್ಪನೆ ಮಾಡಿನೋಡಿ **ಕಡೆ**ಗೆ ಗಿದ್ಯೋನನು ಶತ್ರುವಿನ ಗುಡಾರದ ಕಡೆಗೆ ಹೋದಾಗ ಅಲ್ಲಿಂದ ಸೈನಿಕರು **ಒಬ್ಬ**ರೊಡನೆ ಒಬ್ಬರು ಮಾತನಾಡುವುದನ್ನು ಕೇಳಿ, ಹೇಗೆ ದೇವರ ಕೈ ಈಗಾಗಲೇ ಅವರ ಮದ್ಯೆ ತನ್ನ ಕಾರ್ಯಗಳನ್ನು ಮಾಡಿ ಅವರಲ್ಲಿ ಭೀತಿ ಹುಟ್ಟಿಸಿದೆ ಎಂದು ಅರಿತನು



ನ್ಯಾಯಸ್ಥಾಪಕರು 7:12-15
12"ಮಿದ್ಯಾನ್ಯರೂ ಅಮೊಲೇಕ್ಯರೂ ಸಕಲ ಮೂಡಣದ ಜನರೂ ಮಿಡಿತೆಗಳಷ್ಟು ಗುಂಪಾಗಿ ತಗ್ಗಿನಲ್ಲಿ ಮಲಗಿದ್ದರು.ಅವರ ಒಂಟೆಗಳಿಗೆ **ಲೆಕ್ಕವಿಲ್ಲ** ಅವು ಸಮುದ್ರದ ಮರಳಿನ ಹಾಗೆ ಗುಂಪಾಗಿದ್ದವು 13,ಗಿದ್ಯೋನನು ಬಂದಾಗ, ಒಬ್ಬನು ತನ್ನ ಜತೆಗಾರನಿಗೆ ತನಗಾದ ಸ್ವಪ್ನವನ್ನು ವಿವರಿಸಿ ಹೇಳಿದ್ದೇನೆಂದರೆ "ಇಗೋ, ನಾನು ಒಂದು ಕನಸನ್ನು ಕಂಡೆನು **ಬಂದು** ಜವೆಗೋಧಿಯ ರೊಟ್ಟಿಯು ಮಿದ್ಯಾನ್ಯರ ದಂಡಿನ ಮೇಲೆ ಹೊರಳಿ ಒಂದು ಡೇರೆಯ ಮೇಲೆ ಒಂದು ಅದು ಬೀಳುವ ಹಾಗೆ ಅದನ್ನು ಹೊಡೆದು ಅದನ್ನು ಕೆಡವಿ ಹಾಕಿತು ಆಗ ಆ ಡೇರೆಯು ಬಿದ್ದು **ಹೋ**ಯಿತು" ಎಚಿದನು.

14,ಆಗ ಜೊತೆಗಾರನು ಉತ್ತರಕೊಟ್ಟು, "ಇದು ಯೋವಾಷನ ಮಗನಾದ ಗಿದ್ಯೋನನೆಂಬ ಇಸ್ರಾಯೇಲಿನ ಮನುಷ್ಯನ ಕತ್ತಿಯೇ ಹೊರತು ಬೇರೆಯಲ್ಲ ದೇವರು ಮಿದ್ಯಾನ್ಯರನ್ನೂ ಈ ಸಮಸ್ತ ದಂಡನ್ನು ಅವನ ಕೈಯಲ್ಲಿ ಒ್ಪಸಿಕೊಟ್ಟನು" ಎಂದನು. 15,ಗಿದ್ಯೋನನು ಆ ಕನಸಿನ ವಿವರವನ್ನೂ ಅದರ ಅರ್ಥವನ್ನೂ ಕೇಳಿದಾಗ ಅವನು ಯೆಹೋವನನ್ನು ಆರಾಧಿಸಿ ಇಸ್ರಾಯೇಲ್ ದಂಡಿಗೆ ತಿರುಗಿ ಬಂದು, "ಏಳಿರಿ, ಯೆಹೋವನು ಮಿದ್ಯಾನ್ಯರ ದಂಡನ್ನು ನಿಮ್ಮ ಕೈಗೆ ಒ್ಪಸಿಕೊಟ್ಟಿದ್ದಾನೆ" ಎಂದು ಹೇಳಿದನು.

ಶತ್ರು ಸೈನಿಕರ ಮಾತುಗಳನ್ನು ಕೇಳಿದ ಕೂಡಲೇ ಗಿದ್ಯೋನನು ತೋರದ ಪ್ರತಿಕ್ರಿಯೆ ನೋಡಿ ದೇವರು ತಮ್ಮ ಶತ್ರುಗಳನ್ನು ಭಯದಿಂದ ತುಂಬಿದ್ದಾರೆಂದು ನೋಡಿ, ಅವನಿಗೆ ಧೈರ್ಯ ಉಂಟಾಯಿತು, ಕೂಡಲೇ ದೇವರನ್ನು ಆರಾಧಿಸಿ, ಧೈರ್ಯದಿಂದ ತನ್ನ ಜನರೊಡನೆ ಶತ್ರುವಿಗೆ ಎದುರಾಗಿ ದಂಡೆತ್ತಿ ಹೋದನು

ರೋಮಾಪುರದವರಿಗೆ 8:31-39"ದೇವರು ನಮ್ಮ ಪರವಾಗಿ ಇದ್ದಾರೆ ನಮ್ಮನ್ನು ವಿರೋಧಿಸುವವರು ಯಾರು? 32,ತನ್ನ ಸ್ವಂತ ಮಗನನ್ನೇ ಉಳಿಸಿಕೊಳ್ಳದೆ ನಮ್ಮೆಲ್ಲರಿಗೋಸ್ಕರ ಆತನನ್ನು ಕೊಟ್ಟ ದೇವರು ನಮಗೆ ಉದಾರವಾಗಿ ಆತನೊಂದಿಗೆ ಎಲ್ಲವನ್ನೂ ಕೊಡದೆ ಇರುವನೆ? 23,ದೇವರು ತಾನೇ ಆರಿಸಿಕೊಂಡವರ ಮೇಲೆ ದೋಷಾರೋಪಣೆ ಮಾಡುವವನಾರು? ದೇವರೇ ನೀತಿವಂತರೆಂದು **ನಿರ್ಣಯ ಮಾಡುವವನಾಗಿರುತ್ತಾನೆ. ಅಪರಾದಿಗಳೆಂದು** ನಿರ್ಣಯಿಸುವವರು ಯಾರು? ಕ್ರಿಸ್ತಯೇಸು ಮರಣವನ್ನು ಹೊಂದಿದ್ದಲ್ಲದೆ, ಯೇಸುಕ್ರಿಸ್ತನೇ ಎಬ್ಬಿಸಲ್ಪಟ್ಟು ದೇವರ ಬಲಗಡೆಯಲ್ಲಿ ಇದ್ದಾನೆ ಮತ್ತು ಆತನೇ ನಮಗೋಸ್ಕರ ಪ್ರಾರ್ಥಿಸುವವನಾಗಿರುತ್ತಾನೆ. 35.ಕ್ರಿಸ್ತನ ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು? ಕಷ್ಟವೋ, ಇಕ್ಕಟ್ಟೋ, ಹಿಂಸೇ**ಯೋ**, ಆಹಾರ ವಿಲ್ಲದಿರುವುದೋ, ಬಟ್ಟೆ ಇಲ್ಲದಿರುವುದೋ, ಗಂಡಾಂತವೋ, ಅಥವಾ ಖಡ್ಗವೋ? ಇವು ಪವಿತ್ರ ಗ್ರಂಥದಲ್ಲಿ ಬರೆದಿರುವಂತೆ ಇವೆ; ನಿನಗೋಸ್ಕರ ನಾವು ದಿನವೆಲ್ಲಾ ಮರಣಕ್ಕೆ ಒ್ಪಸಲ್ಪಟ್ಟಿದ್ದೇವೆ, ವದಿಸಲ್ಪಡಲಿರುವ ಕುರಿಗಳಂತೆ ನಾವು ಎಣಿಸಲ್ಪಟ್ಟಿರುತ್ತೇವೆ' 37,ಇವೆಲ್ಲವುಗಳಲ್ಲಿಯೂ ನಾವು ನಮ್ಮನ್ನು ್ರೀತಿಸಿದಾತನ ಮೂಲಕ ಜಯಶಾಲಿಗಳಿಗಿಂತಲೂ ಹೆಚ್ಚಿನವರಾಗಿದ್ದೇವೆ. 38ಏಕೆಂದರೆ ಮರಣವಾಗಲಿ ಜೀವವಾಗಲಿ, ದೇವದೂತರಾಗಲಿ, **ಅಧಿಪತಿಗಳಾಗಲಿ**. ವರ್ತಮಾನ ಕಾಲದ ಸಂಗತಿಗಳಾಗಲಿ, ಭವಿಷ್ಯತ್ಕಾಲದ ಸಂಗತಿಗಳಾಗಲಿ, ಯಾವುದೇ ಶಕ್ತಿಯಾಗಲಿ, 39,ಎತ್ತರವಾಗಲಿ ಆಳವಾಗಲಿ, ಅಥವಾ ಸೃಷ್ಠಿಯಲ್ಲಿರುವ ಬೇರೆ ಯಾವುದೇ ಆಗಲಿ ನಮ್ಮ ಕರ್ತನಾಗಿರುವ

ಕ್ರಿಸ್ತಯೇಸುವಿನಲ್ಲಿರವ ದೇವರ ೕತಿಯಿಂದ ನಮ್ಮನ್ನು ಅಗಲಿಸಲಾರವೆಂದು ನನಗೆ ದೃಢ ನಿಶ್ಚಯವಿದೆ.

ನಾವು ಯೋಚಿಸಲೇ ಬೇಕಾದ ಒಂದು ಮುಖ್ಯಾವಾದ ಪ್ರಶ್ನೆಯನ್ನು ಪೌಲನು ನಮಗೆ ಕೇಳಿದ್ದಾನೆ "ದೇವರು ನಮ್ಮ ಪರವಾಗಿ ಇದ್ದರೆ ನಮ್ಮನ್ನು ವಿರೋಧಿಸುವವರು ಯಾರು?

ಈಹೊತ್ತು ಇಸ್ರಾಯೇಲರ ಹಾಗೆ ನಾವು ಯುದ್ಧಗಳನ್ನು ಮಾಡದಿರಬಹುದು. ಆದರೆ ನಾವು ಯುದ್ಧದಲ್ಲಿದ್ದೇವೆ, ಈ ಯುದ್ಧ ನಮ್ಮ ಜೀವನನಿಡೀ ಪ್ರತಿದಿನದ ಯುದ್ಧವಾಗಿದೆ. ನಮ್ಮ ಆತ್ಮಗಳನ್ನು ತನ್ನ ಕಡೆಗೆ ಒಲಿಸಿಕೊಳ್ಳಲು ಸೈತಾನನು ತುಂಬಾ ಶೋದನೆಗಳಿಂದ ನಮ್ಮನ್ನು ಪಾಪದಲ್ಲಿ ಬೀಳಿಸಲು ಪ್ರಯತ್ನಿಸುತ್ತಿದ್ದಾನೆ ಆದರೆ ಯೇಸು ನಮಗೋಸ್ಕರ ಯುದ್ಧ ಮಾಡಿ ಜಯಾಶಾಲಿ ಯಾಗಿದ್ದಾರೆಂದು ನೆನ ಟ್ಟುಕೊಳ್ಳಿ ಇವೆಲ್ಲವುಗಳಲ್ಲಿಯೂ ನಾವು ನಮ್ಮನ್ನು ೕತಿಸಿದಾತನಾದ ಯೇಸುವಿನ ಮೂಲಕ ಜಯಶಾಲಿಗಳಿಗಿಂತಲೂ ಹೆಚ್ಚಿನವರಾಗಿದ್ದೇವೆ.

ಶೋಧನೆಗಳನ್ನು ಎದುರಿಸುವಾಗ ನಿಮಗೆ ಹೆದರಿಕೆಯಾಗುವುದೇ? ನೀವು ಶೋದನೆಗಳನ್ನು ಜಯಿಸಬಹುದು ಎಂಬ ದೃಢವಿಶ್ವಾಸ ನಿಮ್ಮಲ್ಲಿದೆಯೇ ಅಥವಾ ಅವಕ್ಕೆ ಈಡಾಗುತ್ತಿದ್ದಿರಾ? ನೆನ ಟ್ಟುಕೊಳ್ಳಿ ಏನೆಂದರೆ ಯೇಸು ಯುದ್ಧಮಾಡಿ ತನ್ನ ಅತ್ಯಮುಲ್ಯ ಜೀವವನ್ನು ಬಲಿಯಾಗಿ ಅರ್ ಸಿದುದು, ನಾವು ಸೈತಾನನಿಗೆ ಶರಣಾಗುವುದಕ್ಕಲ್ಲ, ಆದರೆ, ಧೈರ್ಯದಿಂದ ಹೋರಾಡಿ ಶೋಧನೆಗಳನ್ನು ಜಯಸಿ ಕ್ರಿಸ್ತನಂತಾಗಲು. ದೇವರು ಇಸ್ರಾಯೇಲರ ಸಂಗಡ ಇರುವುದನ್ನು ಕಂಡು ಅವರಿಗೆ ಎದುರಾಗಿ ಬಂದ ದಂಡಿಗೆ ಭೀತಿ ಉಂಟಾಯಿತು, ನಮ್ಮ ಸಂಗಡ ಸದಾಕಾಲವಿರುವ ಅದೇ ದೇವರನ್ನು ಕಂಡ ಸೈತಾನನಿಗೆ ನಮ್ಮ ಮೇಲೆ ಇನ್ನೂ ಎಷ್ಟು ಭೀತಿ ಉಂಟಾಗಬಹುದು. ಇತ್ತೀಚೆಗೆ ನೀವು ಎದುರಿಸುತ್ತಿರುವ ಶೋಧನೆಗಳು ಯಾವುವು? ನಿಮ್ಮ ಮನೋಭಾವನೆಯೇನು ಭಯದಿಂದ ಶರಣಾಗುವುದೇ ಅಥವಾ, ಧೈರ್ಯದಿಂದ ಜಯಶಾಲಿಗಳಾವುದೇ?

ಯಾಕೋಬ 4:7, "ಹೀಗಿರಲಾಗಿ ದೇವರಿಗೆ ಅಧೀನವಾಗಿರಿ ಸೈತಾನನನ್ನು ಎದುರಿಸಿರಿ, ಆಗ ಅವನ್ನು ನಿಮ್ಮನ್ನು ಬಿಟ್ಟು ಓಡಿ ಹೋಗುವನ್ನು" ಶೋಧನೆಗಳನ್ನು ನಿರಾಕರಿಸಿ, ದೇವರ ಕೈ ನಿಮ್ಮ ಮೇಲೆ ಬೀರುವ ಪ್ರಭಾವವನ್ನು ಆನುಭವಿಸಿ ಮತ್ತು ನಿಮ್ಮ ಬಲಹೀನತೆಗಳನ್ನು ನಿಮ್ಮ ಬಲವನ್ನಾಗಿ ಪರಿವರ್ತಿಸಿರಿ.

## ದಿನ -9

## ದೇವರ ಕೈಯಿಂದ ಪಡೆದ ಆಶೀರ್ವಾದಗಳಿಗೆ ಕೃತಜ್ಞತೆ ತೋರುವುದು

ಧರ್ಮೋಪದೇಶಕಾಂಡ 26:1-15

ಇಸ್ರಾಯೇಲರು ವಾಗ್ದಾನ ಮಾಡಿದ ದೇಶಕ್ಕೆ ಕಾಲಿಡುವ ಮೊದಲು ದೇವರು ಮತ್ತೊಂದು



ಆಜ್ಞೆಯನ್ನು ಕೊಟ್ಟರು ದೇವರು ಅವರ ಬಲವಾದ ಕೈಯಿಂದ ಹಾಲೂ ಜೇನೂ ಹರಿಯುವ ದೇಶವನ್ನು ಕೊಟ್ಟಿದ್ದಕ್ಕಾಗಿ ಹೇಗೆ ಕೃತಜ್ಞತೆ ತೋರಿಸಬೇಕು ಎಂದು ದೇವರು ಆಜ್ಞಾ ಸುತ್ತಿದ್ದಾರೆ. ಅವರ ಹುಟ್ಟುವಳಿಯ ಪ್ರಥಮ ಫಲವನ್ನು ಬಲಿ e ಠಕ್ಕೆ ತಂದು, ಮಾತುಗಳಿಂದಲೂ ಕೃತಜ್ಞತೆ ಸಲ್ಲಿಸಬೇಕೆಂದು ಎಂದು ಆಜ್ಞಾ ಸಲಾಯಿತು.

ವಚನ:3-11 "ಅಲ್ಲಿ ಆ ಕಾಲದಲ್ಲಿರುವ ಯಾಜಕನು ಬಳಿಗೆ ಹೋಗಿ ಅವನಿಗೆ ಯೆಹೋವನು ನಮ್ಮ ತೃಗಳಿಗೆ ಕೊಡುತ್ತೇನೆಂದು ಪ್ರಮಣಮಾಡಿದ ದೇಶದಲ್ಲಿ ನಾವು ಸೇರಿದ್ದೇವೆಂದು ಈ ಹೋತ್ತು ನಿಮ್ಮ ದೇವರಾದ ಯೆಹೋವನಿಗೆ ಪ್ರಮಾಣಮಾಡುತ್ತೇನೆ ಎಂದು ಹೇಳಬೇಕು. 4,ಆಗ ಯಾಜಕನು ಪುಟ್ಟಿಯನ್ನು ನಿಮ್ಮ ಕೈಯಿಂದ **ತೆಗೆದು** ನಿಮ್ಮ ದೇವರಾದ ಯೆಹೋವನ ಬಲಿ ೀಠದ ಮುಂದೆ ಇಡಬೇಕು 5.ಆಮೇಲೆ ನೀವು ಉತ್ತರಕೊಟ್ಟು ನಿಮ್ಮ ದೇವರಾದ ಯೆಹೋವನ ಮುಂದೆ ನಮ್ಮ ತಂದೆ ನಾಶವಾಗುವ ಅರಾಮ್ಯನಾಗಿ ಈಜಿಪ್ಟ್ ಗೆ ಇಳಿದುಹೋಗಿ ಅಲ್ಲಿ ಸ್ವಲ್ಪಮಂದಿಯ ಸಂಗಡ ಪರವಸನಾಗಿದ್ದು ಅಲ್ಲಿ ದೊಡ್ಡದಾದ ಬಲಿಷ್ಠವಾದ ಅಧಿಕವಾದ ಜನಾಂಗವಾದನು. 6.ಆದರೆ ಈಜಿಪ್ಟಿನವರು ನಮಗೆ ಕೇಡನ್ನು **ಮಾಡಿ** ನಮ್ಮನ್ನು ಕುಂದಿಸಿ ಕಠಿಣವಾದ ಕೆಲಸವನ್ನು ನಮ್ಮ ಮೇಲೆ ಹೊರಿಸಿದರು

7,ಆಗ ನಾವು ನಮ್ಮ ತೃಗಳ ದೇವರಾದ ಯೆಹೋವನ ಕಡೆಗೆ ಕೂಗಿದಾಗ ಯೆಹೋವನು ನಮ್ಮ ಧ್ವನಿಯನ್ನು ಕೇಳಿ ನಮ್ಮ ಸಂಕಟವನ್ನೂ ಕಷ್ಟವನ್ನೂ ಬಾಧೆಯನ್ನೂ ನೋಡಿದನು. 8,ಆದರಿಂದ ಯೆಹೋವನು ನಮ್ಮನ್ನು ಬಲವಾದ ಕೈಯಿಂದಲೂ ಚಾಚಿದ ತೋಳಿನಿಂದಲೂ ಮಹಾಭಯದಿಂದಲೂ ಗುರುತುಗಳಿಂದಲೂ ಅದ್ಭುತಗಳಿಂದಲೂ ಈಜಿ ್ಟನಿಂದ ಹೊರಗೆ ಬರಮಾಡಿ. 9,ನಮ್ಮನ್ನು ಈ ಸ್ಥಳಕ್ಕೆ ಕರಕೊಂಡು ಬಂದು ಹಾಲೂ ಜೇನೂ ಹರಿಯುವ ದೇಶವಾಗಿರುವ ಈ ದೇಶವನ್ನು ನಮಗೆ ಕೊಟ್ಟಿದ್ದಾನೆ. 10, ಹೀಗಿರಲಾಗಿ ಯೆಹೋವನೇ ನೀನು ನಿಮಗೆ ಕೊಟ್ಟ ಭೂಮಿಯ ಪ್ರಥಮ ಫಲವನ್ನು ತಂದಿದ್ದೇವೆ ಎಂದು ಹೇಳಬೇಕು. ಆಗ ಅದನ್ನು ನಿಮ್ಮ ದೇವರಾದ ಯೆಹೋವನ ಮುಂದೆ ನೀವು ಇಟ್ಟು ದೇವರಾದ ಯೇಹೋವನನ್ನು ಆರಾಧಿಸಬೇಕು 11,ನಿಮ್ಮ ದೇವರಾದ ಯೆಹೋವನು ನಿಮಗೂ ನಿಮ್ಮ ಮನೆಗೂ ಲೇವಿಯರೂ ನಿಮ್ಮ ಸಂಗಡ ಇರುವ ಪರವಾಸಿಗಳಿಗೂ ನೀಡಿರುವ ಸೌಭಾಗ್ಯಕ್ಕಾಗಿ ಸಂತೋಷಪಡಬೇಕು.

ಕೃತಜ್ಞತೆ ಅರ್ ಸಲು ಮೂರು ಸಂಗತಿಗಳನ್ನು ಇಲ್ಲಿ ನೋಡೋಣ.

1. ಗತಕಾಲದ ಸ್ಥಿತಿಗತಿಗಳನ್ನು, ಪಟ್ಟ ಕಷ್ಟ ನೋವುಗಳನ್ನು ಜ್ಞಾ ಸಿಕೊಳ್ಳುವುದು. (ದಾಸತ್ವ)
2. ಯೆಹೋವನು ಹೇಗೆ ಬಲವಾದ ಕೈಯಿಂದಲೂ ಚಾಚಿದ ತೋಳಿನಿಂದಲೂ ಮಹಾಭಯದಿಂದಲೂ ಗುರುತುಗಳಿಂದಲೂ ಅದ್ಭುತಗಳಿಂದ ಈಜಿ ್ಟನಿಂದ ಬಿಡುಗಡೆ ಮಾಡಿದನೆಂಬುದು (ದಾಸತ್ವದಿಂದ ಬಿಡುಗಡೆ)

**3.** ದೇವರು ಹೇಗೆ ಹಾಲೂ ಜೇನು ಹರಿಯುವ ದೇಶವನ್ನು ಅವರಿಗೆ ಬಹುಮಾನವನ್ನಾಗಿ ಕೊಟ್ಟಿದಕ್ಕಾಗಿ

(ಮಹಾ ವೈಭವಯುಕ್ತ ವರ್ತಮಾನಕಾಲ ಮತ್ತು ಭವಿಷ್ಯತ್ಕಾಲ)

ದೇವರಿಗೆ ಅವರ ಹುಟ್ಟುವಳಿಯ ಪ್ರಥಮ ಫಲವನ್ನು ಕೊಟ್ಟು ಮಾತುಗಳಿಂದಲೂ ಉಪಕಾರ ಸ್ಮರಣೆ ಮಾಡಬೇಕೆಂದು ನಿರೀಕ್ಷಿಸಲಾಯಿತು.

ಈ ಹೊತ್ತು ಅದನ್ನೇ ಅಲ್ಲವೆ, ದೇವರು ನಮ್ಮಿಂದ ನಿರೀಕ್ಷಿಸುವುದು?

ನೀವು ಎಲ್ಲಿಂದ ಬಂದಿರಿ ಎಂದು ನಿಮಗೆ ಜ್ಞಾಪಕವಿದೆಯೆ? (ನಿಮ್ಮ ಗತಕಾಲ)ಹೇಗೆ ನೀವು ಪಾಪಕ್ಕೆ ದಾಸರಾಗಿದ್ದಿರಿ? ನಿಮ್ಮ ಜೀವನ ಹೇಗೆ **ಆಶಾರಹಿತವಾಗಿತ್ತು**? ನಿಮ್ಮನ್ನು ನೀವೆ ಅದರಿಂದ ಪಾರಾಗಲೂ ಅಸಾಧ್ಯವಾಗಿತ್ತು! ದೇವರು ಅವರ ಬಲಿಷ್ಠ ಕೈಗಳನ್ನು ಚಾಚಿ ಅವರ ಒಬ್ಬನೇ ಮಗನಾದ ಯೇಸುವಿನ ಬಲಿದಾನದಿಂದ ನಿಮ್ಮನ್ನು ರಕ್ಷಿಸಿದರು ನಿಮ್ಮನ್ನು ತನ್ನ ರಾಜ್ಯಾದೊಳಗೆ ಬರಮಾಡಿಕೊಂಡಿದ್ದಲ್ಲದೆ, ನಿಮ್ಮನ್ನು ಅವರ ಮಗನಾಗಿ/ಮಗಳಾಗಿ ಅವರ ಕುಟುಂಬದ ಒಬ್ಬ ಸದಸ್ಯನಾಗಿ ಮಾಡಿದ್ದಾರೆ. ಈಗ ದೇವರ **ರಾಜ್ಯದಲ್ಲಿ** ನಿಮ್ಮ ಜೀವನ ಮಹಾವೈಭವಯುಕ್ತವಾಗಿದೆ, ಇಹಲೋಕದ ಜೀವನ ಮುಗಿದ ನಂತರ ನಾವು ವಾಗ್ದಾನ **ಮಾಡಿದ** ದೇಶಕ್ಕೆ ಹೋಗುತ್ತಿದ್ದೇವೆ- ನಿರಂತರವಾಗಿ ಪರಲೋಕದಲ್ಲಿ ವಾಸ.

ನೀವು ಇದಕ್ಕೆಲ್ಲಾ ಕೃತಜ್ಞತೆ ಉಳ್ಳವರಾಗಿದ್ದೀರಾ? ನಿಮ್ಮ ಕೃತಜ್ಞತೆಯನ್ನು ದೇವರಿಗೆ ತೋರಿಸುತ್ತಿದ್ದೀರಾ? ನೀವು ನಿಮ್ಮ ಪ್ರಥಮ ಫಲಗಳನ್ನು ಮತ್ತು ದಶಾಂಶಕ್ಕಿಂತ ಹೆಚ್ಚಾಗಿ ದೇವರಿಗೆ ಕೋಡುತ್ತಿರುವಿರಾ? ಅಥವಾ ಸ್ವಾರ್ಥದಿಂದ ಮತ್ತು ಕೃತಜ್ಞತೆಯಿಲ್ಲದೆ ಎಲ್ಲವನ್ನೂ ನಿಮ್ಮ**ಲ್ಲೇ** ಇಟ್ಟು ಕೊಂಡಿರುವಿರಾ? ನೀವು ಮಾತುಗಳಿಂಗಲೂ ದೇವರಿಗೆ ನಿಮ್ಮ ಗತಕಾಲ ನಿಮ್ಮ ವರ್ತಮಾನಕಾಲ ಮತ್ತು ವಾಗ್ದಾನಮಡಿದ ವೈಭವಯುಕ್ತ ಭವಿಷ್ಯತ್ಕಾಲಕ್ಕೆಲ್ಲ ಜ್ಞಾಪಕದಲ್ಲಿಟ್ಟುಕೊಂಡು ಉಪಾಕಾರಸ್ಮರಣೆ ಮಾಡುತ್ತಿರುವಿರಾ?

ದೇವರ ಕೈಯಿಂದ ಬಂದ ಆಶೀರ್ವಾದಗಳಿಗೆ ನಾವು ಯಾವಾಗಲೂ ಕೃತಜ್ಞತೆಯಿಂದಿರುವುದನ್ನು ಕಲಿಯೋಣ.

ನಾವು ಉಪಕಾರ ಸ್ಮರಿಸದಿದ್ದರೆ ಏನಾಗುತ್ತದೆ? ನಮ್ಮನ್ನು ರಕ್ಷಿಸಿದ ದೇವರ ಕೈ, ನಮಗೆ ವಿರೋಧವಾಗಿ ನಾವು ಮನಸ್ಸಾಂತರ ಹೊಂದುವ ತನಕ ನಮ್ಮನ್ನು ಕುಗ್ಗಿಸುತ್ತದೆ.
ಧರ್ಮೋಪದೇಶಕಾಂಡ 31:14:23,ರಲ್ಲಿ, ಉಪಕಾರ ಸ್ಮರಿಸದ ಇಸ್ರಾಯೇಲರ ಪಾಡನ್ನು ದೇವರು ಮೊದಲೇ ಹೇಳುತ್ತಾರೆ. ಅವರು ಉಪಕಾರ ಸ್ಮರಿಸದಿದ್ದನ್ನು ಜ್ಞಾ ಸಲು ಮತ್ತು ಅವರು ಪಶ್ಚಾತ್ತಾಪ ಪಡಲು ದೇವರು ಅವರಿಗೆ ಒಂದು ಹಾಡನ್ನು ಕೊಟ್ಟು ಎಲ್ಲಾ ಇಸ್ರಾಯೇಲರು ಅದನ್ನು ಕಲಿಯಬೇಕು ಎಂದರು.



ನಾವು ಆ ಹಾಡಿನ ಬಗ್ಗೆ ದ್ಯಾನಮಾಡೋಣ,
(ಧರ್ಮೋಪದೇಶಕಾಂಡ 32)

ನಿಮ್ಮ ಕತೆಯನ್ನು ಬರೆಯಿರಿ-ನಿಮ್ಮ ಗತಜೀವನ ಹೇಗಿತ್ತು-ದೇವರು ಹೇಗೆ ನಿಮ್ಮನ್ನು ಬಿಡುಗಡೆ ಮಾಡಿದರು-ಈಗಿನವರೆಗೆ ನಿಮಗೆ ದೇವರು ಕೊಟ್ಟ ಆಶೀರ್ವಾದಗಳು-ಮತ್ತು ಮುಂದಿನ ಕಾಲಕ್ಕೆ ಖಂಡಿತವಾಗಿ ನಿಮಗೆ ಸಿಕ್ಕುವ ದೇವರ ಆಶೀರ್ವಾದಗಳು ಆಗಾಗ (ನೀವು ಸಮಯ ನಿರ್ಣಯಿಸಿ) ಅದನ್ನು ಓದಿ ದೇವರಿಗೆ ಕೃತಜ್ಞತೆ ಅರ್ಪಿಸಿ. ಮಾತುಗಳಿಂದ ಕೃತಜ್ಞತೆ ಅರ್ಪಿಸುವಾಗ ಕಾರ್ಯಗಳಿಂದಲೂ, ನಿಮ್ಮ ಕಾಣಿಕೆಗಳಿಂದಲೂ ದೇವರಿಗೆ ಹೆಚ್ಚು ಹೆಚ್ಚಾಗಿ **ಕೊಡಿ** ಹಾಗೆಯೇ ಬಡವರಿಗೂ ವಿಧವೆಯರಿಗೂ ಸಾಹಾಯಮಾಡಿ.

## ದಿನ -10

## ಯಾವ ಗೋಡೆಯೂ ದೇವರಿಗೆದುರಾಗಿ ಸರಿಸಾಟಿಯಾಗಿ ನಿಲ್ಲಲಾರದು

ಯೊಹೋಶುವ 6: ಯೆರಿಕೋವಿನ ಪತನ.

ಇಸ್ರಾಯೇಲ್ಯರು ಹೇಗೆ ದೇವರಿಗೆ ಮತ್ತು ಮೋಶೆಗೆ ವಿರೋಧವಾಗಿ ಗೊಥಿಗುಟ್ಟಿದರು ಎಂಬುದು ನೆನಪಿದೆಯೇ?

ಧರ್ಮೋಪದೇಶ 1:27–28 : ನಿಮ್ಮ ಗುಡಾರಗಳಲ್ಲಿ ಗೊಥಿಗುಟ್ಟಿ, ಯೆಹೋವನು ನಮ್ಮನ್ನು ಹಗೆ ಮಾಡಿದ್ದರಿಂದು ನಿಮ್ಮನ್ನು ಅಮೋರಿಯರ ಕೈಗೆ ಒಪ್ಪಿಸಿ ನಮ್ಮನ್ನು ನಾಶಮಾಡುವುದಕ್ಕೆ ಈಜಿಪ್ಟ್ ದೇಶದೊಳಗಿಂದ ಹೊರಗೆ ಬರಮಾಡಿದ್ದಾನೆ. 28, ನಾವು ಎಲ್ಲಿಗೆ ಹೋಗೋಥಿ ? ನಮ್ಮ ಸಹೋದರರು, ಆ ಜನರು ಮನಗಿಂತ ದೊಡ್ಡವರೂ, ಎತ್ತರದವರೂ, ಪಟ್ಟಥಿಗಳು ದೊಡ್ಡವುಗಳೂ, ಆಕಾಶದ ಎತ್ತರಕ್ಕೂ ಗೋಡೆಯುಳ್ಳವುಗಳೂ, ಅದಲ್ಲದೆ ರಾಕ್ಷಾಸಾಕಾರದ ಅನಾಕ್ಯರ ಮಕ್ಕಳನ್ನು ಅಲ್ಲಿ ನೋಡಿದೆವು ಎಂದು ಹೇಳಿ ನಮ್ಮ ಹೃದಯಗಳನ್ನು ಅಧೈರ್ಯಪಡಿಸಿದ್ದಾರೆ ಎಂದು ಹೇಳಿದಿರಿ.

ಆಗಲೂ ಅಂತಾ ಸಮಯದಲ್ಲೂ ಅವರಿಗೆ ತಾಳ್ಮೆಯಿಂದ ಮತ್ತು ಮೃದುವಾಗಿ ದೇವರು ಹೇಳಿದರು ಧರ್ಮೋಪದೇಶ 1:29–31 ಆಗ ನಾನು ನಿಮಗೆ ಅಂಜಬೇಡಿರಿ, ಅವರಿಗೆ ಭಯಪಡಬೇಡಿರಿ, 30 ನಿಮ್ಮ ಮುಂದೆ ಹೋಗುವ ನಿಮ್ಮ ದೇವರಾದ ಯೆಹೋವನು ಆತನೇ ಈಜಿಪ್ಟಿನಲ್ಲಿ ನಿಮ್ಮ ಕಥ್ಣಿಗಳ ಮುಂದೆಯೂ ಮರುಭೂಮಿಯಲ್ಲಿಯೂ ನಿಮಗೆ ಮಾಡಿದ ಎಲ್ಲಾದರ ಪ್ರಕಾರ ನಿಮಗೋಸ್ಕರ ಯುದ್ಧಮಾಡುವನು. 31, ನೀವು ಆ ಸ್ಥಳಕ್ಕೆ ಸೇರುವ ಪರ್ಯಂತರ ನಿಮ್ಮ ಪ್ರಯಾಥಿದಲ್ಲೆಲ್ಲಾ ಒಬ್ಬ ತಂದೆ ತನ್ನ ಮಗನನ್ನು ಹೇಗೋ ಹಾಗೆಯೇ ನಿಮ್ಮ ದೇವರಾದ ಯೆಹೋವನು ನಿಮ್ಮನ್ನು ಹೊತ್ತುತಂದನಲ್ಲವೇ? ಎಂದು ಹೇಳಿದನು.

ದೇವರ ಕೈ ಮಾಡಿದ ಯಾವ ಮಹಾತ್ಕಾರ್ಯಗಳಿಗೆ ನೀವು ಇದುವರೆವಿಗೆ ಸಾಕ್ಷಿಯಾಗಿದ್ದೀರಾ ? ಈಜಿಪ್ಟಿನವರಿಗೆ ಬಂದ 10 ಮಹಾ ಉಪದ್ರವಗಳು, ಕೆಂಪು ಸಮುದ್ರವನ್ನು ವಿಭಾಗಿಸಿದ್ದು, ಈಜಿಪ್ಟಿನ ಮಹಾ ದಂಡನ್ನು ನಾಶಮಾಡಿದ್ದು, ಪ್ರತಿದಿನ ಬೆಳಿಗ್ಗೆ ಪರಲೋಕದಿಂದ ಮನ್ನವನ್ನು ಸುರಿಸಿದ್ದು, ಪರ್ವತದಿಂದ ನೀರನ್ನು ಉಕ್ಕಿಸಿದ್ದು, ಹಾಗೆಯೇ ಪಟ್ಟಿ ಹೋಗುತ್ತಾ ಇರುತ್ತದೆ. ಆದರೂ ವಾಗ್ದಾನ ಮಾಡಿದ ದೇಶದಲ್ಲಿ, ನಗರಗಳಿಗೆ ಎತ್ತರವಾದ ಗೋಡೆಗಳಿವೆ ಎಂದು ಕೇಳಿ ಇಸ್ರಾಯೇಲ್ಯರು ಭಯದಿಂದ ತತ್ತರಿಸಿದರು.

ಅಂಥಾ ಒಂದು ನಗರಕ್ಕೆ, ಅವರು ಭಯಪಡುವ ಸ್ಥಳಕ್ಕೆ ದೇವರು ಅವರನ್ನು ಕರೆತರುತ್ತಾರೆ. ಇಲ್ಲಿ ದೇವರು, ಅಲ್ಲಿರುವಂಥಾ ನಗರಗಳನ್ನು ಗೆಲ್ಲಲು ಇಸ್ರಾಯೇಲರು ಯಾವ ದೊಡ್ಡ ಕೆಲಸಗಳನ್ನು ಮಾಡಬೇಕಾಗಿಲ್ಲ. ಏಕೆಂದರೆ ತಾನೇ ಅವರಿಗೋಸ್ಕರ ಯುದ್ದಮಾಡುವನೆಂದು ತೋರಿಸಲು ಇಷ್ಟಪಡುತ್ತಾರೆ.

ಏಳು ದಿನ ಪಟ್ಟಥಿದ ಸುತ್ತಲೂ ಹೋಗಿ ಏಳನೆಯ ದಿನ ಮಹಾ ರಭಸದಿಂದ ಆರ್ಭಟಿಸಿದಾಗ ದೇವರು ಯೆರಿಕೋವಿನ ಭಯಂಕರ ಗೋಡೆಗಳನ್ನು ನೆಲಸಮಮಾಡಿದನು, ಆ ಗೋಡೆಗಳನ್ನು ನೆಲಸಮ ಮಾಡಿದುದು ಯಾವುದು ? 7 ದಿನ ಸುತ್ತಿದೇ ? ಮಹಾ ರಭಸದಿಂದ ಆರ್ಭಡಿಸಿದ್ದೇ ? ಅಥವಾ ಕಣ್ಣಿಗೆ ಕಾಥಿದ ದೇವರ ಬಲಿಷ್ಠಕೈಯೇ ?

ದೇವರಿಗೆ ನೆಲಸಮ ಮಾಡಲು ಅಸಾಧ್ಯವಾದ ಯಾವುದಾದರೂ ಗೋಡೆಯಿದೆಯೋ ? ಈ ಘಟನೆ ನಡೆದ ನೂರಾರು ವರ್ಷಗಳ ಬಳಿಕ, 150 ಅಡಿ ಎತ್ತರದ ಗೋಡೆ, 3 ರಥಗಳು ಒಟ್ಟಿಗೇ ರಭಸದಿಂದ ಸಾಗುವಷ್ಟು ಅಗಲವಿದ್ದು, 1200 ಗೋಪುರಗಳಿದ್ದರೂ, ದೇವರು ಒಂದು ನದಿಯನ್ನು ಅದಕ್ಕೆದುರಾಗಿ ಉಕ್ಕಿ ಹರಿಯಲು ಬಿಟ್ಟು ಆ ಗೋಡೆಯನ್ನು ನೆಲಸಮಮಾಡಿದರು.

ನಿಮಗೆ ಈ ಹೊತ್ತು ಯಾವ ಗೋಡೆಗಳ ಬಗ್ಗೆ ಹೆದರಿಕೆಯಿದೆ ? ನಿಮ್ಮ ನಗರದ ಯಾವ ಭಾಗಗಳಲ್ಲಿ ಸುವಾರ್ತೆ ಸಾರಲು ಅಸಾಧ್ಯ ಎಂದು ನಿಮಗೆನಿಸಿದೆ ? ನಿಮ್ಮ ನಗರದಲ್ಲಿರುವ ಯಾವ ಗುಂಪಿನ ಜನರಿಗೆ ಸುವಾರ್ತೆ ಅಭೇಧಕ ಎಂದು ನಿಮಗೆನಿಸಿದೆ ? ಕೆಲವು ಜನರ ಹೃದಯ ತುಂಬಾ ಕಠಿಥಿ, ಸುವಾರ್ತೆಯನ್ನು ಸ್ವೀಕರಿಸುವುದು ಅವರಿಂದ ಸಾಧ್ಯವಿಲ್ಲ ಎಂದು ಯೋಚಿಸಿ ಅವರನ್ನು ನಿರಾಕರಿಸಿದ್ದೀರಾ ? ಇದರಿಂದ ಜನರಿಗೆದುರಾಗಿ ಒಂದೇ ಅಲ್ಲ ದೇವರಿಗೆ ವಿರೋಧವಾಗಿ ತೀರ್ಪನ್ನು ಮಾಡಿದ್ದೀರಿ. ಏಕೆಂದರೆ ದೇವರು ಆ ಗೋಡೆಗಳನ್ನು ಮುರಿಯಲು ಸಾಧ್ಯವಿಲ್ಲ, ಅವರು ಬಲಹೀನರು ಎಂದು ಹೇಳಿದಂತಾಗುತ್ತದೆ.



ಈ ಯೋಚನೆಗಳಿಂದ ದೇವರನ್ನು ಹೀನೈಸುವುದು ನೀವಲ್ಲವೇ ? ದೇವರಿಗೆ ವಿರೋಧವಾಗಿ ನಾವು ಮಾಡುವ ಕೆಲಸಗಳಲ್ಲಿ ಇದು ನಿಕೃಷ್ಟವಾದದ್ದು. ಆದರೆ ಬದಲಾಗಿ ನಾವು ದೇವರಿಗೆ ನೆಲಸಮ ಮಾಡಲು ಅಸಾಧ್ಯವಾದ ಯಾವ ಗೋಡೆಯೂ ಇಲ್ಲ ಎಂಬುದನ್ನು ದೃಢವಾಗಿ ನಂಬಿದಾಗ ನಾವು ದೇವರನ್ನು ಮಹಿಮೆಪಡಿಸಿ, ಆದರಿಸುತ್ತೇವೆ, ಆಗ ಅವರು ನಮ್ಮ ನಂಬಿಕೆಗಳನ್ನು ಈಡೇರಿಸುತ್ತಾರೆ. ಇಂಥಾ ಒಂದು ಮಹಾತ್ಕಾರ್ಯಕ್ಕೆ ನೀವು ಸಾಕ್ಷಿಯಾಗಿರಬೇಕೆಂದು ಪ್ರಾರ್ಥಿಸಿ ಅದನ್ನು ಬರೆದಿಟ್ಟುಕೊಳ್ಳಿ, ಅದು ನೆರವೇರಿದಾಗ, ದೇವರು ಹೇಗೆ ಆ ಗೋಡೆಗಳನ್ನು ಮುರಿದರು ಎಂದು ಬರೆದಿಡಿ. ಆದರಿಂದ ಮುಂದಿನ ಪೀಳಿಗೆ ಅದನ್ನು ಓದಿ ಇನ್ನೂ ಹೆಚ್ಚು ನಂಬಿಕೆ ಪಡೆಯ ಬಹುದು.

ಸಜಿ ಅಲೆಕ್ಸ್ ಕುಟುಂಬದಲ್ಲಿ ಇಂಥಾ ಒಂದು ಮಹಾತ್ಕಾರ್ಯ ನಡೆಯಿತು. ಸಜಿ ಕೇರಳದ ಸಂಪ್ರದಾಯ ಕ್ರೈಸ್ತ ಕುಟುಂಬದಲ್ಲಿ ಬೆಳೆದರು. ಅವರು ಬೆಳೆಯುವಾಗ ಅವರು ಮತ್ತು ಅವರ ಕುಟುಂಬದವರು ಬಹಳ ಕಷ್ಟನಷ್ಟಗಳನ್ನು ಅನುಭವಿಸಿದರು. ಅವರು ಶಾಲೆ ಬಿಟ್ಟಾಗ ಮುಂದೇನು ಮಾಡುವುದು ಎಂದು ತಿಳಿಯದಾದರು. ಅವರ ಸ್ನೇಹಿತ ಕಥೋಲಿಕ ಗುರುಮಠಕ್ಕೆ ಸೇರಿದಾಗ, ಇವರೂ ಅವನ ಜೊತೆ ಗುರುಮಠ ಸೇರಿದರು. ಆದರೆ ಕೆಲವು ವರ್ಷಗಳಾದ ಮೇಲೆ ಇದು ನನಗೆ ಸರಿಯಾದದ್ದಲ್ಲ ಎಂದು ಅರಿತು ಗುರುಮಠ ತ್ಯಜಿಸಿದರು. ತುಂಬಾ ಕಷ್ಟಪಟ್ಟ ಬಳಿಕ ಬೆಂಗಳೂರಿನಲ್ಲಿ ಕೆಲಸ ಸಿಕ್ಕಿ ಅಲ್ಲಿ ಒಬ್ಬರು ಅವರನ್ನು ಸಭೆಗೆ ಆಹ್ವಾನಿಸಿದರು. ಸತ್ಯವೇದವನ್ನು ಕಲಿಯುವಾಗ ದೇವರು ತನ್ನ ಜೀವನಕ್ಕೆ ಇಟ್ಟ ಯೋಜನೆಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡ ಅವರೊಬ್ಬ ಶಿಷ್ಯರಾದರು. ಆದರೆ ಅವರ ಕುಟುಂಬ ತುಂಬಾ ವಿರೋಧಿಸಿತು. ಅವರು ಕುಟುಂಬದ ಮೊದಲನೇ ಮಗ ಆದ್ದರಿಂದ ಕುಟುಂಬದ ಪೂಶಣೆ ಇವರ ಮೇಲಿತ್ತು. ಅವರ ತಾಯಿಗೆ ಇವನು ಇನ್ನು ಮೇಲೆ ನಮ್ಮನ್ನು ಸಾಕಲಾರ ಎಂಬ ಭಯವಾಯಿತು. ಶಿಷ್ಯನಾದ ಸಮಯದಿಂದ ಅವರ ಕುಟುಂಬದ ಪ್ರತಿಯೊಬ್ಬ ಸದಸ್ಯನೂ ರಕ್ಷಣೆ ಹೊಂದಬೇಕೆಂದು ಪ್ರಾರ್ಥಿಸಲು ಪ್ರಾರಂಭಿಸಿದರು. ಅವರ ತಮ್ಮ ಸೋಜನ್ ಕೆಲಸ ಹುಡುಕಿ ಬಂದಾಗ ಇವನೊಂದಿಗಿದ್ದು ಕೆಲಸ ಸಿಕ್ಕ ಮೇಲೆ ಅವನೂ ಶಿಷ್ಯನಾದನು. ಸಜಿ 1992ರಲ್ಲಿ ಕೊಚ್ಚಿನ್ ಸುವಾರ್ತೆ ಸಾರುವ ಗುಂಪಿನೊಂದಿಗೆ ಹೋದನು. ಕೂಡಲೇ ಅವನ ತಂಗಿ ಸೇಜಿ ಕೊಚಿನ್‌ನಲ್ಲಿ ಶಿಷ್ಯಳಾದಳು. ಸಜಿ ಕೊಚ್ಚಿನ್‌ನಲ್ಲಿ ಶೀಬಾ ಎಂಬವಳನ್ನು ಮದುವೆಯಾದನು. ನಂತರ ಅವನ ತಮ್ಮ ಬಿನೂ ಶಿಷ್ಯನಾದನು. ಆಗಲೂ ಅವರ ಕುಟುಂಬದ ಬೇರೆ ಸದಸ್ಯರೂ ಶಿಷ್ಯರಾಗಬೇಕೆಂದು ಸಜಿ ಪ್ರಾರ್ಥನೆ ಮುಂದುವರಿಸಿದನು. ಅವರ ತಮ್ಮ ಬಿಜು ಮ್ತು ಅವನ ಹೆಂಡತಿ ಸಿಸಿಜಾ, ಸಜಿ ಮತ್ತು ಸೋಜನ್ ಕೊಚ್ಚಿನ್‌ನಲ್ಲಿ ಕಟ್ಟುತ್ತಿದ್ದ ಮನೆಗೆ ಸಹಾಯಮಾಡಲು ಬಂದವರು, ಅಲ್ಲೇ ಉಳಿದು ಅವರೂ ಶಿಷ್ಯರಾದರು. ಇದನ್ನೆಲ್ಲಾ ಕಂಡು ಸಜಿ ತಾಯಿ ಲೀಲಮ್ಮನವರಿಗೆ ಸಭೆಯ ಬಗ್ಗೆ ಬಹಳ ಕುತೂಹಲವೆನಿಸಿತು, ಆದರೆ ಅವರಿದ್ದ ಊರು ಕಾನೂರಿನಲ್ಲಿ ಸಭೆಯಿರಲಿಲ್ಲ. ಆದಕ್ಕಾಗಿ ಇಡೀ ಕುಟುಂಬ ಪ್ರಾರ್ಥಿಸಿತು, ಮತ್ತು 2012ರಲ್ಲಿ ಕಾನೂರಿನಲ್ಲಿ ಸಭೆ ಪ್ರಾರಂಭವಾಯಿತು. ಅವರ ತಾಯಿಗೆ

ಶಿಷ್ಯಳಾಗಲು ಎಷ್ಟು ಆಸೆಯಿತೆಂದರೆ. ಸಭೆ ಕೂಟಗಳಿಗೆ 6 ಗಂಟೆ ಅವಳ ಹಳ್ಳಿಯಿಂದ ಪ್ರಯಾಥಿ ಮಾಡಿ ಬರುತ್ತಿದ್ದಳು. ಆದರೆ ಅವರ ತಂದೆಗೆ ಇದೆಲ್ಲಾ ಆಗುತ್ತಿರಲಿಲ್ಲ. ಅವರು ಕುಡಿತಕ್ಕೆ ದಾಸರಾಗಿದ್ದರು. ಅವರಿಗೆ ಯೇಸುವನ್ನು ಹಿಂಬಾಲಿಸುವ ಆಸೆಯಿರಲಿಲ್ಲ. ಆದರೆ 2013ರಲ್ಲಿ ತುಂಬಾ ಕಾಯಿಲೆಯಿಂದ ಆಸ್ಪತ್ರೆಯಲ್ಲಿದ್ದರು. ಆಗ ಕಾನೂರಿನ ಶಿಷ್ಯರು ತುಂಬಾ ಪ್ರೀತಿಯಿಂದ ಅವರನ್ನು ನೋಡಿಕೊಂಡು, ಪ್ರಾ ್ ಸಿ ಅವರ ಸೇವೆಮಾಡಿದರು ಆದರಿಂದ ಅವರ ತಂದೆ ಮನೆಸ್ಸಾಂತರ ಹೊಂದಿ ದಿಕ್ಷಾಸ್ನಾನ ಪಡೆದರು. ಹಾಗೆ ಅವರ ಇಡೀ ಕುಟುಂಬ ರಕ್ಷಣೆ ಹೊಂದಿತು. ಸೋಜನ್‌ನ ಮಗಳು 2014ರಲ್ಲಿ ದೀಕ್ಷಾಸ್ನಾನ ಪಡೆದಾಗ ಮುಂದಿನ ಪೀಳಿಗೆ ರಕ್ಷಣೆ ಹೊಂದಲು ನಾಂದಿಯಾಯಿತು.

## ದಿನ -11

## ಆಕಾಶದ ಸೂರ್ಯ, ಚಂದ್ರ, ನಕ್ಷತ್ರಗಳನ್ನು ತಿರುಗಿಸುವ ದೇವರ ಕೈ

ಯೆಹೋಶುವ 10:1–4

ಅಮೋರಿಯರ 5 ಅರಸರು ಇಸ್ರಾಯೇಲರ ವಿರುದ್ದ ಯುದ್ಧಮಾಡಲು ಜೊತೆಸೇರಿದರು. ಆದರೆ ದೇವರು ಇಸ್ರಾಯೇಲರಿಗೆ ವಾಗ್ದಾನ ಮಾಡಿದ ದೇಶದೊಳಗಿದ್ದ ಎಲ್ಲಾ ಸ್ಥಳಗಳನ್ನು ಗೆಲ್ಲಲು ಸಹಾಯ ಮಾಡಿದರು. ಜೊತೆಯಾಗಿ ಸೇರಿದ ಆ 5 ಅರಸರನ್ನು ದೇವರು ಭಯಗೊಳಿಸಿದರು ಏಕೆಂದರೆ ಜೊತೆಯಾಗಿ ಸೇರಿದರೆ ಇಸ್ರಾಯೇಲರನ್ನು ಸೋಲಿಸಬಹುದು ಎಂದು ಅವರು ಎಣಿಸಿದ್ದರು.

ಆದರೆ ಅಲ್ಲಿ ವಾಸವಾಗಿದ್ದ ಗಿಬ್ಯೋನರು, ಅವರ ನಗರ ಬಹಳ ಮುಖ್ಯವಾದುದ್ದಾಗಿದ್ದರೂ ಸಹ, ತುಂಬಾ ಜಾಥಿತನದಿಂದ ಇಸ್ರಾಯೇಲಿಗೆ ಶರಣಾಗತರಾದರು. (ಯೆಹೋಶುವ 10:2) ಯೆರೂಸಲೇಮಿನ ಅರಸನಾದ ಅದೋನೀಚೆದೆಕನು ಕೇಳಿದಾದ ಬಹು ಭಯಪಟ್ಟನು. ಏಕೆಂದರೆ ಗಿಬ್ಯೋನ್ ರಾಜಪಟ್ಟಥಿಗಳ ಹಾಗೆ ದೊಡ್ಡದಾಗಿತ್ತು. ಇದಲ್ಲದೆ ಅದು ಆಯಿಗಿಂತಲೂ ದೊಡ್ಡದಾಗಿತ್ತು ಮತ್ತು ಅದರ ಮನುಷ್ಯರು ಪರಾಕ್ರಮಶಾಲಿಗಳಾಗಿದ್ದರು).

ಅಮೋರಿಯರ 5 ಅರಸರು ಗಿಬ್ಯೋನಿಗೆ ವಿರುದ್ಧವಾಗಿ ದಂಡಿತ್ತಿ ಹೋದರು ಆಗ ಗಿಬ್ಯೋನರು ಯೆಹೋಶುವನ ಸಹಾಯ ಬೇಡಿದರು. ಯೆಹೋಶುವ ಪ್ರತಿಕ್ರಿಯಿಸಿ ಶತ್ರುಗಳ ವಿರುದ್ದ ತನ್ನ ಸೈನ್ಯವನ್ನು ತಯಾರು ಮಾಡಿದನು.



ಕೂಡಲೇ ದೇವರು ಯೆಹೋಶವನಿಗೆ ಅವರಿಗೆ ಭಯಪಡಬೇಡ, ಅವರನ್ನು ಈಗಾಗಲೇ ನಿನ್ನ ಕೈಗೆ ಒಪ್ಪಿಸಿ ಬಿಟ್ಟದ್ದೇನೆ. ಅದರಲ್ಲಿ ಒಬ್ಬನಾದರೂ ನಿನಗೆದುರಾಗಿ ನಿಲ್ಲಲಾರನು ಎಂದು ಹೇಳಿದರು.

ನಾವು ದೇವರ ಚಿತ್ತದಂತೆ ನಡೆಯಲು ಶುರುಮಾಡಿದಾಗ, ಅದು ಎಷ್ಟು ಕಷ್ಟವಾಗಿದ್ದಾದರೂ ಸರಿ, ದೇವರು ನಮ್ಮ ಜೊತೆಗಿದ್ದು ಅವರ ಬಲಿಷ್ಠ ಕೈಯಿಂದ ನಾವು ಜಯಗಳಿಸಲು ಸಹಾಯಮಾಡುತ್ತಾರೆ.

ಹೇಗೆ ಇಸ್ರಾಯೇಲ್ – ಚಿಕ್ಕ ದೇಶ ಮತ್ತು ಕೆಲವೇ ಸೈನಿಕರೊಡನೆ 5 ದೇಶದ ದೊಡ್ಡ ಸೈನ್ಯವನ್ನು ಗೆಲ್ಲಲು ಸಾಧ್ಯ ? ದೇವರು ನಮಗೋಸ್ಕರ ಯುದ್ಧಮಾಡುವಾಗ ಯಾವುದೂ ಅಸಾಧ್ಯವಲ್ಲ. ಯೆಹೋಶುವ ಮತ್ತು ಅವರ ಸೈನ್ಯದ ಬಲದಿಂದಲ್ಲ. ಆದರೆ ದೇವರ ಕೈ ಆ ಯುದ್ಧದಲ್ಲಿ ಹೋರಾಡಿ ಅವರಿಗೆ ಜಯಕೊಟ್ಟಿತ್ತು.

ಮೊದಲು ದೇವರು ಆ ಸೈನ್ಯವನ್ನೆಲ್ಲಾ ಗಲಿಬಿಲಿ ಮಾಡಿ, ಅವರು ಇಸ್ರಾಯೇಲಿನ ಮುಂದಿನಿಂದ ಓಡಿ ಹೋಗುವಂತೆ ಮಾಡಿದರು ವಚನ 11: ಅವರು ಬೇತ್ ಹೆರೋನಿನಿಂದ ಇಳಿದು ಅಜೇಕದವರೆಗೆ ಇಸ್ರಾಯೇಲಿನ ಮುಂದೆ ಓಡಿಹೋಗುವಾಗ ಅವರ ಮೇಲೆ ಯೆಹೋವನು ಆಕಾಶದಿಂದ ಅವರನ್ನು ಕೊಲ್ಲುವ ದೊಡ್ಡ ಕಲ್ಲುಗಳನ್ನು ಬೀಳಿಸಿದನು. ಇಸ್ರಾಯೇಲರು ಕತ್ತಿಯಿಂದ ಕೊಂದವರಿಗಿಂತ ಕಲ್ಲುಮಳೆಯಿಂದ ಸತ್ತವರೇ ಹೆಚ್ಚಾಗಿದ್ದರು.

ಯಾರು ಇಸ್ರಾಯೇಲರ ಶತ್ರುಗಳ ವಿರುದ್ಧ ಯುದ್ಧಮಾಡಿದವರು ? ದೇವರು ನೈಸರ್ಗಿಕ ಬಲಗಳಿಂದ ಶತ್ರುಗಳನ್ನು ಸೆದೆಬಡಿಯುವುದು ಇದೇ ಮೊದಲನೇ ಸಲವಲ್ಲ. ದೇವರು ತಮ್ಮ ನಿಯಂತ್ರಥಿದಲ್ಲಿರುವ ನೈಸರ್ಗಿಕ ಬಲಗಳನ್ನು ಉಪಯೋಗಿಸಿ, ಕೆಟ್ಟ ದೇಶಗಳನ್ನು ಸೆದೆಬಡಿದು ನಾಶಮಾಡಿರುವ ಘಟಣೆಗಳನ್ನು ನೋಡಿರಿ. ಅವರ ಉತ್ಕೃಷ್ಟ ಕಾರ್ಯಗಳಿಗಾಗಿ ಅವರನ್ನು ಸ್ತುತಿಸಿರಿ. ಆದರಿಂದ ದೇವರ ರಕ್ಷಣೆ ಕೊಡುವ ಕೈಯಲ್ಲಿ ನಿಮ್ಮ ಭರವಸೆಯಿಟ್ಟು ನಿಮ್ಮ ನಂಬಿಕೆ ಬೆಳಿಸಿರಿ.

ಈ ಕತೆ ಇಲ್ಲೆ ಮುಗಿಯಲಿಲ್ಲ ವಚನ 12:15 ಓದಿ.

ಯೆಹೋವನು ಅಮೋರಿಯರನ್ನು ಇಸ್ರಾಯೇಲರ ಕೈಯಲ್ಲಿ ಒಪ್ಪಿಸಿಕೊಡುವ ಆ ದಿನದಲ್ಲಿ ಯೆಹೋಶುವನು ಯೆಹೋವನ ಸಂಗಡ ಮಾತನಾಡಿ, ಇಸ್ರಾಯೇಲಿನ ಮುಂದೆ ಸೂರ್ಯನೇ, ನೀನು ಗಿಬ್ಯೋನಿನಲ್ಲಿಯೂ ಚಂದ್ರನೇ, ನೀನು ಅಯ್ಯಾಲೋನ್ ಕಣಿವೆಯಲ್ಲಿಯೂ ಸ್ಥಿರವಾಗಿ ನಿಂತಿರು ಎಂದನು. 13 ಆದ್ದರಿಂದ ಜನಾಂಗವು ತಮ್ಮ ಶತ್ರುಗಳಿಗೆ ಮುಯ್ಯಿಗೆ ಮುಯ್ಯಿ ತೀರಿಸುವವರೆಗೆ ಸೂರ್ಯ ಚಂದ್ರರು ನೆಲೆಯಾಗಿ ನಿಂತಿದ್ದರು. ಇದು ಯಾಷಾರಿನ ಪುಸ್ತಕದಲ್ಲಿ

ಬರೆದಿರಲಿಲ್ಲವೋ ? ಹಾಗೆಯೇ ಸೂರ್ಯನು ಅಸ್ತಮಿಸಲು ತ್ವರೆಮಾಡದೆ ಹೆಚ್ಚುಕಡಿಮೆ ಒಂದು ದಿವಸ ಪೂರ್ತಿ ಆಕಾಶದ ಮಧ್ಯದಲ್ಲಿ ನಿಂತಿದ್ದನು. 14 ಯೆಹೋವನು ಒಬ್ಬ ಮನುಷ್ಯನ ಮಾಡನ್ನು ಕೇಳಿದಂಥಾ ಆ ದಿವಸಕ್ಕೆ ಸಮಾನವಾದ ದಿವಸವೂ ಪೂರ್ವದಲ್ಲಿಯಾ ಇಲ್ಲ, ಮುಂದೆಯೂ ಇಲ್ಲ. ಏಕೆಂದರೆ ಯೆಹೋವನು ಇಸ್ರಾಯೇಲಿಗೋಸ್ಕರ ಯುದ್ಧಮಾಡಿದನು. 15. ತರುವಾಯ ಯೆಹೋಶುವನು ಸಮಸ್ತ ಇಸ್ರಾಯೇಲಿನ ಕೂಡ ಗಿಲ್ಗಾಲಿನಲ್ಲಿರುವ ಪಾಳೆಯಕ್ಕೆ ಹಿಂತಿರುಗಿದನು.

ದೇವರು ಮಾಡಿದ ಕಾರ್ಯಗಳಲ್ಲಿ ಇದೂ ತುಂಬಾ ಅದ್ಭುತವಾದುದು. ಅಮೋರಿಯರ ವಿರುದ್ಧ ಕದನ ನಡೆಯುತ್ತಿರುವಾಗ, ಶತ್ರುಗಳನ್ನು ಸಂಹರಿಸಲು ಇನ್ನೂ ಸ್ವಲ್ಪ ಸಮಯ ಬೇಕಾಗಿದೆಯೆಂದು ಯೆಹೋಶುವನು ಅರಿತನು. ಅವನು ಸೂರ್ಯನು ಅಸ್ತಮಿಸಲು ತಡ ಮಾಡಬೇಕೆಂದು ಕೇಳಿದನು. ಯಾರು ಈ ರೀತಿಯಾಗಿ ಮಾಡಲು ದಿಟ್ಟತನದಿಂದ ಮುಂದೆಬಗಲಾರರು. ಆದರೆ ಇಡೀ ನಿಸರ್ಗ ದೇವರ ನಿಯಂತ್ರಥಿದಲ್ಲಿದೆ ಎಂದು ಯೆಹೋಶುವ ಬಲವಾಗಿ ನಂಬಿದ್ದನು. ಅವನ ಪ್ರಾರ್ಥನೆ ನೋಡಿ ಆದರಿಂದ ನಾವೂ ಕಲಿಯೋಥಿ ಇಸ್ರಾಯೇಲರ ಮುಂದೆ ಯೆಹೋಶುವ ದೇವರಿಗೆ ಹೇಳಿದ್ದೇನೆಂದರೆ. ಇಸ್ರಾಯೇಲಿನ ಮುಂದೆ ಸೂರ್ಯನೆ, ನೀನು ಗಿಬ್ಯೋನಿನಲ್ಲಿಯೂ ಚಂದ್ರನೇ, ನೀನು ಅಯ್ಯಲೋನ್ ಕಣಿವೆಯಲ್ಲಿಯೂ ಸ್ಥಿರವಾಗಿ ನಿಂತಿರು ಎಂದನು. ದೇವರೇ ದಯಮಾಡಿ ನಿಲ್ಲಿಸು ಎಂದು ಅವನು ಬೇಡುತ್ತಿಲ್ಲ. ಆದರೆ ದೇವರ ಬಲದ ಮೇಲೆ ಅವನಿಗೆ ಇರುವ ವಿಶ್ವಾಸ ನೋಡಿರಿ.

ಯೆಹೋಶುವನ ವಿಶ್ವಾಸ ನೋಡಿ ದೇವರಿಗೆ ಅತೀ ಮೆಚ್ಚುಗೆಯಾಯಿತು, ಮತ್ತು ಅವನ ಮಾತಿನ ಪ್ರಕಾರ ಹೆಚ್ಚುಕಡಿಮೆ ಒಂದು ದಿವಸವಿಡೀ ಹಗಲನ್ನು ವಿಸ್ತರಿಸಿದನು.

ದೇವರು ಹೇಗೆ ಇದನ್ನು ಮಾಡಿದರು ? ಇದು ಹೇಗಾಯಿತೆಂದು ನಮಗೆ ವಿವರಣೆ ನೀಡಲು ಅಸಾಧ್ಯ ಆದರೆ ಒಂದಂತೂ ನಿಜ, ಈ ಅದ್ಬುತ ಖಂಡಿತವಾಗಿಯೂ ನಡೆಯಿತು. ಜಗತ್ತನ್ನೇ ತನ್ನ ನಿಯಂತ್ರಥಿದಲ್ಲಿಟ್ಟಿರುವ ದೇವರನ್ನು ನಾವು ಆರಾಧಿಸುತ್ತಿರುವೆವೆಂದು ನಾವು ನಂಬುವುದು ಅತೀ ಮುಖ್ಯ ಅವರಲ್ಲಿ ನಂಬಿಕೆಯಿಟ್ಟು, ದಿಟ್ಟತನದಿಂದ ನಿಮಗೆ ಬೇಕಾದುದನ್ನು ಕೇಳಿ (ಯೆಹೋಶುವನ ಹಾಗೆ) ನಂಬಿಕೆಯಿಂದ, ವಿಶ್ವಾಸದಿಂದ ಅಸಾಧ್ಯವಾದುದನ್ನೇ ದೇವರಿಂದ ಕೇಳಿರಿ.

ನಿಮ್ಮ ಅದ್ಭುತ ಪ್ರಾರ್ಥನೆಗಳನ್ನು ಬರೆಯಿರಿ ಅವು ಈಗಾಗಲೇ ನೆರವೇರಿದವು ಎಂದು ನಂಬಿರಿ (ಮಾರ್ಕ 11:24) ಉತ್ತರ ಸಿಕ್ಕ ಮೇಲೆ ಅವುಗಳನ್ನು ಬರೆದು, ದೇವರನ್ನು ಮಹಿಮೆ ಪಡಿಸಿರಿ ಮತ್ತು ಆದರ ಬಗ್ಗೆ ಇತರರೊಡನೆ ಹೇಳಿಕೊಳ್ಳಿರಿ.



## ದಿನ -12

## ದೇವರು ವಾಗ್ದಾನಗಳನ್ನು ನೆರವೇರಿಸುವನು

ಹಿಂದಿನ ಕೆಲವು ಪಾಠಗಳಲ್ಲಿ ದೇವರ ವಾಗ್ದಾನಗಳ ಬಗ್ಗೆ ನಾವು ಓದಿದೆವು. ಆ ವಾಗ್ದಾನಗಳು ತುಂಬಾ ದೊಡ್ಡವು ಎಂದು ನಮಗೆನಿಸಿದೆ. ಆ ವಾಗ್ದಾನಗಳನ್ನು ನೋಡಿದಾಗ ನಮಗೆ ಸಂಶಯವಾಗಲೂ ಬಹುದು ದೇವರಿಗೆ ಇಷ್ಟೆಲ್ಲಾ ಮಾಡಲು ಸಾಧ್ಯವೇ ?
ದೇವರಲ್ಲಿ ನಂಬಿಕೆಯಿಟ್ಟವರಿಗೆ, ಅವರ ಜೀವನದಲ್ಲಿ ದೇವರು ಮಾಡಿದ ವಾಗ್ದಾನಗಳು ನೆರವೇರಿರುವ ಸಂಧರ್ಭಗಳನ್ನು ನೋಡಬಹುದು. ಅಂಥಾ ಜನರಲ್ಲಿ ಯೆಹೋಶುವನೂ ಒಬ್ಬ ಅವನ ಸುತ್ತಲಿರುವ ಜನ ಭಯದಿಂದ ತತ್ತರಿಸಿತ್ತಿರುವಾಗ ಅವನು ದೇವರ ಬಲಿಷ್ಠಕ್ರೆಯ ಮೇಲೆ ಪೂರ್ಥಿ ಭರವಸೆಯಿಟ್ಟನು, ಮಾತ್ರವಲ್ಲ, ಯೆಹೋಶುವ ಮತ್ತು ಕಾಲೇಬ ದೇವರನ್ನು ಘನಪಡಿಸಿದರು ದೇವರು ಇಸ್ರಾಯೇಲರನ್ನು ಈಜಿಪ್ಟ್ ದೇಶದಿಂದ ಹೊರತಂದು ಕಾನಾನ್ ದೇಶದಲ್ಲಿ ಅವರು ನೆಲೆಸಬೇಕೆಂದು ವಾಗ್ದಾನ ಮಾಡಿದರು. ಮರುಭೂಮಿಯಲ್ಲಿ ಕಾನಾನ್ ದೇಶದ ಹತ್ತಿರ ಇರುವಾಗ ದೇವರು ಮೋಶೆಗೆ 12 ಜನ ಗೂಢಾಚಾರರನ್ನು ದೇಶವನ್ನು ಸುತ್ತಿಬರಲು ಕಳಿಸು ಎಂದರು. ಆ ದೇಶ ಹಾಲು ಜೇನು ಹರಿಯುವ ಸಮೃದ್ಧ ದೇಶ ಎಂದು ಅರಿತರೂ. 10 ಜನ ಗೂಢಾಚಾರರು ದೇವರು ಆ ದೇಶವನ್ನು ವಶಪಡಿಸಲು ಸಹಾಯ ಮಾಡಲಾರರು ಎಂದು ನಂಬಿದರು. ಆದರೆ ಯೆಹೋಶುವ ಮತ್ತು ಕಾಲೇಬ ಮಾತ್ರ ದೇವರು ಕೊಟ್ಟ ವಾಗ್ದಾನವನ್ನು ನೆರವೇರಿಸುವರು ಎಂಬುದನ್ನು ನಂಬಿದರು ಆ 10 ಜನ ಗೂಢಾಚಾರರು ಜನರ ಹೃದಯಗಳನ್ನು ದುರ್ಬಲಗೊಳಿಸಿ, ಆ ಜನರು ತಾವು ಅನಾತ್ಯರ ಕೈಯಲ್ಲಿ ಸಾಯುತ್ತೇವೆ ಎಂದು ಭಯದಿಂದ, ದೇವರ ಮತ್ತು ಮೋಶೆಯ ವಿರುದ್ಧ ದಂಗೆಯೆದ್ದರು.

ಅರಣ್ಯಕಾಂಡ 14:6–9, ಇದಲ್ಲದೆ ದೇಶವನ್ನು ಸಂಚರಿಸಿ ನೋಡಿದವರಲ್ಲಿದ್ದ, ನೂನನ ಮಗ ಯೆಹೋಶುವನೂ ಯೆಪುನ್ನೆಯ ಮಗ ಕಾಲೇಬನೂ ತಮ್ಮ ವಸ್ತ್ರಗಳನ್ನು ಹರಿದುಕೊಂಡು 7 ಇಸ್ರಾಯೇಲರ ಸಮಸ್ತ ಜನಸಮೂಹಕ್ಕೆ ಸಂಚರಿಸಿ ನೋಡುವುದಕ್ಕೆ ನಾವು ದಾಟಿಹೋದ ದೇಶವು ಅತ್ಯುತ್ತಮವಾದ ದೇಶವೇ. 8. ಯೆಹೋವನು ನಮ್ಮನ್ನು ಇಷ್ಟಪಟ್ಟರೆ ಹಾಲೂ, ಜೇನೂ ಹರಿಯುವ ದೇಶವಾಗಿರುವ ಆ ದೇಶಕ್ಕೆ ನಮ್ಮನ್ನು ಬರಮಾಡಿ ಅದನ್ನು ನಮಗೆ ಕೊಡುವನು. 9. ನೀವಾದರೋ ಯೆಹೋವನಿಗೆ ತಿರುಗಿ ಬೀಳಬೇಡಿರಿ. ಆ ದೇಶದ ಜನರಿಗೆ ಭಯಪಡಬೇಡಿರಿ. ಏಕೆಂದರೆ ಅವರನ್ನು ನುಂಗಿ ಬಿಡುವೆವು. ಅವರ ಆಶ್ರಯವು ಅವರ ಬಳಿಯಿಂದ ಹೋಯಿತು. ಯೆಹೋವನು ನಮ್ಮ ಸಂಗಡ ಇದ್ದಾನೆ, ಅವರಿಗೆ ಭಯಪಡಬೇಡಿರಿ ಎಂದನು.

ಯೆಹೋಶುವ ಮತ್ತು ಕಾಲೇಬರಿಗೆ ದೇವರ ಮೇಲೆ ಎಷ್ಟು ನಂಬಿಕೆಯಿತ್ತೆಂದರೆ, ಒಂದು ಲಕ್ಷ ಕೋಟಿ ನಂಬಿಕೆಯಿಲ್ಲದ, ಗೊಥಿಗುಟ್ಟುವ, ಜನಸಮುದಾಯದ ಮುಂದೆ ಧೈರ್ಯದಿಂದ ಅವರು ದೇವರು ಖಂಡಿತ ತಮ್ಮ ವಾಗ್ದಾನಗಳನ್ನು ನೆರವೇರಿಸುವರು ಎಂದು ಸಾರಿದರು.

ದೇವರು ಯೆಹೋಶುವ ಮತ್ತು ಕಾಲೇಬರನ್ನು ಬಹುವಾಗಿ ಮೆಚ್ಚಿದರು, ಆದರೆ ನಂಬಿಕೆಯಿಲ್ಲದ ಇಸ್ರಾಯೇಲರ ಬಗ್ಗೆ ಬಹಳ ಕೋಪಗೊಂಡರು. ಅವರಲ್ಲಿ ನಂಬಿಕೆಯಿಡದ ಕಾರಥಿ, ಇಸ್ರಾಯೇಲರನ್ನು ಶಪಿಸಿ, 40 ವರ್ಷ ಮರುಭೂಮಿಯಲ್ಲಿ ಅಲೆದು ನಾಶವಾಗುವಂತೆ ಮಾಡಿದರು ಯೆಹೋಶುವ ಮತ್ತು ಕಾಲೇಬ ಮಾತ್ರ, ದೇವರಲ್ಲಿ ನಂಬಿಕೆಯಿಟ್ಟಿದ್ದರಿಂದ, ವಾಗ್ದಾನ ಮಾಡಿದ ದೇಶದೊಳಗೆ ಕಾಲಿಟ್ಟರು. ನಂತರ ದೇವರು ಯೆಹೋಶುವನಿಗೆ ಈ ವಾಗ್ದಾನ ಮಾಡಿದರು.

ಯೆಹೋಶುವ 1:3–6 ನಿಮ್ಮ ಪಾದವು ತುಳಿಯುವ ಎಲ್ಲಾ ಸ್ಥಳವನ್ನು ನಾನು ಮೋಶೆಗೆ ಹೇಳಿದ ಹಾಗೆಯೇ ನಿಮಗೆ ಕೊಡುವೆನು. 4. ಮರುಭೂಮಿಯೂ ಈ ಲೆಬನೋನ್ ಮೊದಲುಗೊಂಡು ಯುಫ್ರೆಟಿಸ್ ನದಿಯಿಂದ ದೊಡ್ಡ ನದಿಯವರೆಗೆ ಇರುವ ಹಿತ್ತಿಯರ ದೇಶವೆಲ್ಲಾ ಸೂರ್ಯನು ಅಸ್ತಮಿಸುವ ಕಡೆಗೆ ದೊಡ್ಡ ಸಮುದ್ರದವರೆಗೂ ನಿಮ್ಮ ಮೇರೆಯಾಗಿರುವುದು. 5. ನೀನು ಜೀವಿಸುವ ದಿವಸಗಳಲ್ಲೆಲ್ಲಾ ಯಾವನೂ ನಿನ್ನ ಮುಂದೆ ನಿಲ್ಲಲಾರನು. ನಾನು ಮೋಶೆಯ ಸಂಗಡ ಇದ್ದೆ ಹಾಗೆಯೇ ನಿನ್ನ ಸಂಗಡ ಇರುವೆನು. ನಾನು ನಿನ್ನನ್ನು ಮರೆಯುವುದಿಲ್ಲ. ನಿನ್ನನ್ನು ತೊರೆಯುವುದಿಲ್ಲ. 6. ಬಲವಾಗಿರು, ದೃಢವಾಗಿರು ಏಕೆಂದರೆ ಈ ಜನರಿಗೆ ನಾನು ಅವರ ತಂದೆಗಳಿಗೆ ಕೊಡುವೆನೆಂದು ಆಣೆ ಇಟ್ಟ ದೇಶವನ್ನು ನೀನು ಭಾದ್ಯತೆಯಾಗಿ ಹಂಚಿಕೊಡುವೆ.

ದೇವರು ಹೇಗೆ ವಾಗ್ದಾನ ನೆರವೇರಿಸಿದರು ಎಂದು ನೋಡಿ.
ಯೆಹೋಶುವ 11:16–23. ಜನರು ಭಯಪಟ್ಟ ಅನಾಕ್ಯರಿಗೆ ಏನಾಯಿತು (ಅರಣ್ಯಕಾಂಡ 13:32–33) ನಾವು ಸಂಚರಿಸಿ ನೋಡುವುದಕ್ಕೆ ಹಾದುಹೋದ ದೇಶವು ತನ್ನಲ್ಲಿ ವಾಸವಾಗಿರುವವರನ್ನು ತಿಂದುಬಿಡುವ ದೇಶವಾಗಿದೆ. ನಾವು ಅದರಲ್ಲಿ ನೋಡಿದ ಜನರೆಲ್ಲಾ ಮಹಾಶರೀರದ ಮನುಷ್ಯರು. 33. ಅಲ್ಲಿ ನೆಫೀಲಿಯರನ್ನು ಅಂದರೆ ರಾಕ್ಷಸಾಕಾರದ ಸಂತಾನವನ್ನು ಅನಾತ್ಯರ ಮಕ್ಕಳನ್ನು ಕಂಡೆವು. ನಮ್ಮ ದೃಷ್ಟಿಗೆ ನಾವು ಮಿಡಿತೆಗಳ ಹಾಗೆ ಇದ್ದೆವು. ಅದೇ ಪ್ರಕಾರ ಅವರ ದೃಷ್ಟಿಗೂ ಇದ್ದೆವು ಎಂದರು.

ದೇವರನ್ನು ನಂಬಿದ ಕಾರಥಿ ಯೆಹೋಶುವ ಮತ್ತು ಕಾಲೇಬ ಮಾತ್ರ ದೇವರ ವಾಗ್ದಾನಗಳು ನೆರವೇರುವುದನ್ನು ನೋಡಲು ಆಶೀರ್ವದಿಸಲ್ಪಟ್ಟರು.



ಯೆಹೋಶುವ 14:12–15, ಆದ್ದರಿಂದ ಯೆಹೋವನು ಆ ದಿವಸದಲ್ಲಿ ಹೇಳಿದ ಈ ಬೆಟ್ಟವನ್ನು ಈಗ ನನಗೆ ಕೊಡು ಏಕೆಂದರೆ ಅಲ್ಲಿ ಅನಾಕ್ಯರು ಇದ್ದಾರೆಂದೂ ಗೋಡೆಗಳುಳ್ಳ ದೊಡ್ಡಪಟ್ಟಣಗಳುಂಟೆಂದೂ ನೀನು ಆ ದಿವಸದಲ್ಲಿ ಕೇಳಿದ್ದಿ. ಯೆಹೋವನು ನನ್ನ ಸಂಗಡ ಇದ್ದರೆ ಯೆಹೋವನು ಹೇಳಿದ ಪ್ರಕಾರವೇ ನಾನು ಅವರನ್ನು ಹೊರಡಿಸಲು ಶಕ್ತನಾಗಿರುವೆನು. ಎಂದನು 13. ಆಗ ಯೆಹೋಶುವನು ಯೆಪುನ್ನೆಯ ಮಗ ಕಾಲೇಬನನ್ನು ಆಶೀರ್ವದಿಸಿ ಅವನಿಗೆ ಹೆಬ್ರೋನನ್ನು ಬಾಧ್ಯವಾಗಿ ಕೊಟ್ಟನು. 14. ಹೀಗೆಯೇ ತೆನೆಜ್ಯನಾದ ಯೆಪುನ್ನೆಯ ಮಗ ಕಾಲೇಬನು ಇಸ್ರಾಯೇಲಿನ ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದ ಹಿಂಬಾಲಿಸಿದ ಕಾರಥಿ, ಹೆಬ್ರೋನ್ ಇಂದಿನವರೆಗೂ ಅವನ ಬಾಧ್ಯತೆಯಾಯಿತು. 15. ಹೆಬ್ರೋನಿನ ಹೆಸರು ಮೊದಲು ಕಿರ್ಯತ್ ಅರ್ಬ. ಈ ಹೆಸರು ಅನಾಕ್ಯರಲ್ಲಿ ಒಬ್ಬ ದೊಡ್ಡ ಮನುಷ್ಯನದು. ದೇಶವು ಯುದ್ಧವಿಲ್ಲದೆ ಶಾಂತವಾಗಿತು.

ದೇವರು ಕೊಟ್ಟ ವಾಗ್ದಾನಗಳನ್ನು ನೆರವೇರಿಸಿದರೇ ? ಯೆಹೋಶುನನ ಸ್ವಂತ ಸಾಕ್ಷಿಯಿಂದ ಕೇಳೋಣ. ಯೆಹೋಶುವ 21:43–45, ಯೆಹೋವನು ಅವರ ಪಿತೃಗಳಿಗೆ ಕೊಡುವೆನೆಂದು ಆಣೆ ಇಟ್ಟ ದೇಶವನ್ನೆಲ್ಲಾ ಇಸ್ರಾಯೇಲಿಗೆ ಕೊಟ್ಟನು. ಅವರು ಅದನ್ನು ಸ್ವಾಧೀನಮಾಡಿಕೊಂಡು ಅದರಲ್ಲಿ ವಾಸವಾಗಿದ್ದರು. 44. ಯೆಹೋವನು ಅವರ ತಂದೆಗಳಿಗೆ ಆಣೆ ಇಟ್ಟ ಪ್ರಾಕಾರವೆಲ್ಲಾ ಅವರ ಸುತ್ತಲೂ ಅವರಿಗೆ ವಿಶ್ರಾಂತಿ ಕೊಟ್ಟನು. ಅವರ ಎಲ್ಲಾ ಶತ್ರುಗಳಲ್ಲಿ ಒಬ್ಬನಾದರೂ ಅವರ ಮುಂದೆ ನಿಲ್ಲಲಿಲ್ಲ. ಅವರ ಶತ್ರುಗಳನ್ನೆಲ್ಲಾ ಯೆಹೋವನು ಅವರ ಕೈಗಳಿಗೆ ಒಪ್ಪಿಸಿದನು. 45. ಯೆಹೋವನು ಇಸ್ರಾಯೇಲರಿಗೆ ಹೇಳಿದ ಒಳ್ಳೆಯ ವಾಗ್ದಾನಗಳಲ್ಲಿ ಒಂದಾದರೂ ಬಿದ್ದುಹೋಗಲಿಲ್ಲ. ಎಲ್ಲಾ ನೆರವೇರಿತು.

ದೇವರು ವಿಶ್ವಾಸರ್ಹರು ಮತ್ತು ಅವರಿಗೆ ಕೊಟ್ಟ ವಾಗ್ದಾನಗಳನ್ನು ನೆರವೇರಿಸುವ ಶಕ್ತಿಯಿದೆ ಎಂದು ನೀವು ನಂಬಿದ್ದೀರಾ ? ದೇವರು ಮಾಡಿದ ವಾಗ್ದಾನಗಳು ನಿಮಗೆ ನೆನಪಿದೆಯೇ ? ಈ ಪ್ರಪಂಚದಲ್ಲಿರುವ ಜನರಿಗೆಲ್ಲಾ ಜೀವನದಲ್ಲಿರುವ ಒಂದು ಗುರಿಯೇನೆಂದರೆ ಸಂತೋಷದಿಂದಿರುವುದು. ಉಲ್ಲಾಸದಿಂದಿರುವುದಕ್ಕೆ. ಒಂದು ಉತ್ತಮ ದಾರಿ (ಸತ್ಯವೇದದಲ್ಲಿ ಸಂತೋಷ ಎನ್ನುವುದಕ್ಕಿಂತ ಉಲ್ಲಾಸ ಪದವು ಹೆಚ್ಚಿಗೆ ಉಪಯೋಗಿಸಲಾಗಿದೆ) ಸತ್ಯವೇದದಲ್ಲಿ ದೇವರು ಕೊಟ್ಟಿರುವ ವಾಗ್ದಾನಗಳನ್ನು ಜ್ಞಾಪಿಸಿ ಆ ವಾಗ್ದಾನಗಳು ನಮ್ಮ ಜೀವನದಲ್ಲಿ ನೆರವೇರುತ್ತವೆ ಎಂದು ಭರವಸೆಯಿಟ್ಟು ಅವು ನೆರವೇರುವ ತನಕ ನಿರೀಕ್ಷೆಯಿಂದ ಕಾಯಬೇಕು.

ಸತ್ಯವೇದದಲ್ಲಿ ದೇವರು ಕೊಟ್ಟಿರುವ ವಾಗ್ದಾನಗಳನ್ನು ಕಲಿಯಿರಿ ಮತ್ತು ಒಂದು ಪಟ್ಟಿಮಾಡಿ ನಿಮಗೆ ಸಮಂಜಸವಾದ ವಾಗ್ದಾನಗಳನ್ನು ಆರಿಸಿ ಆ ವಾಗ್ದಾನಗಳನ್ನು ನಿಮ್ಮ ಜೀವನದಲ್ಲಿ ನೆರವೇರಿಸಿ ಎಂದು ದೇವರನ್ನು ಪ್ರಾ ್ಥಿಸಿ. ಅವು ನೆರವೇರುತ್ತವೆ ಎಂದು ನಂಬಿ ಅದಕ್ಕಾಗಿ ಕಾಯಿರಿ. ಅವು ನೆರವೇರಿದ

ಮೇಲೆ ಸಂತೋಷದಿಂದ ದೇವರನ್ನು ಸ್ತುತಿಸಿ, ಆ ಅದ್ಭುತ ಕತೆಗಳನ್ನು ನಿಮ್ಮ ಸುತ್ತಲಿರುವ ಎಲ್ಲಾರೊಡನೆ ಹೇಳಿಕೊಳ್ಳಿ. ಅದು ನಿಮ್ಮನ್ನು ಉಲ್ಲಾಸಗೊಳಿಸುವುದು ಮಾತ್ರವಲ್ಲದೆ ದೇವರನ್ನು ಮಹಿಮೆ ಪಡಿಸುವುದು. ಅದುವೇ ನಮ್ಮ ಜೀವನದ ಅಂತಿಮ ಉದ್ದೇಶ.

## ದಿನ -13

## ದುರ್ಬಲರನ್ನು ಆರಿಸಿ ದೇವರ ಕೈಯಿಯ ಮಹತ್ವವನ್ನು ಪ್ರಕಟಗೊಳಿಸುವುದು

ಸತ್ಯವೇದದಲ್ಲಿ ನಾವು ಯಾವಾಗಲೂ ನೋಡುವುದೇನೆಂದರೆ, ದೇವರು ಬಹಳ ದುರ್ಬಲರಾದ ಸಾಧಾರಥಿ ಮನುಷ್ಯರನ್ನು ಆರಿಸಿ ಅವರ ಮುಖಾಂತರ ತನ್ನ ಮಹತ್ಕಾರ್ಯಗಳನ್ನು ಮಾಡಿ ಅದರಿಂದ ಅವರು ಮಹಿಮೆ ಹೊಂದಬೇಕೆಂದು ಹಾರೈಸುತ್ತಾರೆ.

ದಾವೀದನಂಥ ಸಣ್ಣ ಹುಡುಗನನ್ನು, ಗೊಲಿಯಾಥನಂಥ ರಾಕ್ಷನನ್ನು ಕೊಲ್ಲಲು ಮತ್ತು ಪಿಲಿಸ್ತಿಯನ್ನರ ಎದುರು ಯುದ್ಧದಲ್ಲಿ ಗೆಲ್ಲಲು ದೇವರು ಆರಿಸಿದರು. ಸಮುವೇಲನೆಂಬ ಚಿಕ್ಕ ಹುಡುಗನನ್ನು, ಎಲಿ ಮತ್ತು ಅವನ ಕುಟುಂಬದವರ ಬಗ್ಗೆ ಪ್ರವಾದನೆ ಮಾಡಿ ಇಸ್ರಾಯೇಲರನ್ನು ದಾರಿ ನೆಡೆಸಲು ಉಪಯೋಗಿಸಿದರು. ಆದಿಕ ಸಂಖ್ಯೆಯ ಪ್ರವಾದಿಗಳು ಸಾಧಾರಥಿ ಮನುಷ್ಯರಾಗಿದ್ದರೂ ಸಹ ಅಸಾಧಾರಥಿ ಪ್ರವಾದನೆಗಳನ್ನು ಮಾಡಿದರು ಮತ್ತು ಇನ್ನೂ ಕೆಲವರು ಅಸಾಮಾನ್ಯ ಅದ್ಭುತಗಳನ್ನು ಮಾಡಿದರು. ಮೋಶೆಯು ವಾಕ್ಚಾತುರ್ಯವಿಲ್ಲದ ಮಂದ ನಾಲಿಗೆಯುಳ್ಳವನಾಗಿದ್ದರೂ ದೇವರು ಅವನ ನಾಲಿಗೆಯಿಂದ ಈಜಿಪ್ಟ್ ದೇಶದಂತ ದೊಡ್ಡ ರಾಜ್ಯವನ್ನು ಶರಣಾಗತರಾಗಿಸಿದನು, ಹೀಗೇ ಈ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. (ಇಬ್ರಿಯ 11ನ್ನು ಓದಿ ತುಂಬಾ ತಿಳಿದುಕೊಳ್ಳಿ)

ನ್ಯಾಯಸ್ಥಾಪಕರು 6:1–6, ಇಸ್ರಾಯೇಲರು ಯೆಹೋವನ ದೃಷ್ಟಿಯಲ್ಲಿ ಕೆಟ್ಟದ್ದನ್ನು ಮಾಡಿದರು. ಆದ್ದರಿಂದ ಯೆಹೋವನು ಅವರನ್ನು 7 ವರುಷ ಮಿದ್ಯಾನ್ಯರ ಕೈಗೆ ಒಪ್ಪಿಸಿಕೊಟ್ಟನು. 2. ಮಿದ್ಯಾನ್ಯರ ಕೈ ಇಸ್ರಾಯೇಲಿಗೆ ವಿರೋಧವಾಗಿ ಬಲವಾದ್ದರಿಂದ ಇಸ್ರಾಯೇಲರು ಮಿದ್ಯಾನ್ಯರ ನಿಮಿತ್ತ ತಮಗೆ ಪರ್ವತಗಳಲ್ಲಿ ಇರುವ ಗುಹೆಗಳನ್ನೂ ಗವಿಗಳನ್ನೂ ಬಲವಾದ ಸ್ಥಾನಗಳನ್ನೂ ಮಾಡಿಕೊಂಡರು. 6. ಇಸ್ರಾಯೇಲರು ಬೀಜ ಬಿತ್ತಿದ ತರುವಾಯ ಮಿದ್ಯಾನ್ಯರೂ ಅಮಲೇಕ್ಯರೂ ಮೂಢಥಿದ ಮಕ್ಕಳೂ ಅವರಿಗೆ ವಿರೋಧವಾಗಿ ಬಂದು ದಂಡಿಳಿದು ಭೂಮಿಯ ಫಲವನ್ನು ಕೆಡಿಸಿ ಇಸ್ರಾಯೇಲಿನ ಆಹಾರವನ್ನೂ ಕುರಿದನಕತ್ತೆಗಳನ್ನೂ ಉಳಿಸಲಿಲ್ಲ – 6. ಆದಕಾರಥಿ ಇಸ್ರಾಯೇಲರು ಮಿದ್ಯನ್ಯರಿಂದ ಬಹಳ ಕುಗ್ಗಿಹೋಗಿ, ಯೆಹೋವನಿಗೆ ಬೇಡಿಕೊಂಡರು.



ಮಿದ್ಯಾನ್ಯರ ದಬ್ಬಾಳಿಕೆಯಿಂದ ಇಸ್ರಾಯೇಲರು ಹೇಗೆ ಸಂಕಟಪಟ್ಟರೆಂಬುದನ್ನು ನೋಡಿ. ಅವರು ಕುಗ್ಗಿಹೋದಾಗ ಎಷ್ಟು ಗೋಳಾಡಿದರೆಂದರೆ ದೇವರು ಒಬ್ಬ ರಕ್ಷಕನನ್ನು ಕಳಿಸಿದರು. ಅವನೇ ಗಿದ್ಯೋನ.

ನ್ಯಾಯಸ್ಥಾಪಕರು 7ನ್ನು ಓದಿ:
ದೇವರು ಹೇಗೆ ಕಾರ್ಯಸಾದಿಸುತ್ತಾರೆ ನೋಡಿ : ಮಿದ್ಯಾನ್ಯರ ಸಂಗಡ ಹೋರಾಡಲು ಸಾವಿರಾರು ಇಸ್ರಾಯೇಲರು ಕೂಡಿ ಬಂದಾಗ, ದೇವರು ಅಧಿಕ ಸಂಖ್ಯೆಯ ಜನರನ್ನು ಮನೆಗೆ ಕಳಿಸಿ ಕೇವಲ 300 ಜನರು ಗಿದ್ಯೋನಿನ ಸಂಗಡ ಹೋಗಿ ಮಿದ್ಯಾನ್ಯರ ದೊಡ್ಡ ದಂಡಿನೊಂದಿಗೆ ಯುದ್ದ ಮಾಡಬೇಕೆಂದು ಹೇಳಿದರು. ಏಕೆ ಅಧಿಕ ಸಂಖ್ಯೆಯ ಜನರನ್ನು ದೇವರು ಮನೆಗೆ ಕೆಳಿಸಿದರು ? ಸಾವಿರಾರು ಜನರ ದಂಡು ಮಿದ್ಯಾನ್ಯರ ದೊಡ್ಡ ದಂಡಿನೊಡನೆ ಯುದ್ಧಮಾಡಿ ಗೆದ್ದಿದ್ದರೆ, ಅವರು ಆ ದಂಡಿಗೇ ವಿಜಯದ ಮಹತ್ವವನ್ನು ಕೊಡುತ್ತಿದ್ದರೇ ವಿನಹ ನಿಜವಾಗಿ ಅವರಿಗೋಸ್ಕರ ಯುದ್ಧ ಮಾಡುವ ದೇವರಿಗೆ ಖಂಡಿತ ವಿಜಯದ ಮಹತ್ವವನ್ನು ಕೊಡುತ್ತಿರಲಿಲ್ಲ. ದೇವರಿಗೆ ನಿಜವಾದ ಮಹಿಮೆ ಸೇರಬೇಕು, ಅದಕ್ಕಾಗಿಯೇ ಇದನ್ನೆಲ್ಲಾ ಮಾಡಿದರು.

ಕೇಲಲ 300 ಜನರ ಗುಂಪು ಮಿದ್ಯಾನ್ಯಾರ ದೊಡ್ಡ ದಂಡಿನೊಂದಿಗೆ ಹೋರಾಡಿ ಗೆಲ್ಲುವುದು ಊಹೆಮಾಡುವುದು ಸಾಧ್ಯವೇ ? ಪ್ರಪಂಚದ ದೃಷ್ಟಿಯಲ್ಲಿ ನೋಡಿದರೆ 300 ಸಾಧಾರಥಿ, ಸೊರಗಿಹೋದ ಜನರು ಯುದ್ಧಮಾಡಿ ಗೆಲ್ಲುವುದು ಊಹಿಸಲೂ ಅಸಾಧ್ಯಾ. ಆದರೆ ದೇವರು ಅವರಿಗೆ ಮಾಡಿದ ವಾಗ್ದಾನ ನೆನಪಿಸಿಕೊಳ್ಳಿ. ದರ್ಮೋಪದೇಶಕಾಂಡ 1:29, ಅವರಿಗೆ ಭಯ ಪಡಬೇಡಿರಿ, ಅವರಿಗೆ ಅಂಜಬೇಡಿರಿ. ನಿಮ್ಮ ಮುಂದೆ ಹೋಗುವ ನಿಮ್ಮ ದೇವರಾದ ಯೆಹೋವನು ಆತನೇ ಈ ಜಿಪ್ಟಿನಲ್ಲಿ ನಿಮ್ಮ ಕಥ್ಣಿಗಳ ಮುಂದೆಯೂ ಮರುಭೂಮಿಯಲ್ಲಿ ನಿಮಗೆ ಮಾಡಿದ ಎಲ್ಲಾದರ ಪ್ರಕಾರ ನಿಮಗೋಸ್ಕರ ಯುದ್ಧಮಾಡುವನು...

ದೇವರು ನಮ್ಮ ಬಲಹೀನತೆಗಳನ್ನು ಅರ್ಥಮಾಡಿಕೊಂಡು ನಮ್ಮನ್ನು ಹೇಗೆ ಬಲಪಡಿಸುವರೆಂದು ನೋಡಿ. (ನ್ಯಾಯಸ್ಥಾಪಕರು 7:9–16 ಓದಿ) ದೇವರಿಗೆ ಗಿದ್ಯೋನನ ಭಯ ಏನೆಂದು ಗೊತ್ತಿತ್ತು. ವಚನ 10ರಲ್ಲಿ ಇಳಿದು ಹೋಗುವುದಕ್ಕೆ ನೀನು ಭಯಪಟ್ಟರೆ ಮೊದಲು ನಿನ್ನ ಸೇವಕನಾದ ಪುರನ ಸಂಗಡ ದಂಡಿಗೆ ಇಳಿದು ಹೋಗಿ ಅವರು ಮಾತನಾಡುವುದನ್ನು ಕೇಳು ತರುವಾಯ ದಂಡಿಗೆ ಇಳಿದು ಹೋಗುವುದಕ್ಕೆ ನಿನ್ನ ಕೈಗಳು ಬಲಗೊಳ್ಳುವುವು ಎಂದನು. ಹಾಗೆಯೇ ಅವನು ತನ್ನ ಸೇವಕನಾದ ಪುರನ ಸಂಗಡ ದಂಡಿನ ಹೊರಗಿರುವ ಯುದ್ಧಸ್ಥ ಬಳಿಗೆ ಹೋದನು.

ಹಾಗೆಯೇ ಗಿದ್ಯೋನನು ಮಿದ್ಯಾನ್ಯರ ಪಾಳೆಯದ ಬಳಿಗೆ ಹೋಗಿ ದೇವರು ವಾಗ್ದಾನ ಮಾಡಿದ ಹಾಗೆ

ಬಲಗೊಂಡನು. ವಚನ 13–15 ಗಿದ್ಯೋನನು ಬಂದಾಗ, ಒಬ್ಬನು ತನ್ನ ಜತೆಗಾರನಿಗೆ ತನಗಾದ ಸ್ವಪ್ನವನ್ನು ವಿವರಿಸಿ ಹೇಳಿದ್ದೇನೆಂದರೆ. ಇಗೋ ನಾನು ಒಂದು ಕನಸನ್ನು ಕಂಡೆನು. ಒಂದು ಜವೆಗೋದಿಯ ರೊಟ್ಟಿಯು ಮಿದ್ಯಾನ್ಯರ ದಂಡಿನ ಮೇಲೆ ಹೊರಳಿ ಒಂದು ಡೇರೆಯ ಮೇಲೆ ಬಂದು ಅಪ್ಪಳಿಸಿ ಅದನ್ನು ಕೆಡವಿಹಾಕಿತು. ಆಗ ಡೇರೆ ಬಿದ್ದು ಹೋಯಿತು ಎಂದನು.

14. ಅವನ ಜತೆಗಾರನು ಉತ್ತರ ಕೊಟ್ಟು ಇಸ್ರಾಯೇಲಿನ ಗಿದ್ಯೋನನೆಂಬ ಮನುಷ್ಯನ ಕತ್ತಿಯೇ ಹೊರತು ಬೇರೆಯಲ್ಲ, ದೇವರು ಮಿದ್ಯಾನ್ಯರನ್ನೂ ಈ ಸಮಸ್ತ ದಂಡನ್ನೂ ಅವನ ಕೈಯಲ್ಲಿ ಒಪ್ಪಿಸಿಕೊಟ್ಟರು ಎಂದನು 15. ಗಿದ್ಯೋನನು ಈ ಕನಸಿನ ವಿವರವನ್ನೂ ಅದರ ಅರ್ಥವನ್ನೂ ಕೇಳಿದಾಗ, ಯೆಹೋವನನ್ನು ಆರಾಧಿಸಿ, ಇಸ್ರಾಯೇಲ್ ದಂಡಿಗೆ ತಿರುಗಿ ಬಂದು ಏಳಿರಿ, ಯೆಹೋವನು ಮಿದ್ಯಾನ್ಯರ ದಂಡನ್ನು ನಿಮ್ಮ ಕೈಗೆ ಒಪ್ಪಿಸಿ ಕೊಟ್ಟಿದ್ದಾನೆ ಎಂದನು.

ದೇವರ ಕಾರ್ಯಮಾಡುವ ವಿಧಾನ ನೋಡಿ : ದೇವರು ಶತ್ರುಗಳಿಗೆ ಭಯಂಕರ ಕನಸುಗಳನ್ನು ಹಾಕಿ ಅವರು ಭಯದಿಂದ ತತ್ತರಿಸುವ ಹಾಗೆ ಮಾಡಿದರು. ಗಿದ್ಯೋನನ ಆ ಕನಸನ್ನು ಅದರ ವಿವರವನ್ನು ಕೇಳಿದಾಗ, ದೇವರು ನಿಜವಾಗಿ ಮಹಾತ್ಕಾರ್ಯಗಳನ್ನು ಮಾಡಲು ಶಕ್ತರು ಎಂದು ಮನದಟ್ಟು ಮಾಡಿಕೊಂಡು ತಕ್ಷಥಿ ದೇವರನ್ನು ಆರಾಧಿಸಿ, 300 ಜನರ ಸಂಗಡ ಧೈರ್ಯದಿಂದ ಶತ್ರುಗಳ ವಿರುದ್ಧ ದಂಡೆತ್ತಿ ಹೋದನು.

ವಚನ 22 ಮುನ್ನೂರು ಜನರು ತುತ್ತೂರಿಗಳನ್ನು ಊದುವಾಗ ಯೆಹೋವನು ದಂಡಿನಲ್ಲಿ ಎಲ್ಲೆಲ್ಲಿಯೂ ಒಬ್ಬನ ಕತ್ತಿಯನ್ನು ಒಬ್ಬನ ಮೇಲೆ ಬರಮಾಡಿದನು. ದಂಡು ಚೆರೇರಿನಲ್ಲಿರುವ ಬೇತ್‌ಷಿಟ್ಟದ ಮಟ್ಟಿಗೂ ಟಬ್ಬಾತಿನ ಬಲಿಯಲ್ಲಿರುವ ಆಬೇಲ್ಮೆಹೋಲಾದ ಮೇರೆವರೆಗೂ ಓಡಿಹೋಯಿತು.

ದೇವರ ಕೈ ಹೇಗೆ ಕಾರ್ಯ ಸಾಧಿಸಿತು ನೋಡಿ : ನಂಬಿಕೆಯಿಂದ ಗಿದ್ಯೋನ ಮತ್ತು 300 ಜನರು ತುತ್ತೂರಿಯನ್ನು ಊದಿದಾಗ, ಶತ್ರು ಸೈನ್ಯ ಗಲಿಬಿಲಿಗೊಂಡು ಒಬ್ಬರನೊಬ್ಬರು ಕೊಂದರು ಮತ್ತು ಉಳಿದವರು ಓಡಿಹೋದರು.

ನೀವು ಯಾವ ವಿಷಯದಲ್ಲಿ ಗಿದ್ಯೋನ ಮತ್ತು ಅವನ ಜನರ ಹಾಗೆ ಇದ್ದೀರಿ ? ನೀವು ಬಹಳ ಬಲಹೀನರೆಂದು ಎಣಿಸಿಕೊಳ್ಳುವಿರಾ ? ಹಾಗಾದರೆ ಈ ವಾಕ್ಯದ ಪ್ರಕಾರ, ದೇವರು ತಮ್ಮಲ್ಲಿ ಭರವಸೆಯಿಟ್ಟು ಬಲಹೀನರನ್ನು ಬಲಗೊಳಿಸಿ, ಅವರಿಗೋಸ್ಕರ ಮಹತ್ಕಾರ್ಯಗಳನ್ನು ಮಾಡಲು ಶಕ್ತರಾಗಿದ್ದಾರೆ.



ಯೋಚನೆ ಮಾಡಿ, ನಿಮ್ಮ ಬಲಹೀನತೆಯಿಂದ ಮಾಡಲು ಅಸಾಧ್ಯವೆನಿಸುವ ಕೆಲವು ಕಾರ್ಯಗಳನ್ನು ಪಟ್ಟಿಮಾಡಿ.

ಕೆಳಗೆ ಹೇಳಿದ ಹಾಗೂ ಮಾಡಬಹುದು. ನನಗೆ ನನ್ನ ಸ್ನೇಹಿತರೊಂದಿಗೆ, ಕೆಲಸ ಮಾಡುವ ಸಹುದ್ಯೋಗಿಗಳೊಂದಿಗೆ, ನನ್ನ ಯಜಮಾನನೊಂದಿಗೆ ನನ್ನ ವಿಶ್ವಾಸವನ್ನು ಹಂಚಲು ಬಯವಾಗಿದೆ, ಮತ್ತು ಹೇಗೆ ಹಂಚುವುದೆಂದು ತಿಳಿಯದು.

ನನಗೆ ನನ್ನ ಕಾಲೇಜಿನಲ್ಲಿ, ಕೆಲಸ ಮಾಡುವ ಸ್ಥಳದಲ್ಲಿ, ನನ್ನ ನೆರೆಹೊರೆಯಲ್ಲಿ ವೇದ ವಾಕ್ಯ ಪಾಠಗಳನ್ನು ಮಾಡುವ ಆಸೆಯಿದೆ ಆದರೆ ಅದನ್ನು ಮಾಡುವ ಜ್ಞಾನವಿಲ್ಲ ಮತ್ತು ಧೈರ್ಯವಿಲ್ಲ.

ನಾನು ಎಷ್ಟು ಬಲಹೀನನೆಂದರೆ, ಅನ್ಯೋನ್ಯತೆಯಲ್ಲಿ ಸರಿಯಾಗಿ ಬೆರೆಯದೆ ನನಗೆ ಸಭೆಯಲ್ಲಿ ಸ್ನೇಹಿತರಿಲ್ಲ ನಾನು ವೇದವಾಕ್ಯದಲ್ಲಿ, ಜ್ಞಾನದಲ್ಲಿ ಎಷ್ಟು ಬಲಹೀನನೆಂದರೆ ಅನ್ಯರಿಗೆ ವೇದವಾಕ ಹೇಳಿಕೊಡಲು ಅಶಕ್ತನು.

ದೇವರು ನನಗೆ ಹೇಗೆ ಸಹಾಯ ಮಾಡದರೆಂದು ನಾನು ಕೆಲವು ವಾಕ್ಯಗಳಲ್ಲಿ ಹೇಳುತ್ತೇನೆ. ನಾನು ಶಿಷ್ಯನಾಗುವುದಕ್ಕೆ ಮೊದಲು ನನಗೆ ವೇದವಾಕ್ಯಗಳ ಜ್ಞಾನವಿರಲಿಲ್ಲ. ನನಗೆ ವೇದವಾಕ್ಯ ಕಲಿಸಿದ ಸಹೋದರರು, ಅವರ ಜ್ಞಾನ ಕಂಡು ನನಗೆ ಆಶ್ಚರ್ಯವಾಯಿತು. ನಾನು ಯಾವ ಪ್ರಶ್ನೆ ಕೇಳಿದರೂ ಅವರು ವೇದವಾಕ್ಯದಿಂದ ಉತ್ತರ ಹೇಳುತ್ತಿದ್ದರು. ನಾನು ದೀಕ್ಷಾಸ್ನಾನ ಪಡೆದ ಮೇಲೆ, ಹೊಸಬರೊಂದಿಗೆ ವೇದವಾಕ್ಯ ಕಲಿಸುವಾಗ ನಾನು ಅವರೊಂದಿಗೆ ಹೋಗಲು ಶುರುಮಾಡಿದೆ. ಜನರು ವೇದವಾಕ್ಯ ಕಲಿತ ನಂತರ ಹೇಗೆ ತಮ್ಮ ಚಟಗಳಿಂದ ಹೊರಬರುವುದನ್ನು ಕಂಡು ಇನ್ನೂ ಆಶ್ಚರ್ಯಚಕಿತನಾದೆ. ನಾನೂ ಈ ರೀತಿ ವೇದವಾಕ್ಯಗಳನ್ನು ಕಲಿತು ಉಪಯೋಗಿಸಬಹುದೇ ಎಂದು ಚಿಂತಿಸುತ್ತಿದ್ದೆ. ನನಗೆ ಆ ವಿಶಯದ ಬಗ್ಗೆ ಆತ್ಮ ವಿಶ್ವಾಸವಿರಲಿಲ್ಲ. ಒಂದು ಕಾರಥಿವೇನೆಂದರೆ, ನಾನು ಶಿಷ್ಯನಾಗುವುದಕ್ಕೆ ಮೊದಲು ಒಂದು ದೊಡ್ಡ ಕಾಯಿಲೆಯಿಂದ ನರಳಿ, ಜ್ಞಾಪಕ ಶಕ್ತಿಯನ್ನು ಕಳೆದುಕೊಂಡಿದ್ದೆ. ಆದರಿಂದ ನನ್ನ ವಿದ್ಯಾಭ್ಯಾಸ ಮತ್ತು ಕೆಲಸ ಮಾಟುಕುಗೊಂಡಿತ್ತು.

ಆಡಿ ನಾನು ಯೋಚಿಸಿದೆ. ದೇವರು ನನ್ನನ್ನು ಇಷ್ಟು ಬದಲಾಯಿಸಿರುವಾಗ, ನನ್ನ ಸುತ್ತಲಿರುವ ಜನರನ್ನು ಕೂಡ ಬದಲಾಯಿಸಿರುವಾಗ, ನನ್ನ ಜ್ಞಾಪಕಶಕ್ತಿ ಮರಳಿ ಪಡೆಯುವ ಸಹಾಯ ಮಾಡಲಾರರೇ ? ನನ್ನಲ್ಲಿ ಪವಿತ್ರಾತ್ಮರು ಇರುವರೆಂದು ಜ್ಞಾಪಿಸಿದೆ. ನಾನು ಪ್ರಯತ್ನಪಟ್ಟು ವೇದವಾಕ್ಯಗಳನ್ನು ಮನದಟ್ಟು ಮಾಡಿ ಬಾಯಿಪಾಠ ಮಾಡಲು ಶುರುಮಾಡಿದೆ. ಆಶ್ಚರ್ಯಕರವಾಗಿ ನನ್ನ ಜ್ಞಾಪಕ ಶಕ್ತಿ ಬೆಳೆಯಲು

ಪ್ರಾರಂಭಿಸಿತು. ದೇವರು ಮೊದಲಿಗಿಂತ ಹೆಚ್ಚಾಗಿ ನನ್ನ ಜ್ಞಾಪಕ ಶಕ್ತಿ ಬೆಳೆಸಿದರು. ಪವಿತ್ರಾತ್ಮರ ಸಹಾಯದಿಂದ ಮತ್ತು ಸಹೋದರರ ಉತ್ತೇಜನದಿಂದ 2 ತಿಂಗಳೊಳಗೆ 100 ವಚನಗಳನ್ನು ಬಾಯಿಪಾಠ ಮಾಡಿದೆನು. ನಾನು ಸ್ವಂತವಾಗಿ ವೇದವಾಕ್ಯ ಕಲಿಸಿಕೊಟ್ಟ ತುಂಬಾ ಜನ ದೀಕ್ಷಾಸ್ನಾನ ತೆಗೆದುಕೊಂಡರು. ನನಗೆ ಗೊತ್ತಿದೆ ಇನ್ನೂ ನಾನು ಬಹಳ ವಿಷಯಗಳಲ್ಲಿ ಬಲಹೀನ, ಆದರೆ ನನ್ನ ಬಲವಲ್ಲ ದೇವರ ಬಲವು ನನ್ನಂಥ ಬಲಹೀನರ ಮುಖಾಂತರ ಕೆಲಸ ಮಾಡುತ್ತದೆ.

ಗಿದ್ಯೋನಿನ ಉದಾಹರಣೆಯಿಂದ ನಂಬಿಕೆ ಪಡೆದು, ನೀನು ಬಲ ಹೀನನಾದ ವಿಷಯಗಳಲ್ಲು ದೇವರು ಬಲಪಡಿಸಿ ನಿನ್ನನ್ನು ಅವರ ರಾಜ್ಯ ವಿಸ್ತರಿಸಲು ಉಪಯೋಗಿಸುವರು ಎಂದು ಪ್ರಾ ್ಗಸು.

ದಿನ – 14

## ದೇವರ ಕೈ ಉತ್ತಮ ಪುನರ್ಜಾಗೃತಿಯನ್ನು ತರುವುದು.

2 ಪೂರ್ವಕಾಲವೃತ್ತಾಂತ 30

ಇಸ್ರಾಯೇಲಂ ದೇಶವು ಎರಡು ದೇಶಗಳಾಗಿ ವಿಂಗಡಣೆಯಾಗಿದ್ದನ್ನು ನೆನಪಿಸಿಕೊಳ್ಳಿರಿ – (ಇಸ್ರಾಯೇಲ್ ಮತ್ತು ಯೂದ) ಮೊದಲನೆಯ ರಾಜನಾದ ಯೆರೋಬೋಮನ ಆಳ್ವಿಕೆಯಲ್ಲಿಯೇ ಇಸ್ರಾಯೇಲ್ ದೇಶವು ವಿಗ್ರಹಾರದನೆಯಲ್ಲಿ ಮುಳುಗಿತ್ತು. ಯೂದ ದೇಶವನ್ನು ದಾವೀದನ ವಂಶದಿಂದ ಬಂದ ರಾಜರುಗಳು ಆರುತ್ತಿದ್ದರು. ಆದರಲ್ಲಿ ಆಹಾಜನು ಯುದಾಯ ದೇಶದ ಅತಿ ಕ್ರೂರವಾದ ಅರಸನಾಗಿದ್ದನು. ಆತನು ಇಡೀ ದೇಶವನ್ನು ವಿಗ್ರಹಾರಾಧನೆಯಲ್ಲಿಯೂ ಮತ್ತು ಅಸಹ್ಯವುಳ್ಳ ಆಚರಣೆಗಳಿಗೆ ಸಂಬಂಧಪಟ್ಟ ಕಾರ್ಯಗಳಲ್ಲಿಯೂ ತೊಡಗಿಸಿಕೊಂಡಿದ್ದನು. ಆದರೆ ಆತನ ಮಗನಾದ ಹೆಜ್ಕೀಯನು ಸಂಪೂರ್ಥಿವಾಗಿ ವ್ಯತ್ಯಾಸವಾಗಿದ್ದನು. ಈತನು ದೇವರನ್ನು ಪೂರ್ತಿ ಹೃದಯದಿಂದ ಪ್ರೀತಿಸಿ. ಯೂದ ದೇಶವು ಉತ್ತಮವಾಗಿ ಪುಥಿರ್ಜಾಗೃತಿ ಹೊಂದಲು ಮುಂದಾಳುತ್ವವನ್ನು ವಹಿಸಿದನು. ದೇವರು ತನ್ನ ಪ್ರಯಾಸವನ್ನು ಆಶೀರ್ವದಿಸುವುದರ ಬಗ್ಗೆಯೂ ಮತ್ತು ಜನರ ಹೃದಯವು ದೇವರ ಬಳಿ ಹಿಂದಿರುಗುವುದರ ಬಗ್ಗೆಯೂ ಬಹಳ ಉತ್ಸಾಹವಾಗಿದ್ದನು.

ಹೆಜ್ಕೀಯನ 6ನೇ ವರ್ಷದ ಆಳ್ವಿಕೆಯಲ್ಲಿ, ಅಸಿರಿಯನ್ನರು ಇಸ್ರಾಯೇಲ್ ದೇಶವನ್ನು ನಾಶಮಾಡಿ ಬಹಳ ಜನರನ್ನು ಕೊಂದರು. ಕೆಲವರನ್ನು ಅವರ ದೇಶಕ್ಕೆ ಕರೆದೊಯ್ದು, ಕೆಲವರನ್ನು ಅಲ್ಲಿಯೇ ಬಿಟ್ಟು ಹೋದರು, (2 ಅರಸುಗಳು 18:10 ರಲ್ಲಿ ಹೇಳುವಂತೆ ಹೆಜ್ಕೀಯನ 6ನೇ ವರ್ಷದ ಆಳ್ವಿಕೆಯಲ್ಲಿ ಸಮಾರೆಯ ದೇಶವು ಸೆರೆಯಿಡಲ್ಪಟ್ಟಿತು).
(ಈ ರೀತಿಯಾಗಲು ಕಾರಥಿ ಇಸ್ರಾಯೇಲ್ ದೇಶವು ದೇವರನ್ನು ತಿರಸ್ಕರಿಸಿ ವಿಗ್ರಹಾರಾಧನೆಯನ್ನು ಮಾಡಿದ್ದರಿಂದ, 2 ಅರಸುಗಳು 17).



ಅನೇಕ ಸಂತತಿಗಳಿಂದ ಫಸ್ಕ ಹಬ್ಬವನ್ನು ಯೂಧ ದೇಶದಲ್ಲಿಯೂ ಆಚರಿಸುತ್ತಿರಲಿಲ್ಲ. ಹೆಜ್ಕೀಯನು ಫಸ್ಕ ಹಬ್ಬವನ್ನು ಆಚರಿಸುವುದಾಗಿ ನಿರ್ಧರಿಸಿದನು. ಅವನು ಯೂದಾಯ ದೇಶದ ಎಲ್ಲ ಜನರಿಗೂ ಇಸ್ರಾಯೇಲ್ ದೇಶದಲ್ಲಿ ವಾಸವಾಗಿದ್ದು ಕೆಲವು ಜನರಿಗೆ ಮತ್ತು ಇಸ್ರಾಯಲ್ ದೇಶದಲ್ಲಿ ವಾಸವಾಗಿದ್ದ ಕೆಲವು ಜನರಿಗೆ ಈ ಮಾಹಿತಿಯನ್ನು ಕಳುಹಿಸಿದನು. ತನ್ನ ದೇಶದ ಜನರು ಮಾತ್ರವಲ್ಲದೆ, ಇಸ್ರಾಯೇಲ್ ಜನರೂ ಸಹ ದೇವರ ಕಡೆ ತಿರುಗಿಕೊಳ್ಳಬೇಕೆಂಬುದು, ಇವನ ಆಸೆಯಾಗಿತ್ತು.

ಜನರು ಹೇಗೆ ಪ್ರತಿಕ್ರಿಯಿಸಿದರು ಎಂದು ನೋಡೋಥಿ.

2 ಪೂರ್ವಕಾಲವೃತ್ತಾಂತ 30:12
ಯಹೋದ್ಯರಾದರೋ ದೇವರ ಕೃಪಾಹಸ್ತ ಪ್ರೇರಣೆಯಿಂದ ಏಕಮನಸುಳ್ಳವರಾಗಿ ಯೆಹೋವನ ಧರ್ಮಶಾಸ್ತ್ರನುಸಾದ ಅರಸನಿಂದಲೂ ಪ್ರಭಗಳಿಂದಲೂ ಹೊರಹದ ಆಜ್ಞೆಯನ್ನು ಕೈಗೊಂಡರು.

ಹೆಜ್ಕೀಯನು ಎರಡೂ ದೇಶವಾದ ಯೂದ ಮತ್ತು ಇಸ್ರಾಯೇಲ್‌ನ್ನು ಪುನಜಾರಗೃತಿ ತರುವಲ್ಲಿ ಶ್ರಮಿಸಿದನು. ಈ ಕಾರ್ಯವು ದೇವರಿಗೆ ಬಹಳ ಸಂತೋಷವನ್ನು ತಂದಿತು. ಯೆಹೋವನ ಹಸ್ತವು ಜನರ ಮೇಲೆ ಬಂದು ಅವರು ಒಗ್ಗಟ್ಟಾಗಿ ಹೆಜ್ಕೀಯನ್ನು ಯೋಜನೆಗಳನ್ನು ಕೈಗೊಳ್ಳುವಂತೆ ಮಾಡಿತು.

ದೇವರ ಹಸ್ತವು ಜನರ ಮೇಲೆ ಬಂದು ಬದಲಾವಣೆಗೊಂಡವರು ಯೆರೂಸಲೇಮಿಗೆ ಬಂದು ಫಸ್ಕ ಹಬ್ಬವನ್ನು ಆಚರಿಸಿದ್ದು ಮಾತ್ರವಲ್ಲದೆ ಯೂದಾಯದಲ್ಲಿದ್ದ ಎಲ್ಲಾ ವಿಗ್ರಹಗಳನ್ನು ನಾಶಪಡಿಸಿದರು. (ವ.14) ವಿಗ್ರಹಾರದನೆಯಿಂದ ಬಿಡುಗಡೆಗೊಂಡು ಸಂತೋಷವುಳ್ಳವರಾಗಿ ಜೀವವುಳ್ಳ ದೇವರನ್ನು ಪೂರ್ತಿಹೃದಯದಿಂದ ಆರಾಧಿಸಿದರು.

ವ. 21. ಯೆರೂಸಲೇಮಿನಲ್ಲಿ ಕೂಡಿಬಂದ ಇಸ್ರಾಯೇಲ್ಯರು ಏಳು ದಿನಗಳವರೆಗೂ ಮಹಾ ಸಂತೋಷದಿಂದ ಹುಳಿಯಿಲ್ಲದ ರೊಟ್ಟಿಗಳ ಹಬ್ಬವನ್ನು ಆಚರಿಸುತ್ತಾ ಇದ್ದರು. ಲೇವಿಯರೂ ಯಾಜಕರೂ ಮಹಾವಾದ್ಯದೊಡನೆ ಯೆಹೋವನನ್ನು ಪ್ರತಿದಿನವೂ ಕೀರ್ತಿಸುತ್ತಾ ಇದ್ದರು.

ಇವರು ಹಬ್ಬದ ಆಚರಣೆಯನ್ನು ಇನ್ನೂ ಕೆಲವು ದಿನಗಳ ಕಾಲ ವಿಸ್ತಿರಿಸಿದರು.

(ವ.24 ಸಮೂಹದವರು ಇನ್ನೂ ಏಳು ದಿನಸ ಹಬ್ಬ ಮಾಡಬೇಕೆಂದು ಗೊತ್ತುಮಾಡಿಕೊಂಡು ಆ ಏಳು ದಿನಗಳಲ್ಲಿಯೂ ಬಹಳವಾಗಿ ಸಂತೋಷದಿಂದ ಹಬ್ಬವನ್ನು ಆಚರಿಸಿದರು.

ದೇವರನ್ನು ಆರಾದಿಸುವುದಕ್ಕೆ ನೀವು ಎಷ್ಟು ಸಮಯವನ್ನು ತೆಗೆದುಕೊಳ್ಳುತ್ತೀರಾ ? ದೇವರವಾಕ್ಯವನ್ನು ಓದುವಾಗ ಮತ್ತು ಪ್ರಾರ್ಥನೆ ಮಾಡುವಾಗ ನಿಮಗೆ ಸಂತೋಷವಾಗುತ್ತದೆಯಾ ? ಸಭೆಯ ಕೂಟಗಳಿಗೆ ಬಂದು ಭಾಗವಹಿಸುವುದರಲ್ಲಿ ಸಂತೋಷಪಡುತ್ತೀರಾ ? ಅಥವಾ ಭಾರವೆನ್ನಿಸುತ್ತಿದೆಯಾ ? ಕೂಟ ಬಹಳ ಉದ್ದವಾಗಿದೆ ಎಂದು ನಾವು ದೂರು ಹೇಳುತ್ತೇವೆಯಾ ?

ಈ ಜನರು ಸುಮಾರು ಮೈಲಿಗಳು ನಡೆದು ಯೆರೂಸಲೇಮಿಗೆ ಬಂದು ದೇವರನ್ನು ಆರಾದಿಸಿದರು. ಏಳು ದಿನಗಳು ಇವರಿಗೆ ಕಡಿಮೆಯಿಂದ ಅನಿಸಿ, ಇನ್ನೂ ಏಳು ದಿನಗಳವರೆಗೆ ವಿಸ್ತರಿಸಿ, ಆರಾಧನೆಯಲ್ಲಿಯೂ, ಮತ್ತು ಅನ್ನೋನತೆಯಲ್ಲಿಯೂ ಪಾಲ್ಗೊಂಡರು.

ನಿಮ್ಮ ಜೀವನಗಲ್ಲಿ ಎಂತಹ ಪುನರ್ಜಾಗೃತಿಯ ಅವಶ್ಯಕತೆ ಇದೆ ? ನಿಮ್ಮ ಕುಟುಂಬ, ಕುಟುಂಬ ಸಭೆ ಮತ್ತು ಸಭೆಯಲ್ಲಿ ಎಂತಹ ಪುನರ್ಜಾಗೃತಿಯ ಅವಶ್ಯಕತೆಯಿದೆ ?

ಅದು ವಿಗ್ರಹಾರಾಧನೆಯನ್ನು ನಾಶಪಡಿಸುವಂತಹ ದುರಾಸೆಗಳು, ಪ್ರಪಂಚದಾಸೆಗಳು, ಅಶುದ್ದತ್ವವು, ಸ್ವಾರ್ಥತನವು, ಅಹಂಕಾರವೂ ಇರಬಹುದು. ಬೇರೆ ಆತ್ಮಗಳನ್ನೂ ರಕ್ಷಿಸುವಂತಹ ಪುನರ್ಜಾಗೃತಿಯಾಗಿರಬಹುದು. ಪುನರ್ಜಾಗೃತಿಯಾಗಲು ನೀವು ಮುಂದಾಳುತ್ವವನ್ನು ವಹಿಸುತ್ತೀರಾ ? ನಿಮ್ಮ ಪ್ರಯಾಸದಲ್ಲಿ ದೇವರ ಹಸ್ತವು ಅಧ್ಭುತವಾಗಿ ಕೆಲಸಮಾಡಲು ನೀವು ಬಯಸುತ್ತೀರಾ ?

ನೀವು ಪುನರ್ಜಾಗೃತಿಮಾಡಲು ರಾಜನು ಅಥವಾ ದೊಡ್ಡ ನಾಯಕನಾಗಬೇಕಾಗಿರುವ ಅವಶ್ಯಕತೆಯಿಲ್ಲ. ಯೇಸುವಿನಲ್ಲಿನಾವು ಅತ್ಯುತ್ತಮ ಉದಾಹರಣೆಯನ್ನು ಕಾಧಿಬಹುದು.

ಪುನರ್ಜಾಗೃತಿಮಾಡಲು ಪ್ರಪಂಚದಲ್ಲಿ ಜನರು ಅವರಿಗೆ ಯಾವ ಅಧಿಕಾರವನ್ನು ಕೊಟ್ಟಿರಲಿಲ್ಲ. ಜನರ ಆತ್ಮೀಯ ಸ್ಥಿತಿಯನ್ನು ನೋಡಿದಾಗ ಯೇಸುವಿನ ಹೃದಯವು ಕದಲಿತು.

ಮತ್ತಾಯ 9:35–38



ಜನರ ಬೇಡಿಕೆಗಳು ಮತ್ತು ಅವರ ಆತ್ಮಗಳು ನಾಶನವಾಗುತ್ತಿರುವುದನ್ನು ನೋಡಿದ ಯೇಸುವಿಗೆ ಕನಿಕರ ಹುಟ್ಟಿತು.

ಸುತ್ತಮುತ್ತಲಿರುವ ಜನರ ಬೇಡಿಕೆಗಳನ್ನು ನೋಡಲು ನಿಮ್ಮ ಕಣ್ಣುಗಳು ತೆರೆಯಬೇಕೆಂದೂ ಮತ್ತು ಕೇಳಿಸಿಕೊಳ್ಳಲು ನಿಮ್ಮ ಕವಿಗಳನ್ನು ತೆರೆಯಬೇಕೆಂದೂ ನೀವು ದೇವರಲ್ಲಿ ಪ್ರಾ ್ಥಸಿರಿ.

ಎಲ್ಲವನ್ನು ಬರೆದಿಟ್ಟು ದೇವರ ಮೇಲೆ ಭಾರಹಾಕಿ, ನಾಯಕರೊಂದಿಗೆ ಸಲಹೆ ಪಡೆದು ದೇವರ ಮಹಿಮೆಗೋಸ್ಕರ ಜನರ ಬೇಡಿಕೆಗಳನ್ನು ಪೂರೈಸಲು ಪುನರ್ಜಾಗೃತಿಯನ್ನು ಪ್ರಾರಂಭಿಸಿ.

## ದಿನ -15

## ದೇವರ ಹಸ್ತವು ಉನ್ನತವಾದ ಉಜ್ಜೀವನ ತರುವಂಥಹದು

<u>* 2ಪೂರ್ವಕಾಲವೃತಾಂತ 30</u>

<u>ಹಿಜ್ಕೀಯ-</u>
ಅಶ್ಶೀರರು ಇಸ್ರಾಯೇಲರನ್ನು ಧ್ವಂಸಪಡಿಸಿ ಸೆರೆಯಾಳುಗಳಾಗಿ ಕರೆದುಕೊಂಡು ಹೋದರು. ಇಸ್ರಾಯೇಲ ಮತ್ತು **ಯೂಧರನ್ನು** ಒಟ್ಟುಗೂಡಿಸಿ ದೇವರನ್ನು ಆರಾಧಿಸುವುದು ಅವರನ್ನು ದೇವರಿಗೆ ಒ ್ಪಸುವುದು
ಹಿಜ್ಕೀಯನಿಗೆ ಸ್ಪಷ್ಟವಾಗಿ ಮನವರಿಕೆಯಾಗಿತ್ತು
<u>ವಚನ12:</u> ಪ್ರೇರಣೆಯಿಂದ ಏಕಮನಸ್ಸುಳ್ಳವರಾಗಿ ಯೆಹೋವನ ಧರ್ಮಶಾಸ್ತ್ರನುಸಾರ ಅರಸನಿಂದಲೂ ಪ್ರಭುಗಳಿಂದಲೂ ಹೊರಟ ಆಜ್ಞೆಯನ್ನು ಕೈಕೊಂಡರು.

## ದಿನ -16

## ಸ್ತುತಿ ಹಾಡುಗಳ ಮೂಲಕ ದೇವರನ್ನು ಸ್ತುತಿಸಿ ಯುದ್ಧವನ್ನು ಜಯಸಿದ್ದು

<u>* 2ಪೂರ್ವಕಾಲವೃತಾಂತ20:1-30 ಓದಿರಿ,</u>
ಮೂರು ದೇಶಗಳು ಒಟ್ಟುಗೂಡಿ **ಯೊಧರ** ಮೇಲೆ ಆಕ್ರಮಣ ಮಾಡಿದರು ಮೋವಾಬ್ಯರೂ ಅಮ್ಮೋನಿಯರೂ ಮತ್ತು ಕೆಲವು ಮೆಗೂನ್ಯರೂ. ಚಿಕ್ಕ ಮತ್ತು ಅಲ್ಪಬಲವುಳ್ಳ ದೇಶದ ಮೇಲೆ ಮಹಾಸೈನ್ಯ ಸಮೂಹವು ಯುದ್ಧಕ್ಕೆ ಬಂದಾಗ ಯೆಹೋಷಾಫಾಟನು. ಅರಸನಾಗಿ **ಯೊಧ** ದೇಶವನ್ನು ಆಳುತ್ತಿದ್ದನು. ಇವನು ದೇವರಲ್ಲಿ ಭರವಸೆವುಳ್ಳ ಉತ್ತಮ ಅರಸನಾಗಿದ್ದನು. ಆ

ಸಮೂಹವು ಇವನ ವಿರುದ್ಧವಾಗಿ ಬಂದಾಗ ಇವನಲ್ಲಿ ಎರಡು ಆಯ್ಕೆಗಳಿದ್ದವು. ಒಂದು ಶರಣಾಗತನಾಗುವುದು, ಯುದ್ಧಮಾಡಿ ಸೋತುಹೋಗುವುದು, ಅಥವಾ ಬೇರೆ ದೇಶಗಳ ಸೈನ್ಯದ ಸಹಾಯ ಕೇಳುವುದು. ದೇವರ ಕಡೆಗೆ ತಿರುಗಿಕೊಂಡು ಆತನ ಮಹಾಪರಾಕ್ರಮದ ಹಸ್ತದ ಸಹಾಯ ಕೇಳಿದನು.

ನೋಡಿರಿ, ಯೆಹೋಷಾಫಾಟನು ಹೇಗೆ ಪ್ರಾರ್ಥಿಸಿದನು.

ವಚನ12 ನಮ್ಮ ದೇವರೇ, ಅವರನ್ನು ದಂಡಿಸದೇ ಬಿಡುವಿಯೋ? ನಮ್ಮ ಮೇಲೆ ಬಂದ ಈ ಮಹಾಸಮೂಹದ ಮುಂದೆ ನಿಲ್ಲುವುದಕ್ಕೆ ನಮ್ಮಲ್ಲಿ ಬಲವಿಲ್ಲ. ಏನು ಮಾಡಬೇಕೆಂಬುದೂ ತಿಳಿಯದು. ನಮ್ಮ ಕಣ್ಣುಗಳು **ನಿನ್ನನ್ನೇ** ನೋಡುತ್ತವೆ ಎಂದು ಪ್ರಾರ್ಥಿಸಿದನು. ದೇವರು ಅವನ ನಂಬಿಕೆಯ ಪ್ರಾರ್ಥನೆಗೆ ಪ್ರವಾದಿಯ ಮೂಲಕ ಉತ್ತರ ನೀಡಿದರು.

ವಚನ15-17

ದೇವರು ತನ್ನ ಶತ್ರುಗಳನ್ನು ಯಾವ ರೀತಿಯಾಗಿ ಸೋಲಿಸುವ ಎಂಬುದಾಗಿ ಸ್ಪಷ್ಟವಾಗಿ ಹೇಳದಿದ್ದರೂ ಯೆಹೋಷಾಫಾಟನು ಮತ್ತು **ಯೊಧ** ದೇಶದ ಜನರು ದೇವರ ವಾಗ್ದಾನದ ಮೇಲೆ ವಿಶ್ವಾಸವಿಟ್ಟಿದ್ದರು. ಈ ಒಂದು **ವಿಶ್ವಾಸದ** ನಿಮಿತ್ತವೇ ಆ ಮಹಾಸಮುಹ ಸೈನ್ಯದ ಹತ್ತಿರ ಹೋಗಿ ಆ ಜನಗಳು ಮಾಡಿದ್ದೇನೆಂದರೆ, ದೇವರನ್ನು ಸ್ತುತಿಗೀತೆಗಳ ಮೂಲಕ ಆರಾಧಿಸಿದರು. ನೋಡಿ ಯೆಹೋಷಾಫಾಟನು ತನ್ನ ಸೈನಿಕರಿಗೆ ಯಾವ ರೀತಿ ಮಾರ್ಗಸೂಚನೆಯನ್ನು ಕೊಟ್ಟಿದ್ದನು!
ವಚನ21-23

ನೋಡಿರಿ, ಹೇಗೆ ಅವರು ಯುದ್ಧವನ್ನು ಜಯಿಸಿದರು! ಅವರು ಕೇವಲ ದೇವರಿಗೆ ಸ್ತುತಿಪದಗಳನ್ನು ಹಾಡಿದರು, ಅವರು ಉತ್ಸಾಹ ಧ್ವನಿಯಿಂದ ಕೀರ್ತಿಸುವುದಕ್ಕೆ ಪ್ರಾರಂಬಿಸಲು ಯೆಹೋವನು ಯೆಹೂದ್ಯರಿಗೆ ವಿರೋಧವಾಗಿ ಬಂದ ಅಮ್ಮೋನಿಯರನ್ನೂ ಮೋವಾಬ್ಯರನ್ನೂ ಸೇಯಿರ್ ಪರ್ವತದವರನ್ನೂ ನಶಿಸುವದಕ್ಕೋಸ್ಕರ ಅವರಲ್ಲಿ ಹೊಂಚುಹಾಕುವವರನ್ನು ಇರಿಸಿದ್ದರಿಂದ ಅಮ್ಮೋನಿಯರು ಮೋವಾಬ್ಯರೂ ಸೇಯಿರ್ ಪರ್ವತದವರ ಮೇಲೆ ಬಿದ್ದು ಅವರನ್ನು ಪೂರ್ಣವಾಗಿ ಸಂಹರಿಸಿಬಿಟ್ಟರು; ದೇವರು ಅವರಲ್ಲಿ ಗಲಿಬಿಲಿ ಹುಟ್ಟಿಸಿ, ಒಬ್ಬರನ್ನೊಬ್ಬರು ಹೊಡೆದು ಕೊಂಡು ನಾಶವಾದರು.

ಸಮಸ್ಯೆಗಳನ್ನು ಎದುರಿಸುವಾಗ ನೀವು ಏನು ಮಾಡುವಿರಿ? ಚಿಂತಿಸುವಿರಾ? ಅಥವಾ ಸ್ತುತಿಸುವಿರಾ? ನೀವು ದೇವರ ಹತ್ತಿರ ಹೋದಾಗಲೂ ಯಾವ ರೀತಿ ಪ್ರಾರ್ಥಿಸುವಿರಿ? ಸಂಶಯದಿಂದ-ದೇವರೆ ನಿಮ್ಮಿಂದ ಸಾಧ್ಯವಾದರೆ.. ಅಥವಾ ದೇವರಲ್ಲಿ ಪೂರ್ಣ ವಿಶ್ವಾಸದಿಂದ ದೇವರ ವಾಗ್ದಾನವನ್ನು ಆ ಸಮಯದಲ್ಲಿ ನೆನಸಿಕೊಳ್ಳುವಿರಾ?

ನೀವು ದೇವರ ವಾಗ್ದಾನಗಳ ಮೇಲೆ ಭರವಸವಿಡುವಿರಾ? ನಿಮ್ಮ ಜೀವನದಲ್ಲಿ ದೇವರ ವಾಗ್ದಾನಗಳು ನೆರವೇರಿರುವ ಸಾಕ್ಷಿಗಳಿವೆಯಾ?

ಮುಂದಿನ ದಿನಗಳಲ್ಲಿ ಸಮಸ್ಯೆಗಳನ್ನು ಎದುರಿಸುವಾಗ ದೇವರ ವಾಗ್ದಾನಗಳಲ್ಲಿ ಭರವಸೆವುಳ್ಳವರಾಗಿ ಸಮಸ್ಯೆಗಳನ್ನು ಎದುರಿಸಿ, ದೇವರಿಗೆ ಸ್ತುತಿ ಪದಗಳನ್ನು ಸಲ್ಲಿಸಿರಿ. ನೋಡಿರಿ,



ಹೇಗೆ ದೇವರು ತನ್ನ ಮಹತ್ಕಾರ್ಯಗಳನ್ನು ಮಾಡುವರು.

## ದಿನ -17

## ನಿಮ್ಮ ಕಥೆ-ನಿಮ್ಮ ಜೀವನದಲ್ಲಿ ದೇವರ ಹಸ್ತ

<u>* ಕೀರ್ತನೆ 118</u>

ಅನೇಕ ಕೀರ್ತನೆಗಳು ಕೀರ್ತನೆಕಾರರ ಅನುಭವಗಳಿಂದ ಬರೆಯಲ್ಪಟ್ಟಿವೆ.

ನಿಮ್ಮ ಕಥೆಯನ್ನು ಬರೆಯಿರಿ, ಹೇಗೆ ದೇವರ ಹಸ್ತವು ನಿಮ್ಮ ಜೀವನದಲ್ಲಿ ಕಾರ್ಯ ಮಾಡಿದೆ ಮತ್ತು ನೀವು ಹೇಗೆ ರಕ್ಷಣೆ ಹೊಂದಿದ್ದೀರಿ? ದೇವರು ನಿಮ್ಮ ಜೀವನದಲ್ಲಿ ಬೇರೆ ಯಾವುದಾದರೂ ಅದ್ಭುತಗಳನ್ನು ಮಾಡಿದ್ದಾರಾ? ನಿಮ್ಮ ಜೀವನದಲ್ಲಿ ಕಣ್ಣಿಗೆ ಕಾಣದ ರೀತಿಯಲ್ಲಿ ದೇವರ ಹಸ್ತವು ಮಾಡಿರುವ ಕಾರ್ಯವನ್ನು ಪಟ್ಟಿಮಾಡಿ ದೇವರನ್ನೂ ಸ್ತುತಿಸಿರಿ, ಇವತ್ತು ನಿಮಗಿರುವಂಥಹ ಭಾರವಾದ ವಿಷಯಗಳನನ್ನು ಪಟ್ಟಿಮಾಡಿರಿ, ಮತ್ತು ದೇವರು ಹೇಗೆ ಕಳೆದ ದಿನಗಳಲ್ಲಿ ಬಿಡುಗಡೆಯನ್ನು ಕೊಟ್ಟಿದ್ದಾರೊ ಈಗಿರುವಂಥಹ ಸಮಸ್ಯಗಳಿಂದಲೂ ಸಹ ಜಯವನ್ನು ಕೊಡುವರು. ಬರುವಂಥಹ ಜಯಕ್ಕೋಸ್ಕರ ದೇವರನ್ನು ಸ್ತುತಿಸಿರಿ, ಸಮಧಾನದಿಂದಿರಿ,
<u>* ಮಾರ್ಕ11:24</u>

## ದಿನ -18

## ಕರ್ತನ ಸೇವೆಯಲ್ಲಿರುವವರಿಗೆ ದೇವರ ಹಸ್ತವು ಒದಗಿಸಲ್ಪಡುತ್ತದೆ.

ಬಹಳ ಸಮಯದಲ್ಲಿ ಜನರು ದೇವರ ಸೇವೆಗೆ ಹಿಂಜರಿಯುತ್ತಾರೆ, ಕಾರಣ, ಬಹಳ ತ್ಯಾಗಮಾಡಬೇಕಾಗುವುದು ಮತ್ತು ತಮ್ಮ ಅವಶ್ಯಕತೆಗಳನ್ನು ಪೊರೈಸಿಕೊಳ್ಳಲಾಗದು.ಎಲೀಯನು ಒಬ್ಬ ಉತ್ತಮ ದೇವರ ಸೇವಕನಾಗಿದ್ದನು. ಬಹಳ ಹಗೇತನ ತುಂಬಿರುವಂಥಹ ದೇಶದಲ್ಲಿ ಆತನು ವಾಸಿಸಿ, ದೇವರ ಸೇವೆಯನ್ನು ಮಾಡಬೇಕಾಗಿತ್ತು ಅದುವೇ ಇಸ್ರಾಯೇಲ್! ಇಂಥ ಒಂದು ಸಮಯದಲ್ಲಿ ಇಸ್ರಾಯೇಲ್ ದೇಶವು ಇಬ್ಭಾಗವಾಯಿತು.-ಉತ್ತರ ಪ್ರಾಂತ್ಯವಾಗಿ ಇಸ್ರಾಯೇಲ್, ಮತ್ತು ದಕ್ಷಿಣ ಪ್ರಾಂತ್ಯವಾಗಿ ಯುದ ಈ ರಾಜ್ಯಾವನ್ನು ಸ್ಥಾ ಸುವ ಮುಂಚಿತವಾಗಿ ಇಸ್ರಾಯೇಲರು ದೇವರಿಂದ ದೂರ ಹೋಗಿ ವಿಗ್ರಹಗಳನ್ನು ಆರಾಧಿಸುವವರಾದರು. (ಮೊದಲ ಅರಸನಾದಂಥ ಯೆರುಬ್ಬಮನು ಬೇತೇಲ್ ಮತ್ತ ದಾನ ಸ್ಥಳಗಳಲ್ಲಿ ಬಸವನ ಮೂರ್ತ್ತಗಳಿಗೆ ಪೂಜಿಸುವವನಾದನು.)

ಆಹಾಬನು ಒಬ್ಬ ದುಷ್ಟ ಅರಸನಾಗಿದ್ದು, ತನ್ನ ಹೆಂಡತಿಯಾದ ಈಜೆಬೆಲ್‌ನ ಪ್ರೇರಣೆಯಿಂದ

ಇಸ್ರಾಯೇಲರನ್ನು ಆಳಿದನು, ಈಕೆಯು ಬಹಳ ದುಷ್ಟ ಹೆಂಗಸಳಾಗಿದ್ದಳು ಎಂಬುದಾಗಿ ಸತ್ಯವೇದದಲ್ಲಿ ಬರೆಯಲ್ಪಟ್ಟಿದೆ.

ಈಜೆಬೆಲ್‌ಳು ಇಸ್ರಾಯೇಲರನ್ನು ಆಳುವ ಮೂಲಕ ಬಾಳ್ ದೇವತೆಯನ್ನು ಆರಾಧಿಸುವ ಹಾಗೆ ಪ್ರೇರೆ ಸಿ, ದೇವರ ಪ್ರವಾದಿಗಳನ್ನು ಬೆನ್ನುಬಿಡದೆ ಕೊಲ್ಲಿಸಿದಳು ಎಲೀಯನು ದೇವರನ್ನರಿಯದಂಥ ದೇಶಕ್ಕೆ ಕಳುಹಿಸಲ್ಪಟ್ಟನು, ಮತ್ತು ಅವರನ್ನು ದೇವರ ಕಡೆಗೆ ಕರೆದುಕೊಂಡುಬರುವುದು ಕಠಿಣವಾಗಿತ್ತು.

ಧರ್ಮೋಪದೇಶಕಾಂಡ 32 ರಲ್ಲಿ ದೇವರನ್ನು ಬಿಟ್ಟು, ವಿಗ್ರಹಗಳನ್ನು ಆರಾಧಿಸುವವರಾದರೆ, ದೇವರು ಏನು ಮಾಡುವನು ಎಂಬುದಾಗಿ ಹೇಳುತ್ತದೆ. ಶಿಕ್ಷೆಗಳಲ್ಲಿ ಒಂದಾದ ಬರಗಾಲವನ್ನು ಬರುಮಾಡುವೆನು ಎಂಬುದಾಗಿ ಮುಂಚಿತವಾಗಿ ತಿಳಿಸಿದರು.

1ಅರಸು 17:1-6

ತನ್ನ ಜನರು ವಿಗ್ರಹಗಳನ್ನು ಆರಾಧಿಸುವವರಾಗಿದ್ದರಿಲದ ದೇವರು ಕೋಪವುಳ್ಳವರಾಗಿ ಎಲೀಯನಿಗೆ ಇಂದಿನಿಂದ 3ವರ್ಷ ಮಳೆ ಬೀಳುವುದಿಲ್ಲ ಅಂದನು! ದೇವರು ನೀತಿವಂತರಿಗೆ ಮತ್ತು ಅನೀತಿವಂತರಿಗೆ ಒಟ್ಟಿಗೆ ಶಿಕ್ಷಿಸುವರೇ? ದೇವರು ಎಲೀಯನನ್ನು ನೋಡಿಕೊಳ್ಳುವ ಯೋಜನೆಯನ್ನು ಮಾಡಿದ್ದರು.ಅವನಿಗೆ ಹಳ್ಳದ ನೀರು ಪಾನವಾಗಿರುವುದರಿಂದ ಹಳ್ಳದ ಕಡೆಗೆ ಕಳುಹಿಸಲ್ಪಟ್ಟನು, ಮತ್ತು ಕಾಗೆಗಳು ಅವನಿಗೆ ಪ್ರಾತ:ಕಾಲದಲ್ಲಿಯೂ ಸಾಯಂಕಾಲದಲ್ಲಿಯೂ ರೊಟ್ಟಿ, ಮಾಂಸ ಇವುಗಳನ್ನು ತಂದುಕೊಡುತ್ತಿದ್ದವು! ಅವುಗಳನ್ನು ಯಾರು ತಯಾರಿಸಿದರು, ಮತ್ತು ಕಾಗೆಗಳು ಅವುಗಳನ್ನು ಎಲ್ಲಿಂದ ತಂದವು? ಅದು ತಿಳಿಯದ ವಿಷಯ- ಆದರೆ, ದೇವರ ಹಸ್ತವು ದುಷ್ಟರಿಗೆ ಶಿಕ್ಷೆಯನ್ನು ದೇವರನ್ನು ಹಿಂಬಾಲಿಸುವವರಿಗೆ ಆಶೀರ್ವಾದವನ್ನು ತಂದಿತ್ತು! ನಮ್ಮ ದೇವರು ಯಾರು ಆತನಿಗೆ ನಂಬಿಗಸ್ಥರಾಗಿ ಸೇವೆಮಾಡುವರೋ? ಅವರನ್ನು ನೋಡಿಕೊಳ್ಳುವರು.

ಇಂಥ ಸಮಯದಲ್ಲಿ ಎಲೀಯನನ್ನು ಅಷ್ಟೇ ಅಲ್ಲದೇ, ಬೇರೆ ಪ್ರವಾದಿಗಳನ್ನೂ ಮತ್ತು ಇಸ್ರಾಯೇಲನಲ್ಲಿರುವ ಎಲ್ಲ ನೀತಿವಂತರನ್ನು ಸಹ ನೋಡಿಕೊಂಡರು.

* 1ಅರಸು 18:4

ನೀವು ದೇವರ ಸೇವೆ ಮಾಡಲು ಹಿಂಜರಿಯುವುದಕ್ಕೆ ನಿಮ್ಮಲ್ಲಿ ಯಾವ ಕಾರಣವದೆ.? ನಿಮಗೆ ಸರ್ವಶಕ್ತನಾದ ದೇವರ ಮೇಲೆ ನಂಬಿಕೆ ಇದೆಯಾ? ಏನೆಂದರೇ, ನೀವು ಆತನಿಗೋಸ್ಕರ ಸೇವೆಮಾಡುವಾಗ ಆತನು ನಿಮ್ಮನ್ನು ನೋಡಿಕೊಳ್ಳುವನು ಎಂಬುದಾಗಿ.



## ದಿನ -19

## ಯಾರು ದೇವರಿಗೆ ಮೊದಲಿನದನ್ನು ಮೀಸಲಿಡುವರೊ ಅಂಥವರಿಗೆ ದೇವರ ಹಸ್ತವು ಬಲಶಾಲಿಯಾಗಿ ಕಾರ್ಯವನ್ನು ಮಾಡುವುದು

* 1ಅರಸು17:7-24

ಈ ಹಿಂದೆ ನಾವು ನೋಡಿದ ಹಾಗೆ, ಬರಗಾಲದ ದಿನಗಳಲ್ಲಿ ದೇವರು ಎಲೀಯನಿಗೆ ಹಳ್ಳದಿಂದ ನೀರು ಮತ್ತು ಕಾಗೆಗಳ ಮೂಲಕ ರೊಟ್ಟಿ ಮತ್ತು ಮಾಂಸವನ್ನು ಒದಗಿಸಿದನು. ಕೆಲವು ದಿನಗಳಾದ ಮೇಲೆ ಆ ಹಳ್ಳವು ಬತ್ತಿಹೋದ ಮೇಲೆ ದೇವರು ಎಲೀಯನಿಗೆ ಹೇಳಿದ್ದೇನೆಂದರೆ, ವಚನ9 "ಆಗ ಯೊಹೋವನು ಅವನಿಗೆ ನೀನು ಇಲ್ಲಿಂದ ಚೀದೋನ್ಯರ ಚಾರೆಪ್ತಾ ಊರಿಗೆ ಹೋರಟುಹೋಗಿ ಅಲ್ಲಿ ವಾಸಿಸು. ನಿನ್ನನ್ನು ಸಾಕಬೇಕೆಂದು ಅಲ್ಲಿನ ಒಬ್ಬ ವಿಧವೆಗೆ ಅಜ್ಞಾ ಸಿದ್ದೇನೆ ದೇವರು ಅಜ್ಞಾ ಸಿದ ಮೇರೆಗೆ, ಎಲೀಯನು **ವಿಧೇಯ**ನಾಗಿ **ವಿಧ**ವೆಯನ್ನು **ಹುಡುಕಿಕೊಂಡು** ಚಾರೆಪ್ತಾ ಎಂಬ ಊರಿಗೆ ಹೋದನು. ದೇವರು ಅವನಿಗೆ ಆಹಾರವನ್ನು ಒದಗಿಸುವ ಯೋಜನೆಯನ್ನು ಹೊಂದಿದ್ದರು. ಇಸ್ರಾಯೇಲ್ ಜನರು ಯಾವ ರೀತಿ ಸಮಸ್ಯೆಯನ್ನು ಎದುರಿಸುತ್ತಿದ್ದರು ಎಂಬುದನ್ನು ಅವಳ ಜೀವನದ ಪರಿಸ್ಥಿತಿ ತೋರಿಸುತ್ತಿತ್ತು. ಅವರು ಕರ್ತನಾದ ದೇವರನ್ನು **ತ್ಯ**ಜಿಸಿ, ವಿಗ್ರಹಗಳನ್ನು ಆರಾಧಿಸುವವರಾದ್ದರಿಂದ, ಒಂದು ದಿನ ಹಾಲು ಜೇನು ಹರಿಯುವಂಥಹ ದೇಶದಲ್ಲಿ ಬರಗಾಲವು
ಪರಿಣಮಿಸಿತ್ತು.ಅಲ್ಲಿರುವಂಥಹ ಜನರಿಗೆ ಮರಣವು ಸಂಭವಿಸುತ್ತಿದ್ದಿರಬಹುದು. ಈ **ವಿಧ**ವೆಯ ಮತ್ತು ಅವಳ ಒಬ್ಬನೇ ಮಗನು ಸಹ ತಮ್ಮ ಕೊನೆಯ ಆಹಾರವನ್ನು ಬೇಯಿಸುವವರಾಗಿ, ನಂತರ ಅವರು ಜೀವಿಸುವರು ಎಂಬ ಭರವಸೆ ಹೊಂದಿರಲಿಲ್ಲ. ಅವಳ ಮಾತುಗಳು ವಚನ12 ರಲ್ಲಿ ನಾವು ನೋಡುತ್ತೇವೆ, ಅವಳು ಮತ್ತು ಅವಳ ಮಗ ಏನನ್ನೂ **ಎದುರು** ನೋಡು**ತ್ತಿ**ರಲಿಲ್ಲ ಆದರೇ, ಅವಳು ತನ್ನ ಮಗನೊಂದಿಗೆ ಕೊನೆಯ ಭೋಜನದ ನಂತರ ಸಾವನ್ನು ಮಾತ್ರ ಎದುರು ನೋಡುತ್ತಿದ್ದಳು, ಆಗ ಎಲೀಯನು ಅವಳ ಬಳಿಗೆ ಬಂದು ಕುಡಿಯಲು ಒಂದು ತಂಬಿಗೆ ನೀರನ್ನು ಕೊಡು ಎಂದು ಕೇಳುವನು, ಅವಳು ಕುಡಿಯಲು ನೀರನ್ನು ತರಲು ಹೋಗುವಾಗ, ಇನ್ನೊಂದು ಬೇಡಿಕೆಯನ್ನು ಅವಳ ಮುಂದೆ ಇಡುತ್ತಾನೆ, ಏನೆಂದರೇ, ನನಗೋಸ್ಕರ ಒಂದು ರೊಟ್ಟಿಯ ತುಂಡು ತೆಗೆದುಕೊಂಡು ಬಾ ಎಂಬುದಾಗಿ. ನಂತರ ಎಲೀಯನು ಪ್ರವಾದಿಸತ್ತಾನೆ.13ಆಗ ಎಲೀಯನು ಆಕೆಗೆ ಹೇದರಬೇಡ; ನೀನು ಹೇಳಿದಂತೆ **ಮಾಡು** ಆದರೆ ಮೊದಲು ಆದರಿಂದ ನನಗೋಸ್ಕರ ಒಂದು ಚಿಕ್ಕ ರೊಟ್ಟಿಯನ್ನು ಮಾಡಿಕೊಂಡು ಬಾ, ತರುವಾಯ ನಿನಗೂ ನಿನ್ನ ಮಗನಿಗೂ ಮಾಡಿಕೋ. 14ಇಸ್ರಾಯೇಲ್ ದೇವರಾದ ಯೆಹೋವನು ನಿನಗೆ-ನಾನು ದೇಶಕ್ಕೆ ಮಳೆಯನ್ನು ಕಳುಹಿಸುವವರೆಗೆ ನಿನ್ನ ಮಡಕೆಯಲ್ಲಿರುವ ಹಿಟ್ಟು ತೀರುವುದಿಲ್ಲ ಮೊಗೆಯಲ್ಲಿರುವ ಎಣ್ಣೆಯು ಮುಗಿದುಹೋಗುವುದಿಲ್ಲ ಎಂದು ಹೇಳುತ್ತಾನೆ ಅಂದನು.

ಒಂದು ವೇಳೆ ನಿಮಗೆ ಅವಳಿಗಿರು ವಂಥ ಪರಿಸ್ಥಿತಿ ಇದ್ದು, ಯಾರಾದರು ನಿಮಗೆ ಈ ರೀತಿ ಹೇಳಿದಾಗ ನಿಮ್ಮ ಅಭಿಪ್ರಾಯ ಏನಾಗಿರುತ್ತದೆ? ನಾನು ಯೋಚಿಸುವುದೇನೆಂದರೆ, ಯಾರಾದರು ನನ್ನನ್ನು ಮೋಸಗೋಳಿಸಬಹುದು ಅಥವಾ ಒಂದು ವೇಳೆ ಅವನು ಹೇಳಿದ ಹಾಗೆ ಆಗದೇ ಇದ್ದರೇ? ಒಂದು ವೇಳೆ ಆತನಿಗೆ ರೊಟ್ಟಿ ಮಾಡಿ ಕೊಟ್ಟ ಮೇಲೆ ಹಿಟ್ಟು ಮತ್ತು ಎಣ್ಣೆ ಮುಗಿದುಹೋದರೇ? ಆಗ ನಮ್ಮ ಪರಸ್ಥಿತಿ ಏನು? ಅಥವಾ ಮೊದಲು ನನ್ನ ಮಗನಿಗೋಸ್ಕರ ರೊಟ್ಟಿಯನ್ನು ಮಡಿ ಒಂದು **ವೇಳೆ** ಹಿಟ್ಟು ಮತ್ತು ಎಣ್ಣೆ ಉಳಿದರೆ ಮಾತ್ರ ಆತನಿಗೊಂದು ರೊಟ್ಟಿ ಮಾಡಿಕೊಬಹುದು, ಇಂಥಹ ಯೋಚನೆಗಳು ನಮಗೆ ಯಾವಾಗ ಬರುತ್ತವೆ ಅಂದರೆ ನಮ್ಮಲ್ಲಿ ಭಯ ಮತ್ತು ದೇವರ ಮೇಲೆ ಭರವಸೆ ಇಲ್ಲದಾಗ!

ಆದರೇ, ನಾವು ನೋಡಣ ಯಾವ ರೀತಿ ಈ ವಿಧವೆಯ ಪ್ರತ್ಯತ್ತರವಾಗಿತ್ತು;

ವಚನ 15:16

ಈ ಬಡ ವಧವೆಗೆ ದೇವರ ಮೇಲೆ ಬಹಳ ಭರವಸೆ ಇದ್ದುದರಿಂದ, ಆಕೆಯು ಎಲೀಯನ ನಿಯಮಗಳಿಗೆ ವಿಧೆಯಳಾದ್ದರಿಂದ ದೇವರು ಅವಳನ್ನು ಮತ್ತು ಅವಳ ಮಗನನ್ನು ಬರಗಾಲ ಮುಗಿಯುವವರೆಗೂ ಬಹಳ **ಉತ್ತಮವಾಗಿ** ನೋಡಿಕೊಳ್ಳುವ ಹಾಗೆ ಮಾಡಿದರು

ದೇವರು ಪರೀಕ್ಷಿಸುವಾಗ ನಿಮ್ಮ ನಂಬಿಕೆ ಮತ್ತು ಭರವಸೆ ಹೇಗಿರುತ್ತದೇ?

ದೇವರು ನಿಮ್ಮನ್ನು ಪರೀಕ್ಷಿಸಿದಾಗ ನಿಮ್ಮ ಅಭಿಪ್ರಾಯ ಏನಾಗಿರುತ್ತದೇ?

ನೀವು ಸಂದೇಹಪಡುವಿರಾ ಅಥವಾ ಭರವಸವಿಡುವಿರಾ?

ದೇವರಿಗೆ ಕಾಣಕೆ ಕೊಡುವುದರಲ್ಲಿ ನೀವು ಹೇಗಿದ್ದಿರಾ? ನಿಮ್ಮ ಅದಾಯದಲ್ಲಿ ದೇವರಿಗೆ ಕೊಡುವುದರಲ್ಲಿ ಮೊದಲನೆ ಸ್ಥಾನ ಮೀಸಲಿಟ್ಟಿದ್ದಿರಾ? ಅಥವಾ ನಿಮ್ಮ ಖರ್ಚುವೆಚ್ಚಗಳನ್ನು ತೆಗೆದು ನಂತರ ದೇವರಿಗೆ ಕೊಡುವುದನ್ನು ನಿರ್ಧರಿಸುವಿರಾ? ಅಥವಾ ಉಳಿದದ್ದನ್ನು ಕೊಡುವಿರಾ? ಸೈತಾನನ್ನು ನಮ್ಮನ್ನು ಹಿಂಜರಿವವರನ್ನಾಗಿ ಮಾಡುವನು ಮತ್ತು ನಮ್ಮ ಭವಿಷ್ಯದ ಬಗ್ಗೆ ಚಿಂತಿಸುವಹಾಗೆ ಮಾಡುವ ಮೂಲಕ ಅನೇಕ ವಿಚಾರಗಳನ್ನು ನಮ್ಮಲ್ಲಿ ಹಾಕುತ್ತಾನೆ, ಹೇಗೆಂದರೆ ನೀನೇ ನನ್ನನ್ನು ನೋಡಿಕೊಳ್ಳಬೇಕು, ನಿನಗೆ ಯಾರ ಸಹಾಯವೂ ಇಲ್ಲ, ದೇವರು ಮತ್ತು ಸಭೆಯು **ಸ್ವಾಥಿಯಾಗಿದ್ದಾರೆ**, ಅವರು ನಿನ್ನಿಂದ ನಿಶ್ಚಯವಾಗಿ ಎದುರು ನೋಡುತ್ತಾರೆ, ಹೇಗೆ ಮುಂತಾದವುಗಳ ಈ ವಿಧವೆಯು ಸಹ ಪ್ರವಾದಿಯ ಬಗ್ಗೆ ಈ ರೀತಿ ಯೋಚಿಸಬಹುದಾಗಿತ್ತು ಈತನು ಎಂಥ ಸ್ವಾರ್ಥವುಳ್ಳ ಮನುಷ್ಯನು ನೋಡು ಈತನು ಏನು ಹೇಳುತ್ತಾನೆ "ನಿನ್ನಲ್ಲಿರುವುದರಲ್ಲಿ ಮೊದಲು ನನಗೋಸ್ಕರ ಒಂದು ರೊಟ್ಟಿಯ ತುಂಡನ್ನು ಮಾಡಿ ತೆಗೆದುಕೊಂಡು ಬಾ ಮತ್ತು ನಂತರ ನಿನಗೆ ಮತ್ತು ನಿನ್ನ ಮಗನಿಗೆ ಮಾಡಿಕೊ" ಎಂಬುದಾಗಿ ಅವನಿಗೆ ಮೊದಲನೇ ಭಾಗ ಬೇಕಾಗಿತ್ತು ಅವನು ಹೇಳಲಿಲ್ಲ ಮೊದಲನೆ ಭಾಗವನ್ನು ನೀವು ಮಾಡಿಕೊಂಡು ತಿಂದು ನಂತರ ಉಳಿದದ್ದನ್ನು ನನಗೆ ಕೊಡು ಎಂದು ದೇವರು ನಿಮ್ಮಿಂದ ಮೊದಲನೆಯದನ್ನು ಮತ್ತು ಉತ್ತಮವಾದದ್ದನ್ನು ಬಯಸುವುದರಲ್ಲಿ ತಪ್ಪಾಗಿದ್ದಾರಾ? ದೇವರು



**ಸ್ವಾರ್ಥಿ** ಅಲ್ಲ. ನೀವು ಅತನಿಗೆ ಏನು ಕೊಡದೆ ಹೋದರೂ ಆತನು ಇರಬಲ್ಲನು ನೀವು ಹುಟ್ಟುವದಕ್ಕಿಂತ ಮುಂಚಿತವಾಗಿಯೂ ಆತನೇ ಎಲ್ಲವನೂ ನೋಡಿಕೋಳ್ಳುವವನಾಗಿದ್ದನು. ಆದರೆ, ನಿಮ್ಮ ಒಳಿತಿಗಾಗಿ, ಮೊದಲನೆಯದನ್ನು ಆತನಿಗೋಸ್ಕರ ಮೀಸಲಾಗಿಡಬೇಕೆಂದು ಆತನು ನಿಮ್ಮಿಂದ ಬಯಸುತ್ತಾನೆ. ಏಕೆಂದರೆ ಆತನಿಗೆ ಗೊತ್ತು ನಮ್ಮ ಪೂರ್ತಿ ಜೀವನ ನಿತ್ಯಜೀವನದವರಗೆ ನಾವು ದೇವರನ್ನು **ಪೂರ್ಣ** ಹೃದಯದಿಂದ ್ರೀತಿಸಿ ಆತನಿಗೆ ಮೊದಲಿನದನ್ನು ಮೀಸಲಿಡುವುದರ ಮೇಲೆ ಅವಲಂಬಿತವಾಗಿರುತ್ತದೆ.

ಹಾಗೆಯೇ ಎಲೀಯನು ಈ ವಿಧವೆಯ ಮನೆಯಲ್ಲಿ ನೆಲೆಸಿದ ಸಮಯದಲ್ಲಿ ಇನ್ನೊಂದು ಅದ್ಭುತವಾಗುತ್ತದೆ. ಅವಳ ಒಬ್ಬನೇ ಮಗ ಅಸ್ವಸ್ಥನಾಗಿ ಸಾವನ್ನಪ್ಪುವುದರಿಂದ ಬಹಳ ಹೀನವಾದ ದು:ಖದ ಪರಿಸ್ಥಿತಿ ಏರ್ಪಡುತ್ತದೆ. ಎಲೀಯನು ಸಹ ಸತ್ತುಹೋದ ಈ ಹುಡುಗನಿಗೊಸ್ಕರ ಬಹಳ ದು:ಖಪಡುವವನಾಗಿ, ಮತ್ತು ಆ ಹುಡುಗನನ್ನು ತನ್ನ ಮೇಲಿರುವ ಕೋಣೆಗೆ ತೆಗೆದುಕೊಂಡು ಹೋಗಿ ಅಳುತ್ತಾ ಮೂರು ಸಾರಿ ಹುಡುಗನ ಮೇಲೆ ಬೋರ್ಲುಬಿದ್ದು ಮೊರೆಯಿಟ್ಟನು, ಮತ್ತು ದೇವರು ಅವನ ಪ್ರಾಣವನ್ನು ತಿರುಗಿ ಬರುವಂತೆ ಮಾಡಿದರು. ಇದರಿಂದ ಅ ವಿಧವೆಗೆ ಎಲಿಯನು ದೇವರ ಪ್ರವಾದಿಯೆಂದು ಮತ್ತು ಆತನು ದೇವರ ಮಾತುಗಳನ್ನು ಆಡುತ್ತಾನೆ ಎಂಬುದಾಗಿ ಅರ್ಥವಾಗುತ್ತದೆ.

<u>ಯೆರೆಮಿಯ 17:5-9</u> ಅಧ್ಯಯನ ಮಾಡಿ ನೋಡಿರಿ, ದೇವರ ಆಶೀರ್ವಾದವು ಮತ್ತು ಶಾಪವು ನಾವು ಯಾವುದರ ಮೇಲೆ ಭರವಸೆವಿಡುತ್ತೇವೆಯೋ ಆದರ ಮೇಲೆ ಅವಲಂಬಿತವಾಗಿರುತ್ತದೆ. ನಾವು ದೇವರಿಗೆ ಮೊದಲನೆ ಸ್ಥಾನವನ್ನು ಮೀಸಲಾಗಿಟ್ಟಿದ್ದೆವಾ? ದೇವರಿಗೆ ಮೊದಲಿನದನ್ನು ಮಿಸಲಿಡಲು ನಮ್ಮಲ್ಲಿ ಯಾವ ತರಹದ ನೆಪಗಳು ಅಡ್ಡಿಮಾಡುತ್ತಿವೆ? ನಿಮ್ಮ ಆದಯದಲ್ಲಿ ದೇವರಿಗೆ ಮೊದಲನೆಯದನ್ನು ಮತ್ತು ಉತ್ತಮವಾದದ್ದನ್ನು ಕೊಡುವಿರಾ? ನಿಮ್ಮ ಜೀವನದ ಸಂಧಿಗ್ದ ಪರಿಸ್ಥಿತಿಯಲ್ಲೂ ಇದೇ ರೀತಿ ಮಾಡುವಿರಾ? ಈ ವಿಧವೆಯು ಎದುರಿಸಿದ ಹಾಗೆ ನಮ್ಮಲ್ಲಿಯೂ ಸಹ ಇಂಥಹ ಕಷ್ಟಗಳನ್ನು ಎದುರಿಸಬೇಕಾಗಿ ಬರುವುದು ಎಂಬುದನ್ನು ನೆನ ನಲ್ಲಿಡಬೇಕಾದ ಅಂಶವಾಗಿದೆ, ಮತ್ತು ಆಕೆಯು ದೇವರಿಗೆ ಮೊದಲಿನದನ್ನು ಕೊಡಲು ನಿರ್ಧರಿಸಿದಳು. (ದೇವರ ಮನುಷ್ಯನಿಗೆ ಕೊಡುವ ಮೂಲಕ)

ದೇವರು ನಿಮ್ಮ ಅವಶ್ಯಕತೆಗಳನ್ನು ಪೂರೈಸುವನೆಂದು ನಿಮ್ಮ ಅನುಭವದಿಂದ ದೇವರ ನಂಬಿಗಸ್ಥಿಕೆಯನ್ನು ಅನುಭವಿಸಿದ್ದಿರಾ? ಅಂಥಹ ಅನುಭವಗಳನ್ನು ಪಟ್ಟಿಮಾಡಿ ದೇವರನ್ನು ಸ್ತುತಿಸಿರಿ.

ದೇವರಿಗೆ ಮೊದಲಿನದನ್ನು ಮೀಸಲಿಡಲು ನಮಗೆ ಯಾವುದು ಅಡ್ಡಿಮಾಡದ ಹಾಗೆ ಬದ್ಧತೆಯನ್ನು ಮಾಡಿಕೊಳ್ಳಿ